ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 27 ಶುಕ್ರವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 308 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅಪಾಯದ ಸ್ಥಿತಿಯಲ್ಲಿ ವರುಣಾ ಮೇಲ್ಗಾಲುವೆ

● ದುಷ್ಕರ್ಮಿಗಳ ಕೃತ್ಯದಿಂದ ನಾಲೆ ಕಂಬದಲ್ಲಿ ಬಿರುಕು ● ಪೊಲೀಸರು ಪತ್ರ ಬರೆದು 14 ದಿನವಾದರೂ ಕ್ರಮ ಕೈಗೊಳ್ಳದ ಅಧಿಕಾರಿಗಳು, ಜನಪ್ರತಿನಿಧಿಗಳು

ಮೈಸೂರು, 26(ಎಂಕೆ)– ಸುಮಾರು 80 ಸಾವಿರ ಎಕರೆ ಕೃಷಿ ಪ್ರದೇಶಕ್ಕೆ ನೀರಾವರಿ ಸೌಕರ್ಯ ಒದಗಿಸುವ ಮೂಲಕ ಲಕ್ಷಾಂತರ ಕುಟುಂಬಗಳಿಗೆ ಆಸರೆಯಾಗಿರುವ ವರುಣಾ ನಾಲೆಯ ಮೇಲ್ಗಾಲುವೆ ಕಂಬದಲ್ಲಿ ಬಿರುಕು ಕಾಣಿಸಿಕೊಂಡಿದ್ದು, ಅಪಾಯ ಸ್ಥಿತಿ ತಲುಪಿದೆ...!

ಮೈಸೂರಿನ ರಿಂಗ್ ರಸ್ತೆ ಸಮೀಪ ಹಳೇ ಕೆಸರೆ ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯ ಮೇಲೆ ಹಾದು ಹೋಗಿರುವ ವರುಣಾ ನಾಲೆ(ದೇವರಾಜ ಅರಸು ನಾಲೆ) ಕೆಳಗೆ ಕಿಡಿಗೇಡಿಗಳು ತಾಮ್ರಕ್ಕಾಗಿ ವೈಯರ್‌ಗಳನ್ನು ನಿರಂತರವಾಗಿ ಸುಡುತ್ತಿರುವುದರಿಂದ ಈ ಆತಂಕದ ಪರಿಸ್ಥಿತಿ ನಿರ್ಮಾಣವಾಗಿದೆ. ಬೇಕು–ಬೇಡದ ನಡುವೆ 1979ರಲ್ಲಿ ನಿರ್ಮಾಣವಾಗಿ ಮೈಸೂರಿನ ನಾಲ್ಕು ಹಾಗೂ ಮಂಡ್ಯದ ಒಂದು ತಾಲೂಕು ಸೇರಿ ಐದು ತಾಲೂಕುಗಳ ಕೃಷಿ ಭೂಮಿಗೆ ನೀರುಣಿಸುತ್ತಿರುವ ವರುಣಾ ನಾಲೆಯು ಸುಮಾರು 82 ಗ್ರಾಮಗಳ ಕೃಷಿ ಭೂಮಿಗೆ ಜಲಸೆಲೆಯಾಗಿದೆ.

126 ಕಿ.ಮೀ. ಉದ್ದದ ನಾಲೆಯಲ್ಲಿ 1.8 ಕಿ.ಮೀ ಮೇಲ್ಗಾಲುವೆ(ಅಕ್ವಾಡಕ್) ಇದ್ದು, ಹಳೆ ಕೆಸರೆ ಸಮೀಪದಲ್ಲಿ ದುಷ್ಟರ ದಂಧೆಗೆ ವರುಣಾ ನಾಲೆಯ ಆಧಾರವೇ ನಲುಗುತ್ತಿದೆ. ಪ್ರತೀ ನಿತ್ಯ ನಾಲೆ ಕೆಳಗೆ ಅದರಲ್ಲೂ ಕಂಬಕ್ಕೆ ಹೊಂದಿಕೊಂಡಂತೆ ಲೋಡ್‌ಗಟ್ಟಲೆ ತ್ಯಾಜ್ಯವಸ್ತುಗಳು, ತಾಮ್ರಕ್ಕಾಗಿ ವೈಯರ್‌ಗಳನ್ನು ಸುಡಲಾಗಿದೆ. ಇದರಿಂದ ಪರಿಸರಕ್ಕೆ ಹಾನಿಯಾಗುವುದರ ಜೊತೆಗೆ ನಾಲೆ ಕಂಬವೊಂದರ ಕಾಂಕ್ರೀಟ್ ಹಾಗೂ ಕಬ್ಬಿಣದ ರಾಡುಗಳು ಸೀಳಿ ಹೊರ ಚಾಚಿದ್ದು, ಅಪಾಯದ ಸ್ಥಿತಿಗೆ ತಲುಪಿದೆ.



ಮೈಸೂರು ಹೊರ ವಲಯದ ಹಳೇ ಕೆಸರೆ ಬಳಿ ಹಾದುಹೋಗಿರುವ ವರುಣಾ ನಾಲೆಯ ಪಿಲ್ಲರ್ ಬಳಿ ತ್ಯಾಜ್ಯವನ್ನು ಸುಡುತ್ತಿರುವುದರಿಂದ ನಾಲೆಯ ಪಿಲ್ಲರ್ ಬಿರುಕು ಬಿಟ್ಟು ಅಪಾಯದ ಸ್ಥಿತಿಯಲ್ಲಿರುವದನ್ನು ಕಾಣಬಹುದು.

ಫೆ.14ರಂದು ನರಸಿಂಹರಾಜ ಠಾಣೆ ಪೊಲೀಸರು, ಕಾವೇರಿ ನೀರಾವರಿ ನಿಗಮ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆದು ವಸ್ತುಸ್ಥಿತಿ ಕುರಿತು ಮಾಹಿತಿ ನೀಡಿದ್ದರ ಬಗ್ಗೆ ಫೆ.15ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ 'ವರುಣಾ ನಾಲೆ ಕೆಳಗೆ ತ್ಯಾಜ್ಯ ವಸ್ತುಗಳಿಗೆ ಬೆಂಕಿ; ನಾಲೆ ಕಂಬದಲ್ಲಿ ಬಿರುಕು' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಆದರೆ, ವರುಣಾ ನಾಲೆ ಕಂಬದಲ್ಲಿ ಬಿರುಕು ಕಾಣಿಸಿಕೊಂಡು ತಿಂಗಳೇ ಕಳೆದರೂ ಅರಿವಿಲ್ಲದಂತೆ ಕಾವೇರಿ ನೀರಾವರಿ ನಿಗಮ ಮಂಡಳಿ ವರ್ತಿಸುತ್ತಿರುವುದು ಬೇಜವಾಬ್ದಾರಿ ವರ್ತನೆ.

ಸ್ಥಳ ಪರಿಶೀಲನೆ ನಡೆಸಿ, ಪೊಲೀಸರು ಪತ್ರ ಬರೆದು 14 ದಿನಗಳ ಕಳೆದರೂ ಸ್ಥಳಕ್ಕೆ ಯಾರೊಬ್ಬ ಸಂಬಂಧಪಟ್ಟ ಅಧಿಕಾರಿಯಾಗಲೀ, ಜನಪ್ರತಿನಿಧಿಯಾಗಲಿ, ಫಲಾನುಭವಿ ರೈತ ಸಂಘಟನೆಗಳಾಗಲೀ ಭೇಟಿ ನೀಡದಿರುವುದು ಆಡಳಿತ ಜಡ್ಡಿ ಹಿಡಿದಿದೆ ಎಂಬುದಕ್ಕೆ ಸಾಕ್ಷಿ ಎಂಬಂತಾಗಿದೆ. ವರುಣಾ ನಾಲೆ ಒಂದು ಕಂಬ ಸುಟ್ಟು ಕರಕಲಾಗಿ ಕಾಂಕ್ರೀಟ್ ಜೊತೆಗೆ ಕಬ್ಬಿಣದ ರಾಡ್‌ಗಳು ಹೊರಬಂದಿವೆ. ಅಲ್ಲದೆ ಕಾಂಕ್ರೀಟ್ ಕಿತ್ತು ಬಂದಿದ್ದು, ಅಪಾಯ ಮುನ್ಸೂಚನೆ ಗೋಚರವಾಗುತ್ತಿದೆ.

ನಾಲೆಯುದ್ದಕ್ಕೂ ತ್ಯಾಜ್ಯದ ರಾಶಿ: ಹಳೆ ಕೆಸರೆ, ರಾಜೀವ್‌ನಗರ ಸೇರಿದಂತೆ ನಾಲೆಯುದ್ದಕ್ಕೂ ನಾಲೆಯ ಕೆಳಗಡೆ ರಾಶಿ ರಾಶಿ ಕಸ ಸುರಿಯಲಾಗಿದೆ. ನಾಲೆಯ ಕೆಳಗೆ, ಅಕ್ಕ–ಪಕ್ಕದಲ್ಲಿ ಪ್ಲಾಸ್ಟಿಕ್ ಪದಾರ್ಥಗಳನ್ನು ನಿರಂತರವಾಗಿ ಸುಡಲಾಗುತ್ತಿದೆ. ಅಲ್ಲದೆ ನೀರಿಗೂ ತ್ಯಾಜ್ಯವನ್ನು ಸುರಿಯಲಾಗುತ್ತಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ನೋ ರೆಸ್ಪಾನ್ಸ್: ವರುಣಾ ನಾಲೆ ಕಂಬದಲ್ಲಿ ಬಿರುಕು ಬಿಟ್ಟಿರುವ ಕುರಿತು ಪ್ರತಿಕ್ರಿಯೆ ಪಡೆಯಲು, ವರುಣಾ ಕಾಲುವೆ ನಿರ್ಮಾಣ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಎ.ಎಸ್.ಭಾಸ್ಕರ್ ಅವರಿಗೆ ಸಾಕಷ್ಟು ಬಾರಿ ಕರೆ ಸ್ವೀಕರಿಸುವ ಸೌಜನ್ಯ ತೋರಲಿಲ್ಲ.

ಯಾರೊಬ್ಬರೂ ಬಂದಿಲ್ಲ

“ ಠಾಣೆಯಿಂದ ಮುನ್ನೆಚ್ಚರಿಕೆ ವಹಿಸುವಂತೆ ಪತ್ರ ಬರೆದು ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇನೆ. ಆದರೆ, ಇದುವರೆಗೂ ಮಂಡಳಿಯಿಂದ ಯಾರೋಬ್ಬರು ಪ್ರತಿಕ್ರಿಯೆ ನೀಡಿಲ್ಲ. ಪರಿಸರಕ್ಕೂ ಹಾನಿಯಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಾ ಮಂಡಳಿಗೂ ತಿಂಗಳ ಹಿಂದೆಯೇ ಪತ್ರ ಬರೆಯಲಾಗಿತ್ತು ಆದರೆ ಯಾವುದೇ ಕ್ರಮವಹಿಸಿಲ್ಲ.

–ಸುನೀಲ್, ಸಬ್‌ಇನ್ಸ್‌ಪೆಕ್ಟರ್ ನರಸಿಂಹರಾಜ ಪೊಲೀಸ್ ಠಾಣೆ

ಮೈಸೂರಲ್ಲಿ ಮೇ 31ಕ್ಕೆ ರಾಷ್ಟ್ರಮಟ್ಟದ ಸಪ್ತಸ್ವರ ಕರೋಕೆ ಗಾಯನ ಸೀಸನ್–3

ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿಗಳಿಂದ ಪೋಸ್ಟರ್ ಬಿಡುಗಡೆ



ರಾಷ್ಟ್ರಮಟ್ಟದ ಸಪ್ತಸ್ವರ ಕರೋಕೆ ಗಾಯನ ಸೀಸನ್–3 ಪೋಸ್ಟರ್ ಅನ್ನು ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಬಿಡುಗಡೆ ಮಾಡಿದರು.

ಮೈಸೂರು,ಫೆ.26(ಜಿಎ)–ಸರ್ವಕಲ ಸೇವಾ ಟ್ರಸ್ಟ್ ಮತ್ತು ಪಂಚಾಯತ್ ಗ್ರಾಮೀಣಾ ಅಭಿವೃದ್ಧಿ ರೈತರ ಸೇವಾ ಸಮಿತಿ ಸಹಯೋಗದೊಂದಿಗೆ ನಡೆಯಲಿರುವ ರಾಷ್ಟ್ರಮಟ್ಟದ ಸಪ್ತಸ್ವರ ಕರೋಕೆ ಗಾಯನ ಸೀಸನ್–3 ಪೋಸ್ಟರ್ ಅನ್ನು ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಬಿಡುಗಡೆ ಮಾಡಿದರು.


ನಂತರ ಮಾತನಾಡಿದ ಅವರು, ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರಲ್ಲದೆ, ಶ್ರೀ ಯೋಗ ನರಸಿಂಹ ಸ್ವಾಮಿಯ ಆಶೀರ್ವಾದ ಕಾರ್ಯಕ್ರಮಕ್ಕೆ ಸದಾ ಇರಲಿದೆ. ಹೊಸ ಗಾಯಕ, ಗಾಯಕಿಯರು ಆದಷ್ಟು ಬೇಗ ನೋಂದಣಿ ಮಾಡಿಕೊಂಡು ವೇದಿಕೆಯನ್ನು ನಿಮ್ಮದಾಗಿಸಿಕೊಂಡು ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ ಎಂದು ಹಾರೈಸಿದರು.

ಮೇ.31ರಂದು ಹೂಟಗಳ್ಳಿಯಲ್ಲಿರುವ ಅಮೃತೇಶ್ವರ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಶಾಸಕ ಜಿ.ಟಿ.ದೇವೇಗೌಡ, ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಅಧ್ಯಕ್ಷ ಡಾ.ನಾಗರಾಜು ವಿ.ಬೈರಿ, ಚಂದ್ರಶೇಖರ್ ರಾವ್, ಟ್ರಸ್ಟ್ ಮುಂಬೈ ಅಧ್ಯಕ್ಷ ಶ್ರೀದೇವಿ ರಾವ್, ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗಾಗಿ ದೂ. 9902175996, 9740176567ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ತ್ಯಾಗರಾಜರು–ಶ್ರೀ ಪುರಂದರದಾಸರ ಆರಾಧನೆ ಪ್ರಯುಕ್ತ ಫೆ.27ರಿಂದ ವಾರ್ಷಿಕ ಸಂಗೀತೋತ್ಸವ



ನಿರಂಜನ ದಿಂದೋಡಿ



ವೈಭವ್ ರಮಣಿ



ಶಿವಶಂಕರ ಸ್ವಾಮಿ



ಶರತ್ ಕೌಶಿಕ್




ನಿಶಾ ರಾಜಗೋಪಾಲನ್



ಅದಿತಿ ಕೃಷ್ಣ



ಬಿ.ಎಸ್.ಪ್ರಶಾಂತ್



ಓಂಕಾರ್ ರಾವ್

ಮೈಸೂರು, ಫೆ.26– ಮೈಸೂರಿನ ಎನ್.ಆರ್. ಮೊಹಲ್ಲಾ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಶ್ರೀ ತ್ಯಾಗರಾಜ ಮತ್ತು ಶ್ರೀ ಪುರಂದರದಾಸರ ಆರಾಧನಾ ಪ್ರಯುಕ್ತ ಫೆ.27ರಿಂದ ವಾರ್ಷಿಕ ಸಂಗೀತೋತ್ಸವ ಕಾರ್ಯಕ್ರಮವನ್ನು ಫೋರ್ಟ್ ಮೊಹಲ್ಲಾದ ಶ್ರೀ ಶೃಂಗೇರಿ ಶಂಕರ ಮಠದ ಗುರು ಭವನದಲ್ಲಿ ಏರ್ಪಡಿಸಲಾಗಿದೆ.

ಫೆ.27 ರಂದು ಸಂಜೆ 6.15ಕ್ಕೆ ವಿದ್ವಾನ್ ನಿರಂಜನ್ ದಿಂದೋಡಿ ಅವರಿಂದ ಗಾಯನ, ಪಕ್ಕವಾದ್ಯದಲ್ಲಿ ವಿದ್ವಾನ್ ವೈಭವ್ ರಮಣಿ–ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

ಫೆ.28 ರಂದು ಸಂಜೆ 6.15ಕ್ಕೆ ವಿದುಷಿ ನಿಷಾ ರಾಜಗೋಪಾಲನ್‌ರಿಂದ ಗಾಯನ, ಪಕ್ಕವಾದ್ಯದಲ್ಲಿ ವಿದುಷಿ ಅದಿಥಿ ಕೃಷ್ಣಪ್ರಕಾಶ್ –ಪಿಟೀಲು, ವಿದ್ವಾನ್ ಬಿ.ಎಸ್. ಪ್ರಶಾಂತ್ –ಮೃದಂಗ, ವಿದ್ವಾನ್ ಓಂಕಾರ್‌ರಾವ್–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

ಮಾ.1 ರಂದು ಬೆಳಗ್ಗೆ 9 ರಿಂದ 11 ರವರೆಗೆ ನಾದಸ್ವರ ಮತ್ತು ಶ್ರೀ ತ್ಯಾಗರಾಜರ ಶ್ರೀ ಪುರಂದರದಾಸರ ಕೃತಿಗಳನ್ನು ಹಾಡಲು ಅವಕಾಶ ಕಲ್ಪಿಸಲಾಗಿದೆ. ಬೆಳಗ್ಗೆ 11 ರಿಂದ 12 ರವರೆಗೆ ವಿದ್ವಾಂಸರುಗಳಾದ ವಿದುಷಿ ರೇವತಿ ಕಾಮತ್, ವಿದ್ವಾನ್ ವಿ.ಆರ್. ರಾಜಗೋಪಾಲ್ ಅವರಿಗೆ ಸನ್ಮಾನ ಸಮಾರಂಭ ನಡೆಯಲಿದೆ.

ಮಧ್ಯಾಹ್ನ 12 ರಿಂದ 1.15 ರವರೆಗೆ ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನ, ಮಧ್ಯಾಹ್ನ 1.15ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1.30ಕ್ಕೆ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.26–ಕೇಬಲ್ ಅಳವಡಿಕೆ ಕಾಮಗಾರಿ ಕೆಲಸದ ನಿಮಿತ್ತ ಫೆ.28 ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ರಾಯಲ್ ಮಾರ್ಟ್, ಧೃತಿ ಅಪಾರ್ಟ್ಮೆಂಟ್, ವಾಟಿಕ ಅಪಾರ್ಟ್‌ಮೆಂಟ್, ಬ್ರಿಗೇಡ್ ಅಪಾರ್ಟ್‌ಮೆಂಟ್, ಗೋಪಾಲಗೌಡ ಆಸ್ಪತ್ರೆ ಹಾಗೂ ಸುತ್ತ–ಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಹಳೇ ಬಡಾವಣೆಗಳ ನಿವಾಸಿಗಳಲ್ಲಿ ಇ–ಖಾತಾ ಆತಂಕ!

ದಾಖಲಾತಿ ಇಲ್ಲದವರಿಗೆ ಪರ್ಯಾಯ ವ್ಯವಸ್ಥೆಗೆ ಆಗ್ರಹ

ಮೈಸೂರು,ಫೆ.26–ಪೂರ್ವಜರ ಕಾಲದ ಆಸ್ತಿ ಮಾಲೀಕರಲ್ಲಿ ಇ–ಖಾತಾ ಆತಂಕ ಉಂಟಾಗಿದೆ. ಇದನ್ನು ಯಾವ ರೀತಿ ನಿವಾರಣೆ ಮಾಡುತ್ತೀರಾ ಎಂದು ಬಿಜೆಪಿ ಮುಖಂಡ ಹಾಗೂ ಮಾಜಿ ಮೇಯರ್ ಸಂದೇಶ್ ಸ್ವಾಮಿ ಪ್ರಶ್ನಿಸಿದ್ದಾರೆ.



ಸಂದೇಶ್‌ಸ್ವಾಮಿ

ರಾಜ ಮಹಾರಾಜರ ಕಾಲದಿಂದಲೂ ಪಡುವಾರಹಳ್ಳಿ, ಒಂಟಿಕೊಪ್ಪಲು, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ತೊಣಚಿಕೊಪ್ಪಲು, ಕನ್ನೇಗೌಡನ ಕೊಪ್ಪಲು, ಕ್ಯಾತಮಾರನಹಳ್ಳಿ ಮತ್ತಿತರ ಬಡಾವಣೆಗಳಲ್ಲಿ ಜನ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಆಗಿನ ಕಾಲಕ್ಕೆ ಬಾಯಿ ಮಾತಿನ ವ್ಯವಹಾರವಷ್ಟೇ ಇತ್ತು. ನಿವೇಶನ ಖರೀದಿಗೆ ನೋಂದಾಯಿತ ಪತ್ರ ಮಾಡಿಸುತ್ತಿರಲಿಲ್ಲ. ಆದ್ದರಿಂದ ಇ–ಖಾತೆಗೆ ಅಗತ್ಯವಾಗಿರುವ ಕ್ರಯಪತ್ರ, ಋಣಭಾರ ಪತ್ರ, ಖಾತೆ ಮತ್ತು ಕಂದಾಯ ಪ್ರತಿ, ಅನುಮೋದಿತ ನಕ್ಷೆ, ತೆರಿಗೆ ಪಾವತಿ ರಸೀದಿ ಇವುಗಳನ್ನು ಒದಗಿಸುವುದು ಅಸಾಧ್ಯ ಎಂಬುದನ್ನು ಪಾಲಿಕೆ ಅಧಿಕಾರಿಗಳು ಮನಗಾಣಬೇಕು. ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿ ಶೇ.40ರಷ್ಟು ಅಂದಿನ ಗ್ರಾಮ ಠಾಣೆ ಮತ್ತು ರೆವಿನ್ಯೂ ಬಡಾವಣೆಗಳಿವೆ. ಆಸ್ತಿಗಳ ರಕ್ಷಣೆಗೆ ಸರ್ಕಾರ ಹೊಸ ತಂತ್ರಜ್ಞಾನ ಅಳವಡಿಸಿರುವುದು ಸ್ವಾಗತಾರ್ಹ. ಆದರೆ ಈ ಆನ್‌ಲೈನ್ ನೋಂದಾಯಿತ ವ್ಯವಸ್ಥೆಯಲ್ಲಿ ಎಲ್ಲಾ ದಾಖಲಾತಿಗಳನ್ನು ಅಪ್ ಲೋಡ್ ಮಾಡಿದರೆ ಮಾತ್ರ ಫಲಾನುಭವಿಗಳಿಗೆ ಇ–ಖಾತೆ ಸಿಗಲಿದೆ. ಒಂದೇ ಒಂದು ದಾಖಲಾತಿ ಅಪ್‌ಲೋಡ್ ಮಾಡದಿದ್ದರೂ ಪ್ರಕ್ರಿಯೆ ಪೂರ್ಣಗೊಳ್ಳುವುದಿಲ್ಲ. ಹೀಗಿರುವಾಗ ಅತ್ಯಂತ ಹಳೆಯ ಬಡಾವಣೆಗಳು ಉದ್ದೇಶಿತ ಯೋಜನೆಗಳಿಂದ ಹೊರಗುಳಿಯಲಿವೆ. ನರಸಿಂಹರಾಜ ಕ್ಷೇತ್ರದಲ್ಲೇ ಶೇ.60ರಷ್ಟು ಗ್ರಾಮಠಾಣಾ ಬಡಾವಣೆಗಳಿದ್ದು, ತೆರಿಗೆ ಕಟ್ಟಿಸಿಕೊಂಡು ಖಾತೆ ಮಾಡಿಕೊಡದಿರುವ ಕಾರಣ ಇಲ್ಲಿನ ನಿವಾಸಿಗಳು ಅತಂತ್ರರಾಗುತ್ತಾರೆ. ಒಂದೇ ಯೋಜನೆಯೊಳಗೆ ಎಲ್ಲರನ್ನು ತರದೆ, ಹಳೇ ಬಡಾವಣೆಗಳು ಮತ್ತು ಹೊಸ ಬಡಾವಣೆಗಳಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಬೇಕು ಎಂದು ಮನವಿ ಮಾಡಿದ್ದಾರೆ.

ಮೈಸೂರು ಪಾಲಿಕೆ ಮಾಜಿ ಆಯುಕ್ತ ಡಾ.ಪಿ.ಬೋರೇಗೌಡ ನಿಧನ



ಮೈಸೂರು: ಮೈಸೂರಿನ ಕುವೆಂಪುನಗರದ ಅನಿಕೇತನ ರಸ್ತೆಯ ನಿವಾಸಿ, ನಿವೃತ್ತ ಹಿರಿಯ ಕೆಎಎಸ್ ಅಧಿಕಾರಿ, ಮೈಸೂರು ನಗರಪಾಲಿಕೆಯ ನಿವೃತ್ತ ಆಯುಕ್ತರು, ಸೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರು, ವಿಶೇಷ ಜಿಲ್ಲಾಧಿಕಾರಿಯಾಗಿಯೂ ಆಗಿದ್ದ ಡಾ.ಪಿ.ಬೋರೇಗೌಡ ಗುರುವಾರ ಬೆಳಗ್ಗೆ ನಿಧನರಾದರು. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಇವರ ಪತ್ನಿ ಕಳೆದ 4 ತಿಂಗಳ ಹಿಂದೆಯಷ್ಟೇ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ವರ್ಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯೆ ಗುರುವಾರ ಸಂಜೆ ಸ್ವಗ್ರಾಮ ಬನ್ನೂರು ಹೋಬಳಿಯ ಕೇತುಪುರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ. ಇವರ ನಿಧನಕ್ಕೆ ವಿಶ್ರಾಂತ ಕುಲಪತಿ ಎನ್.ಎಸ್. ರಾಮೇಗೌಡ, ಪ್ರಸಾರಾಂಗದ ನಿವೃತ್ತ ನಿರ್ದೇಶಕ ಕೆ.ಟಿ.ವೀರಪ್ಪ ಸೇರಿದಂತೆ ಹಲವು ಗಣ್ಯರು ಮೃತರ ಆತ್ಮಕ್ಕೆ ಸಂತಾಪ ಸೂಚಿಸಿದ್ದಾರೆ.

ಇಂದು ವಿಶೇಷಚೇತನರಿಗೆ ತ್ರಿಚಕ್ರ ವಾಹನ ವಿತರಣೆ

ಮೈಸೂರು: ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ವಿವಿಧ ಉದ್ಯೋಗದಾತರ ಸಹಯೋಗದಲ್ಲಿ ಮೈಸೂರು ಜಿಲ್ಲೆಯ ವಿಶೇಷ ಚೇತನರಿಗೆ ವಿವಿಧ ಉದ್ಯೋಗದಾತರ ಪ್ರಯೋಜಿತ ಯಾಂತ್ರಿಕ ತ್ರಿಚಕ್ರ ವಾಹನ ವಿತರಣಾ ಕಾರ್ಯಕ್ರಮವನ್ನು ಫೆ.27 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ.

ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್ ಸಿ. ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಕೆ. ಹರೀಶ್ ಗೌಡ, ಜಿ.ಟಿ. ದೇವೇಗೌಡ, ರವಿಶಂಕರ್.ಡಿ, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ಎಸ್, ಕೆ.ವಿವೇಕಾನಂದ, ಕೆ.ಶಿವಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಭಾಗವಹಿಸಲಿದ್ದಾರೆ.

ಮಾ.1ರಂದು ಮೈಸೂರಲ್ಲಿ ರೇಣುಕಾಚಾರ್ಯ ಜಯಂತಿ

ಮೈಸೂರು,ಫೆ.26(ಜಿಎ)–ಜಿಲ್ಲಾಡಳಿತ, ರೇಣುಕಾಚಾರ್ಯ ಜಯಂತ್ಯೋತ್ಸವ ಸಮಿತಿ ವತಿಯಿಂದ ಮಾ.1ರಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ರೇಣುಕಾಚಾರ್ಯ ಜಯಂತಿ ಆಚರಿಸಲಾಗುತ್ತಿದೆ ಎಂದು ಸಮಿತಿ ಅಧ್ಯಕ್ಷ ಶ್ರೀಶೈಲ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಮನೆ ಜಪದಕಟ್ಟೆ ಮಠದ ಶ್ರೀ ಡಾ.ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ರಾಯಚೂರಿನ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿವಿಯ ನಿವೃತ್ತ ಪ್ರಾಧ್ಯಾಪಕಿ ಡಾ.ಮೀನಾಕ್ಷಿ ಖಂಡಿಮಠ ಮತ್ತು ಅಂಕಣಕಾರರಾದ ಡಾ.ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ದಯಾನಂದ್, ಜ್ಞಾನಜ್ಯೋತಿ, ಬೀರೇಶ್, ಮಾಲಿನಿ ಉಪಸ್ಥಿತರಿದ್ದರು.

ಯಾವುದೇ ಗೊಂದಲ ಸೃಷ್ಟಿಸಲ್ಲ: ಬೆಂಬಲಿಗರಿಂದ 'ಮುಂದಿನ ಸಿಎಂ' ಘೋಷಣೆ; ಅಂತರ ಕಾಯ್ದುಕೊಂಡ ಜಿ.ಪರಮೇಶ್ವರ್

ಬೆಂಗಳೂರು, ಫೆ.26– ಗೃಹ ಸಚಿವ ಜಿ. ಪರಮೇಶ್ವರ್ ಅವರು ತುಮಕೂರಿನಲ್ಲಿ ತಮ್ಮನ್ನು ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸುವ ತಮ್ಮ ಬೆಂಬಲಿಗರು ಎತ್ತಿದ್ದ ಘೋಷಣೆಗಳಿಂದ ದೂರ ಉಳಿದಿದ್ದಾರೆ ಮತ್ತು ಯಾವುದೇ ನಿರ್ಧಾರವು ಪಕ್ಷದ ಹೈಕಮಾಂಡ್‌ಗೆ ಬಿಟ್ಟಿದ್ದು, ಆ ಹುದ್ದೆಗಾಗಿ ಊಹಾಪೋಹ ಅಥವಾ ಲಾಬಿಗೆ ಉತ್ತೇಜನ ನೀಡುವುದಿಲ್ಲ ಎಂದು ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ, ತಮ್ಮ ಬೆಂಬಲಿಗರು ಎತ್ತಿದ ಘೋಷಣೆಗಳಲ್ಲಿ ತಮ್ಮ ಪಾತ್ರವಿಲ್ಲ ಮತ್ತು ಪಕ್ಷದ ನಾಯಕತ್ವವು ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದರು.

ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರು ನಡೆಸುತ್ತಿರುವ ಲಾಬಿಯ ಕುರಿತ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ನಾನು ಇನ್ಮುಂದೆ ಯಾವುದೇ ಗೊಂದಲ ಸೃಷ್ಟಿಸಲು ಸಿದ್ಧನಿಲ್ಲ. ನಮ್ಮ ಹೈಕಮಾಂಡ್ ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತದೆ. ನಾನು ಯಾವುದೇ ಲಾಬಿ ಮಾಡುವುದಿಲ್ಲ. ನಿನ್ನೆ ನಾನು ಹೇಳಿದ್ದನ್ನು ನೀವು ಕೇಳಲಿಲ್ಲವೇ, ನಾನು ದೆಹಲಿಗೆ ಹೋಗುವ ಕುರಿತು ಯಾರೋ ಕೇಳಿದರು. ನಾನು ದೆಹಲಿಗೆ ಹೋಗಲಿಲ್ಲ. ಅಷ್ಟೇ ಎಂದು ಹೇಳಿದರು.

ಅಂತಹ ನಿರ್ಧಾರಗಳನ್ನು ಕಾಂಗ್ರೆಸ್ ಹೈಕಮಾಂಡ್‌ಗೆ ಬಿಡಲಾಗಿದೆ ಹಿತೈಷಿಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಬಹುದಾದರೂ, ಅವರು ಹಾಗೆ ಮಾಡದಂತೆ ತಡೆಯುವುದು ನಾನು ಅವರನ್ನು ನಿರುತ್ಸಾಹಗೊಳಿಸಿದಂತಾಗುತ್ತದೆ ಎಂದು ಸಮರ್ಥಿಸಿಕೊಂಡರು.

'ನಮ್ಮ ಹಿತೈಷಿಗಳು ಇಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿರಬಹುದು. ಹಾಗೆ ಮಾಡಬೇಡಿ ಎಂದು ನಾನು ಅವರಿಗೆ ಹೇಗೆ ಹೇಳಲಿ, ನಾನು ಅವರಿಗೆ ಹಾಗೆ ಮಾಡಬೇಡಿ ಎಂದು ಹೇಳಿದ್ದೇನೆ. ಆದರೆ ಇದೆಲ್ಲದರಲ್ಲೂ ನಾನು ಹೇಳಿದುತ್ತೆ, ನಾನು ಈ ಗೊಂದಲ ಮೂಡಿಸುವುದಿಲ್ಲ ಅಥವಾ ಪ್ರೋತ್ಸಾಹಿಸುವುದಿಲ್ಲ ಎಂದು ಅವರು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.2.2026 ಶುಕ್ರವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್, ಪಾರ್ಕಿನ್ ಸನ್ಸ್, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಬಿಳಿಮುಟ್ಟು, ಯಾವುದೇ ವಿಧವಾದ ತ್ವಚೆಯ ಸಮಸ್ಯೆ ಬಗ್ಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ

■ **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯ ರಥಾರೋಹಣ ಮಹೋತ್ಸವ, ರಾತ್ರಿ ವೃಷಭಾರೋಹಣ, ಸ್ಥಳ: ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಹಳೇ ಸಂತೇಪೇಟೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಿದ್ವತ್–2ಕೆ26, ರಾಜ್ಯ ಮಟ್ಟದ ಅಂತರ ಕಾಲೇಜು ಬಿಜ್‌ಟೆಕ್ ಎಕ್ಸ್‌ಟ್ರಾವಗಂಜಾ ಸೀಸನ್–18, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು: ಸಿ.ನವೀನ್ ಚಂದರ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ.ನಾಗರಾಜು, ಪ್ರಿನ್ಸಿಪಾಲ್ ಡಾ.ಎಸ್.ಮರೀಗೌಡ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಶ್ರೀ ಮಂಟೇಸ್ವಾಮಿ, ಶ್ರೀ ರಾಚಪ್ಪಾಜಿ, ಶ್ರೀ ದೊಡ್ಡಮ್ಮತಾಯಿ ದೇವಸ್ಥಾನ :** ಶ್ರೀ ಘನನೀಲಿ ಸಿದ್ದಪ್ಪಾಜಿ ದೇವಸ್ಥಾನದ 10ನೇ ವರ್ಷದ ವಾರ್ಷಿಕೋತ್ಸವ, 22ನೇ ವರ್ಷದ ಕಂಡಾಯ ಉತ್ಸವ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನ, ಗಾಯತ್ರಿಪುರಂ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ :** ಆಯುರ್‌ಪೇಟೆಂಟ್–2026 ಕಾರ್ಯಾಗಾರ, ಉದ್ಘಾಟನೆ : ಆಯೂಷ್ ಆಯುಕ್ತ ಡಾ. ಸುನೀಲ್ ಪನ್ವಾರ್, ಸಾನ್ನಿಧ್ಯ : ಸ್ವಾಮಿ ಯುಕ್ತೇಶಾನಂದ ಮಹಾರಾಜ್, ಮುಖ್ಯ ಅತಿಥಿಗಳು : ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ. ಸದಾಶಿವೇಗೌಡ, ಪ್ರಾಸ್ತಾವಿಕ ನುಡಿ : ಕುವೆಂಪು ವಿವಿ ವಿಶ್ರಾಂತ ಕುಲಪತಿ ಕೆ. ಚಿದಾನಂದಗೌಡ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ಶ್ರೀವತ್ಸ, ಸ್ಥಳ: ಸೆಮಿನಾರ್ ಹಾಲ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಬೆಳಗ್ಗೆ 10 ರಿಂದ.

■ **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಅರಿವು ಸಂಶೋಧನಾ ವೇದಿಕೆ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಚಿಂತನ ಚಿತ್ತಾರ :** ಡಾ. ಅನ್ನಪೂರ್ಣ ಅವರ ಎರಡು ಕೃತಿಗಳ ಲೋಕಾರ್ಪಣೆ, ಕೃತಿ ಬಿಡುಗಡೆ : ಯೋಜನಾ ನಿರ್ದೇಶಕ ಪ್ರೊ. ಎನ್.ಎಂ. ತಳವಾರ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಕವನ ಸಂಕಲನ ಕುರಿತು : ಪ್ರೊ. ಕವಿತಾ ರೈ, ಕಥಾ ಸಂಕಲನ ಕುರಿತು : ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ, ಉಪಸ್ಥಿತರು : ಚಿಂತನ ಚಿತ್ತಾರದ ನಿಂಗರಾಜು ಚಿತ್ತಣ್ಣನವರ್, ಸಾದರ ಸ್ವೀಕಾರ : ಪ್ರೊ. ಸಿ.ಪಿ. ಸಿದ್ಧಾಶ್ರಮ, ಪ್ರೊ. ಕೃಷ್ಣಮೂರ್ತಿ ಹನೂರು, ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್, ಡಾ. ಶೈಲಾ, ಪ್ರೊ. ಹಾ.ತಿ. ಕೃಷ್ಣೇಗೌಡ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಕಿಶೋರ್ ರಾಚಯ್ಯ ಅವರಿಂದ ಕ್ರಾಫ್ಟ್ ಯುವರ್ ಕಮ್ಯೂನಿಕೇಷನ್ ಕುರಿತು ಉಪನ್ಯಾಸ, ಅಧ್ಯಕ್ಷತೆ : ಡಾ.ಎನ್.ಎಸ್. ಹರಿನಾರಾಯಣ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಗೃಹ ವಿಜ್ಞಾನ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಗೌರವ ಅತಿಥಿಗಳು : ಹಾವೇರಿ ವಿವಿ ಕುಲಪತಿ ಪ್ರೊ. ಸುರೇಶ್ ಹೆಚ್. ಜಂಗಮಶೆಟ್ಟಿ, ಸಮಾರೋಪ ಭಾಷಣ : ಬಾಗಲಕೋಟೆ ತೋಟಗಾರಿಕೆ ವಿವಿ ಕುಲಪತಿ ಪ್ರೊ. ವಿಷ್ಣುವರ್ಧನ, ಕರಾಮುವಿವಿ ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್, ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಸೆನೆಟ್ ಭವನ, ಮೈಸೂರು ವಿವಿ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಸ್ವರಾಮೃತ ಮೆಲೋಡಿಸ್ :** ಸಂಗೀತ ಪ್ರೇಮಿಗಳ ಆರಾಧ್ಯ ದೈವ ಪದ್ಮವಿಭೂಷಣ ಡಾ. ಎಸ್.ಪಿ. ಬಾಲಸುಬ್ರಮಣ್ಯಂ ಅವರು ಹಾಡಿದ ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಸುಮಧುರ ಚಿತ್ರಗೀತೆಗಳ ಗಾಯನ ಸಂಜೆ ಮಾಮರವೆಲ್ಲೋ ಕೋಗಿಲೆ ಎಲ್ಲೋ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಲಕ್ಷ್ಮೀಪುರಂ, ಸಂಜೆ 5ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** 24ನೇ ವಾರ್ಷಿಕೋತ್ಸವ ಪ್ರಯುಕ್ತ ಸಂಗೀತ, ತ್ಯಾಗರಾಜ ಮತ್ತು ಪುರಂದರ ದಾಸರ ಆರಾಧನಾ ಮಹೋತ್ಸವ, ವಿದ್ವಾನ್ ಪಿಟೀಲು ಚೌಡಯ್ಯ ಜಯಂತಿ ಆಚರಣೆ, ಉದ್ಘಾಟನೆ : ಆದಿತ್ಯ ಆಸ್ಪತ್ರೆ ಮ್ಯಾನೇಜಿಂಗ್ ಟ್ರಸ್ಟಿ ಡಾ.ಎನ್.ಚಂದ್ರಶೇಖರ್, ವಿದ್ವಾನ್ ಶ್ರೀನಿಧಿ ಆರ್.ಮಾಥೂರ್ ಅವರಿಂದ ವಯೋಲಿನ್ ವಾದನ, ವಿದ್ವಾನ್ ಅದಮ್ಯ ರಮಾನಂದ–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ.

■ **ಅಭಿಯಂತರರು:** ರಾಷ್ಟ್ರೀಯ ರಂಗ ಉತ್ಸವ, ಅಭಿಯಂತರರು ಕಲಾವಿದರಿಂದ ಮರಣ ಮೃದಂಗ (ಕನ್ನಡ) ನಾಟಕ ಪ್ರದರ್ಶನ, ರಚನೆ–ನಿರ್ದೇಶನ: ರಾಜೇಂದ್ರಕಾರಂತ್, ಸ್ಥಳ: ಕಿರುರಂಗಮಂದಿರ, ಸಂಜೆ 7ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಕೆ.ಶ್ರೇಯಾ ಹಾಗೂ ಎಂ.ಎ. ಶೋಭಾ, ವ್ಯಾಖ್ಯಾನ–ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯುವವಾಣಿ :ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ ಭಾಗವಹಿಸುತ್ತಾರೆ, ಪ್ರಸ್ತುತಿ– ದಿಗ್ವಿಜಯ್ ಬಿ., 9.05 ಕ್ಯಾನ್ಸರ್ ಕುರಿತ ಮಿಥ್ಯೆಗಳು, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ನಮ್ಮ ಆರೋಗ್ಯ, 9.40 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮೈಸೂರು ಎಂ. ನಾಗರಾಜ್– ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್. ಶಿವಶಂಕರ್ ಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಲಲಿತಾ ಹರಿಪ್ರಿಯಾ–ದ್ವಂದ್ವ ಗಾಯನ, 4.00 ಮಹಿಳಾರಂಗ– ಸಾಧನಾ ಶಿಖರ One ride One nation ಅಭಿಯಾನದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಸೈಕಲ್ ಯಾನ ಮಾಡಿರುವ ಪೂಜಾ ಹರೀಶ್ ಅವರೊಂದಿಗೆ ಮತುಕತೆ, ಪ್ರಸ್ತುತಿ–ಕೀರ್ತನಾ .ವಿ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, ಹವಾಮಾನ ಮಿತ್ರ – ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ, ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ. ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಸಂಧ್ಯಾರಾಗ–81ರ ಹರಯದ ಉತ್ಸಾಹಿ ಈಜುಪಟು ಆರ್. ನಾಗೇಶ್ ಅವರೊಂದಿಗೆ ಆತ್ಮೀಯ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಜಿ. ಎನ್. ಮಂಜುನಾಥ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎಸ್. ವಿ. ಸಹನಾ – ವೀಣಾವಾದನ, 10.00 ಆಕಾಶವಾಣಿ ಸಂಗೀತ ಸಮ್ಮೇಳನ –ಲಘು ಸಂಗೀತ, ಅಗ್ನಿಭಾ ಬಂಡೋಪಾಧ್ಯಾಯ ರಬೀಂದ್ರ ಸಂಗೀತ್, ಶ್ರೀಮತಿ ಶ್ರೀರಾಧ ಬಂಡೋಪಾಧ್ಯಾಯ–ಆಧುನಿಕ್ ಲಘು ಸಂಗೀತ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 27 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 308 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಉದ್ಯೋಗಾಕಾಂಕ್ಷಿಗಳ ಹೋರಾಟಕ್ಕೆ ಮಣಿದ ಸರ್ಕಾರ: ವಿವಿಧ ಇಲಾಖೆಯ

56432 ಹುದ್ದೆ ಭರ್ತಿ

■ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ■ 30 ದಿನಗಳಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭ ■ ರೋಹಿತ್ ವೇಮುಲಾ ಕಾಯ್ದೆಗೂ ಅನುಮೋದನೆ

ಬೆಂಗಳೂರು: ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ನಡೆಸಿದ ಭಾರೀ ಪ್ರತಿಭಟನೆಗೆ ಮಣಿದ ರಾಜ್ಯ ಸರ್ಕಾರ, ನೇಮಕಾತಿ ಸಂಬಂಧ ಗುರುವಾರ ಮಹತ್ವದ ತೀರ್ಮಾನ ಕೈಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 56 ಸಾವಿರ ಹುದ್ದೆ ಭರ್ತಿಗೆ ಒಪ್ಪಿಗೆ ಸೂಚಿಸಿದೆ ಎಂದು ಸಭೆಯ ಬಳಿಕ ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.


ಹೆಚ್.ಕೆ.ಪಾಟೀಲ್

ಒಳಮೀಸಲಾತಿ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಹಿಂದಿನ ಶೇ.50ರಷ್ಟು ಮೀಸಲಾತಿ ಮಿತಿಯ ಅಡಿಯಲ್ಲೇ 56,432 ಹುದ್ದೆಗಳಿಗೆ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು 30 ದಿನಗಳಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಸಂಪುಟ ನಿರ್ಣಯಿಸಿದ್ದು, ಈ ಸಂಬಂಧ ಇಲಾಖೆಗಳಿಗೂ ಸ್ಪಷ್ಟ ಸೂಚನೆ ನೀಡಲಾಗಿದೆ ಎಂದರು.

ಮೀಸಲಾತಿ ಮಿತಿ ಶೇ.50 ಮೀರದಂತೆ ಕ್ರಮ: ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಹಾಗೂ ಪರಿಶಿಷ್ಟ ಪಂಗಡ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಹೆಚ್ಚಳದೊಂದಿಗೆ ಒಟ್ಟಾರೆ ಶೇ.56 ಮೀಸಲಾತಿಯಡಿ ನೇಮಕಾತಿ ನಡೆಸುವ ಚಿಂತನೆ ಇತ್ತು. ಆದರೆ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿ, ಅಂತಿಮವಾಗಿ ಮೀಸಲಾತಿ ಮಿತಿ ಶೇ.50 ಮೀರದಂತೆ ನೆನೆಗುದಿಗೆ ಬಿದ್ದಿದ್ದ ನೇಮಕಾತಿಗೆ ಹೊಸದಾಗಿ ಅಧಿಸೂಚನೆ ಹೊರಡಿಸಲು ಸರ್ಕಾರ ನಿರ್ಧರಿಸಿದೆ. ■ 10ನೇ ಪುಟಕ್ಕೆ

ಒಳಮೀಸಲಾತಿ ಮಸೂದೆಗೆ ರಾಜ್ಯಪಾಲರ ಅಂಕಿತ


ಒಳ ಮೀಸಲಾತಿ ಮಸೂದೆಗೆ ಅಂಗೀಕಾರ ನೀಡುವಂತೆ ದಲಿತ ಸಮುದಾಯದ ಸಚಿವರುಗಳು ಗುರುವಾರ ಲೋಕಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಲ್ಲಿ ಮನವಿ ಮಾಡಿದರು.

ಬೆಂಗಳೂರು, ಫೆ26– ದಲಿತ ಸಮುದಾಯದ ಸಚಿವರು ತಮ್ಮನ್ನು ಭೇಟಿ ಮಾಡಿದ ಬೆನ್ನಲೇ ರಾಜ್ಯಪಾಲ ಥಾವರ್ ಚೆಂದ್ ಗೆಹ್ಲೋಟ್, ಹಲವು ದಿನಗಳಿಂದ ಬಾಕಿ ಉಳಿಸಿಕೊಂಡಿದ್ದ ಪರಿಶಿಷ್ಟ ಜಾತಿಗಳ(ಒಳ ಮೀಸಲಾತಿ) ವಿಧೇಯಕ 2025ಕ್ಕೆ ಗುರುವಾರ ಸಹಿ ಹಾಕಿದ್ದಾರೆ.

ಒಳ ಮೀಸಲಾತಿ ವಿಚಾರದಲ್ಲಿ ಗೊಂದಲ ಏರ್ಪಟ್ಟಿದ್ದರಿಂದ ರಾಜ್ಯಪಾಲರು ಈ ಮಸೂದೆಗೆ ಸಹಿ ಹಾಕದೆ ಹಾಗೆ ಇಟ್ಟುಕೊಂಡಿದ್ದರು. ಆದರೆ ದಲಿತ ಸಚಿವರ ನಿಯೋಗ ಇಂದು ರಾಜ್ಯಪಾಲರನ್ನು ಭೇಟಿಯಾಗಿ ಒಳ ಮೀಸಲಾತಿ ಮಸೂದೆಗೆ ಅಂಕಿತ ಹಾಕುವಂತೆ ಮನವಿ ಮಾಡಿತ್ತು. ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆ ಪ್ರಸ್ತಾಪಿಸಿ, ಒಳ ಮೀಸಲಾತಿ ಗೊಂದಲದಿಂದ ನೇಮಕಾತಿ ವಿಳಂಬವಾಗುತ್ತಿದೆ ಎಂದು ರಾಜ್ಯಪಾಲರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಈ ವೇಳೆ ಅಂಕಿತ ಹಾಕುವುದಾಗಿ ಸಚಿವರ ನಿಯೋಗಕ್ಕೆ ರಾಜ್ಯಪಾಲರು ಭರವಸೆ ನೀಡಿದ್ದರು. ಇದೀಗ ಎಸ್ಸಿ ಒಳ ಮೀಸಲಾತಿ ಮಸೂದೆಗೆ ರಾಜ್ಯಪಾಲರು ಸಹಿ ಹಾಕಿದ್ದಾರೆ.

ನ್ಯಾ.ನಾಗಮೋಹನ್ ದಾಸ್ ವರದಿಯಲ್ಲಿ 5 ವಿಂಗಡಣೆ ಮಾಡಲಾಗಿತ್ತು. ಆದರೆ ರಾಜ್ಯ ಸರ್ಕಾರ, 3 ಗುಂಪುಗಳಾಗಿ ವರ್ಗೀಕರಣ ಮಾಡಿದೆ. 18 ಜಾತಿಗಳಿರುವ ಎಡಗೈ ಸಮುದಾಯಕ್ಕೆ(SC Left) ಶೇ.6ರಷ್ಟು ಮೀಸಲಾತಿ ಹಾಗೂ 20 ಜಾತಿಗಳಿರುವ ಬಲಗೈ ಸಮುದಾಯಕ್ಕೆ (SC Right) ಶೇ.6ರಷ್ಟು ಮೀಸಲಾತಿ. ಇನ್ನು 63 ಜಾತಿಗಳಿರುವ ಇತರ ಸಮುದಾಯಕ್ಕೆ ಶೇ.5 ಮೀಸಲಾತಿ ನೀಡುವ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ತಂಬಾಕು ಬೆಳೆಗಾರರ ಹಿತ ಕಾಯಲು

ಶೀಘ್ರ ಕೇಂದ್ರ ವಾಣಿಜ್ಯ ಸಚಿವರ ಭೇಟಿ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭರವಸೆ


ಸಾಲಿಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

ಸಾಲಿಗ್ರಾಮ, ಫೆ.26– ಬೆಲೆ ಕುಸಿತದಿಂದ ಕಂಗಾಲಾಗಿರುವ ತಂಬಾಕು ಬೆಳೆಗಾರರ ಹಿತ ಕಾಯುವ ನಿಟ್ಟಿನಲ್ಲಿ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಶೀಘ್ರದಲ್ಲೇ ಭೇಟಿ ಮಾಡಿ, ಚರ್ಚಿಸಲಾಗುವುದು ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಪಟ್ಟಣದಲ್ಲಿ ಗುರುವಾರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರು ನಿರಂತರ ಕಾರ್ಯಕ್ರಮಗಳ ಒತ್ತಡದಲ್ಲಿದ್ದಾರೆ. ಹೀಗಾಗಿ ಮಾ.1ರಂದು ಅವರನ್ನು ಭೇಟಿ ಮಾಡಿ ಚರ್ಚಿಸುತ್ತೇನೆ. ಕಳೆದ ವರ್ಷ ತಂಬಾಕು ಬೆಲೆ ಕುಸಿತವಾದಾಗ ರೈತರ ನಿಯೋಗದೊಂದಿಗೆ ಭೇಟಿ ಮಾಡಿ ಪಿಯೂಷ್ ಗೋಯಲ್ ಅವರಿಗೆ ಸಮಸ್ಯೆ ಮನವರಿಕೆ ಮಾಡಿಕೊಟ್ಟಿದ್ದರಿಂದ ಉತ್ತಮ ಬೆಲೆ ದೊರೆತಿತ್ತು. ಇದೀಗ ಮತ್ತೆ ತಂಬಾಕು ಬೆಲೆ ಕುಸಿತಗೊಂಡಿದ್ದು, ಈ ಬಾರಿಯೂ ತಂಬಾಕಿಗೆ ನ್ಯಾಯಯುತ ದರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಸರ್ಕಾರ ಕಿತ್ತೊಗೆಯಲು ಪ್ರತಿಜ್ಞೆ ಮಾಡಿ: ರಾಜ್ಯ ಕಾಂಗ್ರೆಸ್ ಸರ್ಕಾರ ಅತ್ಯಂತ ಭ್ರಷ್ಟ ಹಾಗೂ ಲೂಟಿಕೋರ ಸರ್ಕಾರವಾಗಿದೆ. ಅಧಿಕಾರದ ಆಸೆಗಾಗಿ ರಾಜ್ಯದ ಅಭಿವೃದ್ಧಿಯನ್ನೇ ಮರೆತು ಕುರ್ಚಿಗಾಗಿ ಕಿತ್ತಾಡುತ್ತಿರುವ ಈ ಸರ್ಕಾರವನ್ನು ಕಿತ್ತೊಗೆಯಲು ಪ್ರತಿಜ್ಞೆ ಮಾಡುವಂತೆ ಜೆಡಿಎಸ್ ಕಾರ್ಯಕರ್ತರಿಗೆ ಕರೆ ಕೊಟ್ಟರು.

ಗುತ್ತಿಗೆದಾರರಿಗೆ ಸಂಕಷ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ 37 ಸಾವಿರ ಕೋಟಿ ಬಾಕಿ ಉಳಿಸಿಕೊಂಡು ಗುತ್ತಿಗೆದಾರರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ನಾನು ಹಾಗೂ ನನ್ನ ಸಹೋದರ ಹೆಚ್.ಡಿ. ರೇವಣ್ಣನವರು ಅಧಿಕಾರದಲ್ಲಿದ್ದಾಗ ಗುತ್ತಿಗೆದಾರರಿಗೆ ಸಕಾಲಕ್ಕೆ ಹಣ ಪಾವತಿಸಿದ್ದೆವು. ನಾನು ಹೆಚ್ಚಿನ ತೆರಿಗೆ ವಿಧಿಸದೆ ಬರುವ ಆದಾಯದಲ್ಲೇ ಸಹಸ್ರಾರು ರೈತರ 25 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಸಾಲ ಮನ್ನಾ ಮಾಡಿದ್ದೆ. ರಾಜ್ಯದ ಜನತೆಯ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡದ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸಿ ಉತ್ತಮ ಸರ್ಕಾರವನ್ನು ಅಧಿಕಾರಕ್ಕೆ ತನ್ನಿ ಎಂದು ಮನವಿ ಮಾಡಿದರು.

ಸಾ.ರಾ.ಮಹೇಶ್ ಏನು ತಪ್ಪು ಮಾಡಿದ್ದರು!: ಕೆ.ಆರ್.ನಗರವನ್ನು ಅಭಿವೃದ್ಧಿ ಕಡೆಗೆ ಕೊಂಡೊಯ್ದಿದ್ದ ಮಾಜಿ ಸಚಿವ ಸಾ.ರಾ.ಮಹೇಶ್ ಅವರನ್ನೇ ಸೋಲಿಸಿದ್ದೀರಲ್ಲಾ. ಅವರೇನು ತಪ್ಪು ಮಾಡಿದ್ದರು. ಪ್ರತಿನಿತ್ಯ ತೆರಿಗೆ ಹಣ ಲೂಟಿ ಹೊಡೆಯುವವರನ್ನು ಆಯ್ಕೆ ■ 10ನೇ ಪುಟಕ್ಕೆ

ಜನರ ಸಮಸ್ಯೆಗೆ ಸ್ಪಂದಿಸುವ ಸರ್ಕಾರ ತನ್ನಿ

ನಿರುದ್ಯೋಗ ಸಮಸ್ಯೆ ನಿವಾರಿಸಲು, ರೈತರ ಬೆಳೆಗೆ ಉತ್ತಮ ಬೆಂಬಲ ಬೆಲೆ ಕೊಡಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಯುವನಿಧಿ ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ಯುವ ಜನತೆಗೆ ಉದ್ಯೋಗ ಕೊಡಲು ಸಾಧ್ಯವಾಗಿಲ್ಲ. ನಾನು ಮೊದಲ ಬಾರಿ ಸಿಎಂ ಆಗಿದ್ದಾಗ 56 ಸಾವಿರ ಮಂದಿಗೆ ಉದ್ಯೋಗ ಕಲ್ಪಿಸಿದ್ದೆ. ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದರ ಜೊತೆಗೆ ಸಾಕಷ್ಟು ಉದ್ಯೋಗ ನೀಡಿದ್ದೆ. ದೇಶದಲ್ಲಿ ತೆರಿಗೆ ಕಟ್ಟುವಲ್ಲಿ 2ನೇ ಸ್ಥಾನದಲ್ಲಿರುವ ಸಂಪದ್ಭರಿತ ರಾಜ್ಯ ಕರ್ನಾಟಕದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ ಕಾರಕ್ಕೆ ಯಾವುದಕ್ಕೆ ಆದ್ಯತೆ ನೀಡಬೇಕೆಂಬುದು ಗೊತ್ತಿಲ್ಲ ಎಂದು ಟೀಕಿಸಿದರು.

ಒಂದೇ ವರ್ಷದಲ್ಲಿ ನಟಿ ರನ್ಯಾರಾವ್ ಕದ್ದು ಸಾಗಿಸಿದ್ದು 127 ಕೆಜಿ ಚಿನ್ನ!

ಬೆಂಗಳೂರು, ಫೆ.26– ಕನ್ನಡ ನಟಿ ರನ್ಯಾ ರಾವ್ ಹಾಗೂ ಇಬ್ಬರು ಸಹಚರರ ವಿರುದ್ಧ ಚಿನ್ನ ಕಳ್ಳಸಾಗಣೆ ಮತ್ತು ಹಣಕಾಸು ಅಕ್ರಮ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಬುಧವಾರ ಚಾರ್ಜ್‌ಶೀಟ್ ಸಲ್ಲಿಸಿದೆ.

ಇಡಿ ಮಾಹಿತಿ ಪ್ರಕಾರ, ಮಾರ್ಚ್ 2024ರಿಂದ ಮಾರ್ಚ್ 2025ರವರೆಗೆ ಸುಮಾರು 127.287 ಕೆ.ಜಿ. ವಿದೇಶೀ ಮೂಲದ ಚಿನ್ನ (ಮೌಲ್ಯ ರೂ. 102. 55 ಕೋಟಿ) ಭಾರತಕ್ಕೆ ಕಳ್ಳಸಾಗಣೆ ಮಾಡಲಾಗಿದೆ.



ಈ ಚಿನ್ನವನ್ನು ದೇಶೀಯ ಮಾರುಕಟ್ಟೆಯಲ್ಲಿ ವಿತರಿಸಿ, ನಗದು ರೂಪದಲ್ಲಿ ಪಡೆದ ಹಣವನ್ನು ಹವಾಲಾ ಮಾರ್ಗ ಹಾಗೂ ವಿವಿಧ ಬ್ಯಾಂಕ್ ಖಾತೆಗಳ ಮೂಲಕ ಕಾನೂನುಬದ್ಧ ವ್ಯವಹಾರಗಳಂತೆ ತೋರಿಸಲಾಗಿದೆ ಎಂದು ಆರೋಪಿಸಲಾಗಿದೆ.

ಈ ಪ್ರಕರಣವು ಡಿಆರ್‌ಐ ನೀಡಿದ ದೂರಿನ ಆಧಾರದಲ್ಲಿ ಸಿಬಿಐ ದಾಖಲಿಸಿದ ಪ್ರಕರಣದಿಂದ ಆರಂಭಗೊಂಡಿದ್ದು, ಪಿಎಂಎಲ್‌ಎ ಅಡಿಯಲ್ಲಿ ಇಡಿ ತನಿಖೆ ಕೈಗೊಂಡಿದೆ. ರನ್ಯಾ ರಾವ್ ಅವರನ್ನು 2025ರ ಮಾರ್ಚ್ 3ರಂದು ■ 10ನೇ ಪುಟಕ್ಕೆ

ನ್ಯಾಯಾಂಗ ಭ್ರಷ್ಟಾಚಾರ ವಿಷಯ ಒಳಗೊಂಡ

ಎನ್‌ಸಿಇಆರ್‌ಟಿ ಪಠ್ಯಕ್ಕೆ ನಿಷೇಧ

● ಸುಪ್ರೀಂಕೋರ್ಟ್ ಮಹತ್ವದ ಆದೇಶ ● ಮುದ್ರಿತ ಪಠ್ಯ ಪುಸ್ತಕ ಜಪ್ತಿಗೂ ತಾಕೀತು ● ಡಿಜಿಟಲ್ ಪ್ರತಿಗಳ ಮುಟ್ಟುಗೋಲಿಗೂ ಸೂಚನೆ

ಬೆಂಗಳೂರು, ಫೆ.26(ಕೆಎಂಶಿ)– ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ನ್ಯಾಯಾಂಗ ಭ್ರಷ್ಟಾಚಾರ ಕುರಿತು ಉಲ್ಲೇಖಿಸಿರುವ ಪಠ್ಯಪುಸ್ತಕವನ್ನು ಸುಪ್ರೀಂಕೋರ್ಟ್ ನಿಷೇಧಿಸಿದೆ.



ಮುದ್ರಿತಗೊಂಡಿರುವ ಪಠ್ಯಪುಸ್ತಕಗಳನ್ನು ಮುಟ್ಟುಗೋಲಿಗೆ ಆದೇಶ ನೀಡಿರುವುದಲ್ಲದೆ, ಡಿಜಿಟಲ್ ಪ್ರತಿಗಳ ಮುಟ್ಟುಗೋಲಿಗೂ ಸೂಚಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ತತ್‌ಕ್ಷಣದಿಂದಲೇ ನ್ಯಾಯಾಲಯದ ಆದೇಶ ಪಾಲನೆ ಮಾಡಬೇಕು ತಪ್ಪಿದಲ್ಲಿ ಗಂಭೀರ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದೆ. ಎನ್‌ಸಿಇಆರ್‌ಟಿಯ 8ನೇ ತರಗತಿಯ ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿನ ನ್ಯಾಯಾಂಗ ಭ್ರಷ್ಟಾಚಾರ ವಿಚಾರವನ್ನು ಸ್ವಯಂ ಪ್ರೇರಿತವಾಗಿ ಕೈಗೆತ್ತಿಕೊಂಡ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ನ್ಯಾಯಪೀಠ, ಈ ಪ್ರಕರಣ ವಕೀಲ ಸಮುದಾಯ ಮತ್ತು ನ್ಯಾಯಾಧೀಶರ ವರ್ಗ ಎರಡನ್ನೂ ವಿಚಲಿತರನ್ನಾಗಿ ಮಾಡಿದೆ ಎಂದಿದ್ದಾರೆ.

ನ್ಯಾಯಾಂಗದ ಘನತೆ ಕುಗ್ಗಿಸಲು ಉದ್ದೇಶಪೂರ್ವಕವಾಗಿ ನಡೆಸಲಾದ ಕೃತ್ಯ ಎಂದಿರುವ ಪೀಠ, ಇಂತಹ ದುಷ್ಕೃತ್ಯ ಕ್ರಿಮಿನಲ್ ನ್ಯಾಯಾಂಗ ನಿಂದನೆ ವ್ಯಾಪ್ತಿಗೆ ಬರುತ್ತದೆ ಎಂದಿದೆ.

ಎನ್‌ಸಿಇಆರ್‌ಟಿ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿದೆ, ಈ ಕುರಿತು ತನಿಖೆ ನಡೆಸಲು ನ್ಯಾಯಾಲಯ ಬಯಸುತ್ತದೆ. ಇದನ್ನು ನಿಯಂತ್ರಿಸದಿದ್ದರೆ ನ್ಯಾಯಾಂಗದ ಮೇಲಿನ ಜನರ ನಂಬಿಕೆಯನ್ನು ಹಾಳು ಮಾಡುತ್ತದೆ. ಸಂಬಂಧಪಟ್ಟವರನ್ನು ಶಿಕ್ಷೆಗೆ ಒಳಪಡಿಸದೆ ಬಿಡುವುದಿಲ್ಲ ಎಂದು ಎಚ್ಚರಿಸಿದೆ. ಮುಖ್ಯ ನಾಯಮೂರ್ತಿ ಸೂರ್ಯಕಾಂತ್, ನ್ಯಾಯಾಂಗ ಸಂಸ್ಥೆಯನ್ನು ದೂಷಿಸಲು ಯಾರಿಗೂ ಅವಕಾಶ ನೀಡುವುದಿಲ್ಲ. ■ 10ನೇ ಪುಟಕ್ಕೆ

ಹೊರೆಯಾದರೂ ಗ್ಯಾರಂಟಿಗಳ ನಿಲ್ಲಿಸಲ್ಲ; ಪರಿಷ್ಕರಣೆಯೂ ಇಲ್ಲ

ಬೆಂಗಳೂರು, ಫೆ.26– ಗ್ಯಾರಂಟಿ ಯೋಜನೆಗಳಿಂದ ಸರ್ಕಾರಕ್ಕೆ ಸಾಕಷ್ಟು ಹೊರೆಯಾಗುತ್ತಿದೆ. ಆದರೂ ನಾವು ಯಾವುದೇ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ. ಯಾವುದೇ ರೀತಿಯ ಪರಿಷ್ಕರಣೆಯನ್ನೂ ಮಾಡುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.



ಗುರುವಾರ ಸಂಜೆ ಸದಾಶಿವನಗರ ನಿವಾಸದ ಬಳಿ ಮಾಧ್ಯಮ ಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಪ್ರತಿಕ್ರಿಯೆ ನೀಡಿದರು. ಗ್ಯಾರಂಟಿ ಯೋಜನೆ ನಿಲ್ಲಿಸುವ ಬಗೆಗಿನ ಊಹಾಪೋಹಗಳ ಬಗ್ಗೆ ಕೇಳಿದಾಗ, ಉದಾಹರಣೆಗೆ ಮೃತಪಟ್ಟಿರುವ ಕೆಲವರಿಗೆ ಗ್ಯಾರಂಟಿ ಯೋಜನೆಯ ಹಣ ಸಂದಾಯವಾಗಿದೆ. ಪಡಿತರ ಅಕ್ಕಿ ಯನ್ನೂ ಮೃತಪಟ್ಟಿರುವವರ ಹೆಸರಿನಲ್ಲಿ ಪಡೆಯಲಾಗುತ್ತಿದೆ. ಗೃಹಜ್ಯೋತಿಯಲ್ಲಿ ಈ ಸಮಸ್ಯೆ ಎದುರಾಗುವುದಿಲ್ಲ ಎಂದು ಹೇಳಿದರು.

ಮೃತಪಟ್ಟಿರುವವರ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ತೆಗೆದುಕೊಳ್ಳಲಾಗಿದೆ. ಈ ರೀತಿ ದುರುಪಯೋಗವಾಗುವುದನ್ನು ತಪ್ಪಿಸಬೇಕು. ಮೃತಪಟ್ಟವರ ಲೆಕ್ಕ ಸಿಗುತ್ತಿಲ್ಲ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು ಎಂದು ಸರ್ಕಾರ ಚರ್ಚೆ ಮಾಡುತ್ತಿದೆ ಎಂದರು. ಸ್ಥಿತಿವಂತರು ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆಯಬೇಡಿ ಎನ್ನುವ ಸಲಹೆಯ ಬಗ್ಗೆ ಕೇಳಿದಾಗ, ಇದರ ಬಗ್ಗೆ ನೋಡೋಣ ಎಂದು ಉತ್ತರಿಸಿದರು. 5 ಗ್ಯಾರಂಟಿಗಳಿಗಾಗಿ ರಾಜ್ಯ ಸರ್ಕಾರ ಇದುವರೆಗೆ 1.20 ಲಕ್ಷ ಕೋಟಿ ವೆಚ್ಚ ಮಾಡಿದೆ.



ಮೈಸೂರು, ಚನ್ನಪಟ್ಟಣ ಕೆಎಸ್‌ಐಸಿಗಳಿಗೆ –

ತಿ.ನರಸೀಪುರದ ರೇಷ್ಮೆ ನೂಲು ತೆಗೆಯುವ ಫ್ಯಾಕ್ಟರಿಯೇ ತಾಯಿ ಬೇರು; ಕ್ರೀಡಾಂಗಣಕ್ಕಾಗಿ ಅದನ್ನೆ ಕತ್ತರಿಸಲು ಹೊರಟಿದೆ ಸರ್ಕಾರ!

● ಕಾರ್ಖಾನೆಯ 13.11 ಎಕರೆಯಲ್ಲಿ 5.8 ಎಕರೆ ಕ್ರೀಡಾಂಗಣಕ್ಕೆ ಮೀಸಲು ● ಬಾಯ್ಲರ್‌ಗಾಗಿ ಬಳಸುವ ಕಲ್ಲಿದ್ದಲು, ಕೆಂಡ ಸುರಿಯಲು ಖಾಲಿ ಜಾಗ ಬಳಕೆ ● ಕಪಿಲಾ ನದಿಗೆ ಕಾರ್ಖಾನೆಯ ನೀರಿನ ಪೈಪ್‌ಲೈನ್ ಇಲ್ಲೇ ಹಾದು ಹೋಗಿದೆ

ಮೈಸೂರು, ಫೆ.26(ಬಿಎಲ್‌ಎಂ)– ಮೈಸೂರಿನ ಮಾನಂದವಾಡಿ ಕೆಎಸ್‌ಐಸಿ (ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮ ನಿಯಮಿತ) ಹಾಗೂ ಚನ್ನಪಟ್ಟಣದ ಕೆಎಸ್‌ಐಸಿಗೆ ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿ (ರೇಷ್ಮೆ ನೂಲು ತೆಗೆಯುವ ಫ್ಯಾಕ್ಟರಿ) ತಾಯಿ ಬೇರು ಇದ್ದಂತೆ. ಆದರೆ ಈಗ ಸರ್ಕಾರ ಕ್ರೀಡಾಂಗಣ ನಿರ್ಮಾಣಕ್ಕಾಗಿ ಇಂತಹ ಮೂಲ ಬೇರನ್ನೆ ಕತ್ತರಿಸಿ ಮೂರು ಕಾರ್ಖಾನೆ ಅಸ್ತಿತ್ವವನ್ನೆ ಅಲುಗಾಡಿಸುವ ತೀರ್ಮಾನ ಕೈಗೊಂಡಿದೆ.

ತಿ.ನರಸೀಪುರ ಪಟ್ಟಣದ ಭೈರಾಪುರದಲ್ಲಿರುವ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿಗೆ 13.11 ಎಕರೆ ಜಾಗವಿದೆ. ಇದರಲ್ಲಿ 5.8 ಎಕರೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಕೆಎಸ್‌ಐಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರ ಮಾಡಿದೆ.

ಕ್ರೀಡಾಂಗಣ ನಿರ್ಮಾಣದಿಂದ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿ ಮುಚ್ಚುವ ಪರಿಸ್ಥಿತಿ ಏನು ಬರುವುದಿಲ್ಲ ಎಂದು ಅಧಿಕಾರಿಗಳು ವಾದ ಮಾಡಿದರೂ ದಶಕಗಳಿಂದ ಕೆಲಸ ಮಾಡುತ್ತಿರುವ ಇಲ್ಲಿನ ನೌಕರರು, ಕ್ರೀಡಾಂಗಣ ನಿರ್ಮಾಣವಾದರೆ ಫ್ಯಾಕ್ಟರಿ ಮುಚ್ಚುವ ಪರಿಸ್ಥಿತಿ ಬಂದೇ ಬರುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಶತಮಾನೋತ್ಸವ ಕಂಡ ಕಾರ್ಖಾನೆ ಚರಿತ್ರೆಯ ಪುಟ ಸೇರಲಿದೆ ಎಂದು ದುಗುಡದಿಂದಿದ್ದಾರೆ.

ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೀರ್ಘಾವಧಿಯ ದೃಷ್ಟಿಕೋನದಿಂದ 1912ರಲ್ಲಿ ಈ ಕಾರ್ಖಾನೆ ನಿರ್ಮಾಣವಾಗಿದೆ. ಆದರೆ, ಈ ಮಾದರಿಯ ಸಣ್ಣ ಕಾರ್ಖಾನೆ ನಿರ್ಮಾಣ ಮಾಡಲು ಸರ್ಕಾರಕ್ಕೆ ಸಾಧ್ಯವಿಲ್ಲ. ಆದರೆ ಮಹಾರಾಜರು ಸ್ಥಾಪಿಸಿದ ಕಾರ್ಖಾನೆಗೆ ಸರ್ಕಾರವೇ ಈಗ ಕಂಟಕವಾಗಿದೆ ಎಂದು ನೌಕರರು ದೂರಿದ್ದಾರೆ.

ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿಯು ಮೈಸೂರು ಹಾಗೂ ಚೆನ್ನಪಟ್ಟಣದ ಕೆಎಸ್‌ಐಸಿಗೆ ರೇಷ್ಮೆ ದಾರವನ್ನು ಪೂರೈಸುವ ಪ್ರಮುಖ ಘಟಕವಾಗಿದ್ದು, ಅವುಗಳಿಗೆ ತಾಯಿ ಸ್ಥಾನದಲ್ಲಿದೆ. ಒಂದು ವೇಳೆ ಈ ಘಟಕ ಮುಚ್ಚಿದರೆ ರೇಷ್ಮೆ ದಾರವಿಲ್ಲದೆ ಮೈಸೂರು ಹಾಗೂ ಚೆನ್ನಪಟ್ಟಣದ ಕೆಎಸ್‌ಐಸಿ ಬಾಗಿಲು ಹಾಕುವ ಪರಿಸ್ಥಿತಿ ಅನಿವಾರ್ಯವಾಗಿ ಬಂದೇ ಬರುತ್ತದೆ.

ಇಲ್ಲಿ ಒಂದು ದಿನಕ್ಕೆ 2,500 ಗೂಡು ಬೇಯಿಸಿ, ಅದರಿಂದ ಸುಮಾರು 300 ರಿಂದ 400 ಕೆ.ಜಿ. ರೇಷ್ಮೆ ನೂಲು ತೆಗೆಯಲಾಗುತ್ತದೆ. ರೇಷ್ಮೆ ನೂಲು ತೆಗೆಯಲು ಕಲ್ಲಿದ್ದಲಿನ ಮೂಲಕ ರೇಷ್ಮೆ ಗೂಡು ಬೇಯಿಸಲಾಗುತ್ತದೆ. ಇದರಿಂದ ತೀವ್ರ ಶಾಖ ಉತ್ಪಾದನೆಯಾಗಲಿದ್ದು, ಇದರ ತಾಪಮಾನವನ್ನು ಸುತ್ತಮುತ್ತಲಿನ ನೂರಾರು ಮರಗಳು ತಡೆದುಕೊಳ್ಳುತ್ತಿವೆ. ಒಂದು ದಿನಕ್ಕೆ ಸುಮಾರು ಐದಾರು ಟನ್ ಕಲ್ಲಿದ್ದಲು ಬಳಕೆಯಾಗುತ್ತಿದ್ದು, ತೆಲಂಗಾಣದಿಂದ ತರಿಸಲಾಗುತ್ತಿದೆ. ಈ ಕಲ್ಲಿದ್ದಲನ್ನು ಈಗ ಕ್ರೀಡಾಂಗಣ ನಿರ್ಮಾಣಕ್ಕೆ ಮೀಸಲಾಗಿರಿಸಿರುವ ಜಾಗದಲ್ಲಿ ಸುರಿಯಲಾಗುತ್ತದೆ. ಅದರ ಕೆಂಡವನ್ನು ಕೂಡ ಇಲ್ಲೇ ಸುರಿಯಲಾಗುತ್ತದೆ. ■ 10ನೇ ಪುಟಕ್ಕೆ

512 ಮರಗಳು 20 ವಿವಿಧ ರೀತಿಯ ಚಿಟ್ಟೆ, ಕೀಟಗಳಿಗೆ ಆಶ್ರಯ ತಾಣ

ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ಮುಂದಾದ ಸಂದರ್ಭದಲ್ಲಿ ಪರಿಸರ ತಜ್ಞರು ಇಲ್ಲಿರುವ ಮರ–ಗಿಡ, ಪರಿಸರದ ಬಗ್ಗೆ ಅಧ್ಯಯನ ಮಾಡಿದ್ದಾರೆ.

ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿಯಲ್ಲಿ ಒಟ್ಟು 512 ವಿವಿಧ ಜಾತಿಯ ಮರಗಳಿವೆ. ಇವುಗಳಲ್ಲಿ 100 ವರ್ಷದ 12 ಹಾಗೂ 50 ವರ್ಷದ 130 ಮರಗಳಿವೆ. 38 ವಿವಿಧ ಪ್ರಭೇದದ ಪ್ರಾಣಿ–ಪಕ್ಷಿಗಳ ಆಶ್ರಯ ತಾಣವಾಗಿದ್ದು, ಸಾವಿರಾರು ಪಕ್ಷಿಗಳು ಬೇರೆಡೆಯಿಂದ ಇಲ್ಲಿಗೆ ವಲಸೆ ಬಂದು ತರುವಾಯ ಸ್ವಸ್ಥಾನಕ್ಕೆ ವಾಪಸ್ಸಾಗುತ್ತವೆ.

ಇದಲ್ಲದೆ 20 ವಿವಿಧ ರೀತಿಯ ಚಿಟ್ಟೆ ಹಾಗೂ 15 ಕೀಟಗಳು ಇಲ್ಲಿನ ಪರಿಸರಕ್ಕೆ ಮೆರಗು ನೀಡುತ್ತವೆ. ಪಕ್ಷಿಗಳ ಚಿಲಿಪಿಲಿ ಶಬ್ದ, ಅತ್ಯಾಕರ್ಷಕ ಚಿಟ್ಟೆಗಳು ಇಲ್ಲಿನ ವೈವಿಧ್ಯಮಯ ಪರಿಸರವನ್ನು ಅಂದಗೊಳಿಸಿದೆ. ಇಂತಹ ವಿಶಿಷ್ಟ ಪರಿಸರವನ್ನೆ ನಾಶ ಮಾಡಲು ಈಗ ಸರ್ಕಾರ ಮುಂದಾಗಿದೆ.


ಉದ್ದೇಶಿತ ಕ್ರೀಡಾಂಗಣ ನಿರ್ಮಾಣ ಮಾಡಲು ಆಯ್ಕೆ ಮಾಡಿರುವ ಜಾಗವಿದು.

ಇಪಿಟಿ ಸ್ಥಾಪನೆಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್

ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿಯಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆಗಾಗಿ ತ್ಯಾಜ್ಯ ಸಂಸ್ಕರಣಾ ಘಟಕ (ಇಪಿಟಿ) ಸ್ಥಾಪನೆ ಮಾಡುವಂತೆ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶ ನೀಡಿದೆ. ಶೀಘ್ರದಲ್ಲೇ ಈ ಘಟಕ ಸ್ಥಾಪನೆ ಮಾಡದಿದ್ದರೆ ಕಾರ್ಖಾನೆಗೆ ಬೀಗ ಜಡಿಯುವ ಎಚ್ಚರಿಕೆ ಕೂಡ ನೀಡಿದೆ.

ಕಾರ್ಖಾನೆಯಲ್ಲಿ ಬಳಕೆಯಾದ ಬಳಿಕ ಹೊರ ಬರುವ ಶೇಕಡ 20ರಷ್ಟು ತ್ಯಾಜ್ಯ ನೀರನ್ನು ಚರಂಡಿಗೆ ಹಾಗೂ ಉಳಿದ ಶೇಕಡ 80ರಷ್ಟು ನೀರನ್ನು ಮರ–ಗಿಡಗಳಿಗೆ ಬಳಕೆ ಮಾಡಲಾಗುತ್ತಿದೆ.

ಆದರೆ ಇಲ್ಲಿ ಬಳಕೆಯಾಗುವ ಪೂರ್ಣ ನೀರನ್ನು ತ್ಯಾಜ್ಯ ಸಂಸ್ಕರಣಾ ಘಟಕದ ಮೂಲಕ ಸಂಸ್ಕರಿಸಬೇಕು. ಯಾವುದೇ ಕಾರಣಕ್ಕೂ ಚರಂಡಿಗೆ ಬಿಡಬಾರದು ಹಾಗೂ ಮರ–ಗಿಡಗಳಿಗೆ ಬಳಸಬಾರದು. ಇದು ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಮಂಡಳಿ ತಿಳಿಸಿದೆ. ಈಗ ಸರ್ಕಾರ ಕಾರ್ಖಾನೆ ಆವರಣದ 5 ಎಕರೆಯಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದರೆ ಇಪಿಟಿ ಘಟಕ ಸ್ಥಾಪನೆ ಎಲ್ಲಿ ಮಾಡುವುದು, ಪೈಪ್‌ಲೈನ್ ಹೇಗೆ ಅಳವಡಿಸುವುದು ಎಂಬ ಪ್ರಶ್ನೆ ಎದುರಾಗಿದೆ. ಕ್ರೀಡಾಂಗಣ ನಿರ್ಮಾಣದಿಂದ ಹಲವು ರೀತಿ ತೊಂದರೆ ಆಗಿ ಕಾರ್ಖಾನೆ ಮುಚ್ಚುವ ಪರಿಸ್ಥಿತಿ ಬಂದರೆ ಮೈಸೂರು ಹಾಗೂ ಚೆನ್ನಪಟ್ಟಣದ ಕಾರ್ಖಾನೆಗೂ ಬೀಗ ಹಾಕುವ ಸ್ಥಿತಿ ಎದುರಾಗುತ್ತದೆ ಎಂಬ ಆತಂಕ ಮೂಡಿದೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಫೋನ್ ಕೆಲಸ ಮಾಡ್ತಾ ಇಲ್ಲ. ಬೇರೆ ಫೋನ್ ತಗೊಳದ?

ಗಂಡ : ನೀನು ಕೂಡ ಏನೂ ಕೆಲಸ ಮಾಡಲ್ಲ. ಅದಕ್ಕೆ ನಾನೂ ಕೂಡ...

ಮೈಸೂರು ಮಿತ್ರ

ಶುಕ್ರವಾರ, ಫೆಬ್ರವರಿ 27, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಾವು ಇಂದು ಮಾಡುವ ಪ್ರತಿಯೊಂದು ಕಾರ್ಯವೂ ನಮ್ಮ ನಾಳೆಗಳ ಸ್ವರೂಪವನ್ನು ನಿರ್ಧರಿಸುತ್ತದೆ. ಹಾಗಾಗಿ ನಮ್ಮ ಪ್ರತಿ ಹೆಜ್ಜೆಯೂ ಸಮಯೋಚಿತವಾಗಿರಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಸೆ ಆಕಾಶದಷ್ಟು, ಸಾಧನೆ ಸಾಸಿವೆಯಷ್ಟೇ.

ನಿಮ್ಮ ಪತ್ರಗಳು

ಗಂಗೋತ್ರಿ ಬಡಾವಣೆಯ ರಸ್ತೆಯ ಅವ್ಯವಸ್ಥೆ



ಮಾನ್ಯರೆ,

ಮೈಸೂರಿನ ಗಂಗೋತ್ರಿ ಬಡಾವಣೆಯ 4ನೇ ಅಡ್ಡ ರಸ್ತೆಯಲ್ಲಿ ಮಾರುತಿ ದೇವಾಲಯದ ಹಿಂಬದಿ ರಸ್ತೆಯು ತೀರಾ ಹದಗೆಟ್ಟಿದೆ. ಎರಡು ಮೂರು ತಿಂಗಳ ಹಿಂದೆ ಪೈಪ್ ಲೈನ್ ಮಾಡುವ ಸಲುವಾಗಿ ಚೆನ್ನಾಗಿದ್ದ ಡಾಂಬರು ರಸ್ತೆಯನ್ನು ಅಗೆದು ಗುಂಡಿ ಮಾಡಿ ಬೇಕಾಬಿಟ್ಟಿ ಮುಚ್ಚಲಾಗಿದೆ. ಈ ಬಡಾವಣೆಯ ಹಲವು ಅಡ್ಡ ತಿರುವು ರಸ್ತೆಗಳು ತೀರಾ ಹದಗೆಟ್ಟಿದೆ. ಈ ರಸ್ತೆಗಳು ಹೀಗ ಮಣ್ಣಿನ ಗುಂಡಿಗಳಂತೆ ಕಾಣುತ್ತಿವೆ. ಬಿಸಿಲು, ಗಾಳಿಗೆ ದಟ್ಟವಾದ ಕೆಮ್ಮಣ್ಣಿನ ಧೂಳು ಎದ್ದು ಜನರು ನಡೆದಾಡಲು ತುಂಬಾ ತೊಂದರೆಯಾಗಿದೆ. ಪಾದಚಾರಿಗಳು ರಸ್ತೆಯಲ್ಲಿ ಸಂಚರಿಸುವಾಗ ಯಾವುದಾದರೂ ವಾಹನಗಳು ಹೋದರಂತೂ ಜನರ ಬಟ್ಟೆಯ ಬಣ್ಣವೇ ಬದಲಾಗುತ್ತದೆ ಜೊತೆಗೆ ಧೂಳು ಅವರ ದೇಹವನ್ನು ಹೊಕ್ಕಿ ಅನಾರೋಗ್ಯ ಉಂಟಾಗುತ್ತಿದೆ.

ಇಲ್ಲಿಯ ರಸ್ತೆಯ ಬದಿಗಳು ಕಿರಿದಾಗಿದ್ದು, ರಸ್ತೆಯಲ್ಲಿನ ಧೂಳು ಸಲೀಸಾಗಿ ಮನೆಯನ್ನು ಹೊಕ್ಕಿ ಜನತೆಯ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಜನರು ಇಷ್ಟು ದಿನಗಳು ಕಾದರು ಸಂಬಂಧಪಟ್ಟ ಅಧಿಕಾರಿಗಳಿಂದ ಯಾವುದೇ ದುರಸ್ತಿಯ ಕ್ರಮ ಕಾಣದಾಗಿದೆ. ನಿನ್ನೆ ಬಂದ ಮಳೆಗೆ ಈ ರಸ್ತೆಗಳು ನೀರಿನ ಗುಂಡಿಗಳಾಗಿವೆ. ಜನತೆಯ ಓಡಾಡಲೂ ತುಂಬಾ ಅನಾನುಕೂಲ ಉಂಟಾಗಿದೆ. ಇನ್ನು ಮುಂದೆ ಮಳೆಗಾಲದಲ್ಲಿ ಅಧಿಕವಾದ ಮಳೆಯಿಂದ ಈ ರಸ್ತೆಗಳು ಇನ್ನು ತೀರ ಅದಗೆಟ್ಟು ಜನತೆಗೆ ತುಂಬಾ ತೊಂದರೆಯಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಕೂಡಲೇ ರಸ್ತೆ ದುರಸ್ತಿ ಮಾಡಬೇಕೆಂದು ಈ ಮೂಲಕ ಮನವಿ.

–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು

ಕೋರ್ಟ್ ಆದೇಶಗಳಿಗೆ ಬೆಲೆಯೇ ಇಲ್ಲವೇ?

ಮಾನ್ಯರೆ,

ರಾಜ್ಯಾದ್ಯಂತ ಐದು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೊಬ್ಬರಂತೆ ಗ್ರಾಮ ವಿದ್ಯುತ್ ಪ್ರತಿನಿಧಿಗಳನ್ನು 2004ರಲ್ಲಿ ಎಸ್.ಎಂ.ಕೃಷ್ಣರ ಕಾಂಗ್ರೆಸ್ ಸರ್ಕಾರ ವಿದ್ಯುತ್ ಬಿಲ್ ವಿತರಿಸುವ ಮತ್ತು ಕಂದಾಯ ವಸೂಲಿ ಮಾಡುವ ಕೆಲಸಕ್ಕೆ ನೇಮಕ ಮಾಡಿಕೊಳ್ಳಲಾಗಿತ್ತು. ಇವರ 23 ವರ್ಷದ ಸೇವೆಯನ್ನು ಎಸ್ಕಾಂ ಪಡೆದುಕೊಂಡಿದೆ ಮತ್ತು ಪಡೆಯುತ್ತಲಿದೆ. ಆದರೆ ಈ ನೌಕರರ ಜೀವನ ಮಾತ್ರ ಮೂರಾಬಟ್ಟೆಯಾಗಿದೆ. ಕೇವಲ ಎರಡು ಸಾವಿರ ರೂ.ಗಳಿಗೆ ಹತ್ತಾರು ವರ್ಷ ಇಲಾಖೆಗಳು ದುಡಿಸಿಕೊಂಡಿವೆ. ಇವರ ಕಷ್ಟ ಅರಿತ ಅಂದಿನ ಇಂಧನ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ 12 ಸಾವಿರ ಸಂಬಳ ನಿಗದಿ ಮಾಡಿದರು. ತದ ನಂತರ ಸಚಿವರಾಗಿ ಬಂದ ಸುನೀಲ್ ಕುಮಾರ್ ಅವರು 17500ಕ್ಕೆ ಏರಿಕೆ ಮಾಡಿದರು. ಇದನ್ನು ಹೊರತುಪಡಿಸಿ ಇಎಸ್ಐ, ಪಿಎಫ್‌ನಂತಹ ಸಾಮಾನ್ಯ ಸೌಲಭ್ಯಗಳನ್ನು ಇಲಾಖೆ ನೀಡದೆ ವಂಚಿಸಿವೆ. ಇದರಿಂದ ಬೇಸತ್ತ ಜಿವಿಪಿಗಳು ಬೆಂಗಳೂರು, ಬೆಳಗಾವಿಯಲ್ಲಿ ಹಲವಾರು ಭಾರಿ ಪ್ರತಿಭಟನೆ ನಡೆಸಿವೆ. ಆದರೂ ಪ್ರಯೋಜನವಾಗದಿದ್ದಾಗ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ನ್ಯಾಯಮೂರ್ತಿ ಕೃಷ್ಣ.ಎಸ್.ದೀಕ್ಷಿತ್ ಅವರಿದ್ದ ಏಕ ಸದಸ್ಯ ಪೀಠ ಜಿವಿಪಿಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ನಂತರ ಇವರಿಗೆ ಸೂಕ್ತ ಹುದ್ದೆ ಮತ್ತು ವೇತನ ನಿಗದಿಮಾಡಿ ಕಾಯಂ ಮಾಡುವಂತೆ ಅದೇಶ ನೀಡಿತು. ಇದರ ವಿರುದ್ಧ ಇಲಾಖೆಯು ಮೇಲ್ಮನವಿ ಸಲ್ಲಿಸಿದ ಕಾರಣ ದ್ವಿ ಸದಸ್ಯ ಪೀಠಕ್ಕೆ ಕೇಸ್ ವರ್ಗಾಯಿಸಲಾಯಿತು. ಅಲ್ಲೂ ಸಹ ಜಿವಿಪಿಗಳ ಪರವಾಗಿ ಕೋರ್ಟ್ ತೀರ್ಪು ನೀಡಿದೆ. ಆದರೆ ಈ ಆದೇಶಗಳ ಇಲಾಖೆಯಾಗಲಿ, ಸರ್ಕಾರವಾಗಲಿ ಪಾಲನೆ ಮಾಡಿಲ್ಲ. ಕೇವಲ ಸಣ್ಣ ಪುಟ್ಟ ಬದಲಾವಣೆ ಮಾಡಿ ಕೈತೊಳೆದುಕೊಂಡಿವೆ. ಇದರಿಂದ ಜಿವಿಪಿಗಳು ಮತ್ತಷ್ಟು ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಇತ್ತೀಚಿಗೆ ಜಿವಿಪಿಗಳಿಗೆ ಕೆಲಸದ ಒತ್ತಡವು ಜಾಸ್ತಿಯಾಗಿದೆ. ಗೃಹಜ್ಯೋತಿ ಬಂದರು ಹೊಸ ಹೊಸ ಜವಬ್ದಾರಿ ಹೆಚ್ಚಾಗುತ್ತಲೆ ಇವೆ. ವಯೋಮಿತಿ ಮೀರಿದ ಇವರ ಪಾಡೇನು? ಇವರ ಕುಟುಂಬದ ಗತಿ ಏನು? ಕೆ.ಪಿ.ಟಿ.ಸಿ.ಎಲ್.ನೌಕರರ ಸಂಘ ಇವರ ಪರ ಧ್ವನಿ ಎತ್ತದಿರುವುದು ದುರಂತ. ಮಾನವೀಯತೆ, ದೀರ್ಘಾವಧಿಯ ಅವಶ್ಯಕ ಸೇವೆಯನ್ನು ಪರಿಗಣಿಸಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಇವರಿಗೆ ತಮ್ಮ ಅಧಿಕಾರವಧಿಯಲ್ಲಿ ಮುಂಬರುವ ಬಜೆಟ್‌ನಲ್ಲಿ ಕಾಯಂ ಭಾಗ್ಯ ಘೋಷಿಸುವ ಮೂಲಕ ಮೂರು ಸಾವಿರ ನೌಕರರ ಕುಟುಂಬಕ್ಕೆ ಆಸರೆಯಾಗಬೇಕಿದೆ. ಇಂಧನ ಸಚಿವರು ಕಳಕಳಿ ತೋರಬೇಕಿದೆ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ.

ಒಳಚರಂಡಿ ಮ್ಯಾನ್‌ಹೋಲ್ ದುರಸ್ತಿಪಡಿಸಿ


ಮಾನ್ಯರೆ,

ಮೈಸೂರು ತಾಲೂಕು ವರುಣಾ ಗ್ರಾಮ ಪಂಚಾಯಿತಿಗೆ ಒಳಪಡುವ ಚಿಕ್ಕಹಳ್ಳಿ



ಗ್ರಾಮದಿಂದ ಭುಗತಗಳ್ಳಿಗೆ ಹೋಗುವ ಮುಖ್ಯ ರಸ್ತೆಯ ಕರುಣಾ ಟ್ರಸ್ಟ್ ಆಶ್ರಮದ ಎದುರು ಸುಮಾರು 10 ದಿನಗಳಿಂದ ಒಳಚರಂಡಿಯ ಮ್ಯಾನ್ ಹೋಲ್ ಒಡೆದು ರಸ್ತೆಯ ಮಧ್ಯೆ ಬಾಯಿ ತೆರೆದುಕೊಂಡಿದೆ. ಅದೇ ರಸ್ತೆಯಲ್ಲಿ ಹೆಚ್ಚಿನ ವಾಹನಗಳು, ಸಾರ್ವಜನಿಕರು ಹಾಗೂ ಶಾಲಾ ಮಕ್ಕಳು ಶಾಲೆಗೆ ನಡೆದುಕೊಂಡು ಹೋಗುವುದರಿಂದ ಒಳಚರಂಡಿಯ ಗುಂಡಿ ಕಾಣದೆ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಮ್ಯಾನ್ ಹೋಲ್ ಬಾಯಿ ತೆರೆದುಕೊಂಡಿರುವುದನ್ನು ದುರಸ್ತಿಪಡಿಸಿ ಸಾರ್ವಜನಿಕರು ಹಾಗೂ ವಾಹನ ಸವಾರರು ರಸ್ತೆಯಲ್ಲಿ ಓಡಾಡಲು ಅನುಕೂಲ ಮಾಡಿಕೊಡುವಂತೆ ತಮ್ಮಲ್ಲಿ ಮನವಿ.

–ಎಸ್. ನೀಲಿಸಿದ್ದಯ್ಯ, ಭುಗತಗಳ್ಳಿ, ಮೈಸೂರು ತಾ.




ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಮನಸ್ಸಿನ ಮರ್ಮವನ್ನ ಬಲ್ಲವರು ಯಾರು...

ಈಗ ನೀವು ಅಧ್ಯಾತ್ಮವೆಂಬ ಪದವನ್ನು ಕೇಳಿಸಿಕೊಂಡಿದ್ದು ನಿಮ್ಮ ಮನಸ್ಸಿನ ಕಾರಣದಿಂದಾಗಿಯೇ ಅಲ್ಲವೆ? ನಾನೀಗ ಮಾತನಾಡುತ್ತಿರುವುದನ್ನು ನೀವು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿರುವುದು ನಿಮ್ಮ ಮನಸ್ಸಿನ ಸಹಾಯದಿಂದ ಮಾತ್ರ. ನಿಮ್ಮ ಸ್ನೇಹಿತನಾಗಿರುವವನನ್ನು ನಿಮ್ಮ ಶತ್ರುವನ್ನಾಗಿ ಮಾಡಿಕೊಳ್ಳಬೇಡಿ. ನಿಮ್ಮ ಮನಸ್ಸು ನಿಮ್ಮ ಸ್ನೇಹಿತನೋ ಅಥವಾ ಶತ್ರುವೋ ಎನ್ನುವುದನ್ನು ದಯವಿಟ್ಟು ನಿಮ್ಮ ಬದುಕನ್ನೊಮ್ಮೆ ಗಮನಿಸಿಕೊಂಡು ನನಗೆ ಹೇಳಿ. ನೀವಿಂದು ನೀವಾಗಿರುವುದಕ್ಕೆ ಕಾರಣ ನಿಮ್ಮ ಮನಸ್ಸು ಮಾತ್ರ, ಹೌದು ತಾನೆ? ನೀವದರ ಜೊತೆ ಫಜೀತಿ ಮಾಡಿಕೊಂಡಿದ್ದರೆ, ಅದು ನಿಮಗೆ ಬಿಟ್ಟ ವಿಚಾರ. ಮನಸ್ಸಿಲ್ಲದೆಯೇ ನೀವಿರಬೇಕೆಂದರೆ, ಅದು ತುಂಬ ಸರಳ; ನಿಮ್ಮ ತಲೆಗೆ ದೊಡ್ಡ ದೊಣ್ಣೆ ಏಟೊಂದನ್ನು ಕೊಟ್ಟರೆ ಸಾಕು. ಏನಂತೀರ? ಇಲ್ಲಿ ಸಮಸ್ಯೆ ನಿಮ್ಮ ಮನಸ್ಸಿನದ್ದಲ್ಲ. ಅದನ್ನು ಬಳಸಲು ಮತ್ತು ನಿಭಾಯಿಸಲು ನಿಮಗೆ ಬರುವುದಿಲ್ಲ ಎನ್ನುವುದೇ ಸಮಸ್ಯೆ. ಆದ್ದರಿಂದ ಮನಸ್ಸಿನ ಬಗ್ಗೆ ಮಾತನಾಡಬೇಡಿ. ನೀವದನ್ನು ನಿಭಾಯಿಸಲು ಪ್ರಯತ್ನಿಸುತ್ತಿರುವ ಅಸಮರ್ಪಕ ರೀತಿಗಳತ್ತ ನಿಮ್ಮ ಗಮನ ಹರಿಸಿ. ಯಾವುದೇ ವಿಷಯ ಅಥವಾ ವಸ್ತುವಿನ ಬಗ್ಗೆ ತಿಳುವಳಿಕೆ ಮತ್ತು ಹಿಡಿತವಿಲ್ಲದೆಯೇ ಅದನ್ನು ಮುನ್ನಡೆಸಲು ಹೋದರೆ, ಅದು ಅವ್ಯವಸ್ಥೆಯ ಗೂಡಾಗುತ್ತದೆ.



ಸಮಸ್ಯೆ ಮನಸ್ಸಿನದ್ದಲ್ಲ. ನಿಭಾಯಿಸಲು ಬರದಿರುವುದು

ಈಗ ಉದಾಹರಣೆಗೆ, ಭತ್ತವನ್ನು ಬೆಳೆಯುವುದು ಒಂದು ದೊಡ್ಡ ಸಾಹಸದ ಕೆಲಸವೆಂದು ನಿಮಗನಿಸುತ್ತದೆಯೆ? ಓದು ಬರಹವಿಲ್ಲದ ಒಬ್ಬ ಸಾಮಾನ್ಯ ರೈತ ಅದನ್ನು ಬೆಳೆಯುತ್ತಿದ್ದಾನೆ. ನಾನು ನಿಮಗೆ ನೂರು ಗ್ರಾಂ ಭತ್ತ ಕೊಟ್ಟು, ಅದನ್ನು ಬೆಳೆಯಲು ಬೇಕಾದ ಜಾಗ ಮತ್ತು ಅದಕ್ಕೆ ಬೇಕಾದ ಎಲ್ಲಾ ವಸ್ತುಗಳನ್ನು ಕೊಡುತ್ತೇನೆ. ಕೇವಲ ಒಂದು ಎಕರೆಯಷ್ಟು ಭತ್ತವನ್ನು ನನಗೆ ಬೆಳೆದು ತೋರಿಸಿ ನೋಡೋಣ. ಅದಕ್ಕಾಗಿ ನೀವೆಷ್ಟು ಅವಸ್ಥೆ ಪಡುತ್ತೀರಿ ಎಂದು ನಿಮಗಾಗ ಗೊತ್ತಾಗುತ್ತದೆ. ಭತ್ತವನ್ನು ಬೆಳೆಯುವುದು ಮಹಾ ಕಷ್ಟದ ಕೆಲಸವೆಂದೇನಲ್ಲ, ಆದರೆ ನಿಮಗದರ ಬಗ್ಗೆ ಏನೂ ತಿಳಿಯದ ಕಾರಣ, ಅದು ತುಂಬ ಕಷ್ಟಕರವೆನ್ನಿಸುತ್ತದೆ. ಅಂತೆಯೇ, ಮನಸ್ಸನ್ನು ಅಂತರಿಕ್ಷದ ಹಾಗೆ ಖಾಲಿಯಾಗಿಟ್ಟುಕೊಳ್ಳುವುದು ಕಠಿಣವಾದ ವಿಷಯವೇನಲ್ಲ, ಅದು ತುಂಬ ಸರಳವಾದ ವಿಚಾರ. ಆದರೆ ನಿಮಗದರ ಬಗ್ಗೆ ಒಂದು ಎಳ್ಳುಕಾಳಿನಷ್ಟೂ ಸಹ ತಿಳಿದಿಲ್ಲದ ಕಾರಣ, ಅದು ಬಹಳ ಕಷ್ಟವೆನ್ನಿಸುತ್ತದೆ. ನೀವು ಏನನ್ನಾದರೂ ಚೆನ್ನಾಗಿ ನಿಭಾಯಿಸುವ ಸಾಮರ್ಥ್ಯವನ್ನು ಪಡೆಯಬೇಕೆಂದಾದರೆ, ಅದು ಏನು ಮತ್ತು ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು. ಇಲ್ಲದಿದ್ದರೆ, ನೀವದನ್ನು ಕೇವಲ ಆಕಸ್ಮಿಕವಾಗಿ, ಕೆಲವೇ ಕೆಲವು ಸಂದರ್ಭಗಳಲ್ಲಿ ನಿಭಾಯಿಸಬಹುದಷ್ಟೆ ಪ್ರತಿಬಾರಿ ಅದು ಕೆಲಸ ಮಾಡುವುದಿಲ್ಲ.

> “ ನಿಮ್ಮ ಮನಸ್ಸು ನಿಲ್ಲಿಸಲು ಬಾರದಂತಹ ಒಂದು ಎಕ್ಸ್‌ಪ್ರೆಸ್ ರೈಲಿನಂತಾಗುತ್ತದೆ. ನೀವೇನೇ ಮಾಡಿದರೂ ಸಹ ಅದು ನಿಲ್ಲುವುದಿಲ್ಲ. ಮನಸ್ಸು ಹೀಗೆ ವೇಗವಾಗಿ ಓಡುತ್ತಿರುವಾಗ ನೀವದಕ್ಕೆ ಬ್ರೇಕ್ ಹಾಕಲು ಹೋದರೆ ಅದು ಕೆಲಸ ಮಾಡುವುದಿಲ್ಲ. ನೀವು ಯಾವುದೇ ವಾಹನಕ್ಕೆ ಬ್ರೇಕ್ ಹಾಕುವ ಮೊದಲು, ಅದರ ವೇಗವನ್ನು ಹತೋಟಿಗೆ ತಂದುಕೊಳ್ಳುವುದು ಅತ್ಯವಶ್ಯಕ.

ನೀವು ಪಡೆದ ಬಹುತೇಕ ಶಿಕ್ಷಣವು ಯಾವುದು ಸರಿ ಯಾವುದು ತಪ್ಪು, ಯಾವುದು ಒಳ್ಳೆಯದು ಯಾವುದು ಕೆಟ್ಟದು, ಯಾವುದು ದೇವರು ಯಾವುದು ಸೈತಾನ ಎನ್ನುವುದನ್ನು ಸುಮ್ಮನೆ ನಿಮ್ಮ ತಲೆಗೆ ತುಂಬಿಸುವ ಪ್ರಕ್ರಿಯೆ ಆಗಿತ್ತಷ್ಟೆ. ಈ ರೀತಿಯಾದ ನಿಮ್ಮ ಕಲಿಕೆ ಮತ್ತು ತಿಳುವಳಿಕೆಗಳಾವುವು ನಿಮ್ಮದೇ ಆದ ಜೀವನಾನುಭವದಿಂದ ಬಂದಂತವುಗಳಲ್ಲ.

ಒಮ್ಮೆ ನೀವು ನೀವಲ್ಲದ ವಸ್ತು ಮತ್ತು ವಿಷಯಗಳ ಜೊತೆ ಗುರುತಿಸಿಕೊಂಡಾಗ, ನಿಮ್ಮ ಮನಸ್ಸು ನಿಲ್ಲಿಸಲು ಬಾರದಂತಹ ಒಂದು ಎಕ್ಸ್‌ಪ್ರೆಸ್ ರೈಲಿನಂತಾಗುತ್ತದೆ. ನೀವೇನೇ ಮಾಡಿದರೂ ಸಹ ಅದು ನಿಲ್ಲುವುದಿಲ್ಲ.

ಹಾಗಾದರೆ ಈ ಮನಸ್ಸನ್ನು ಹೇಗೆ ಹಿಡಿತಕ್ಕೆ ತಂದುಕೊಳ್ಳುವುದು? ನೀವು ನೀವಲ್ಲದ ವಸ್ತು ಮತ್ತು ವಿಷಯಗಳ ಜೊತೆ ಗುರುತಿಸಿಕೊಂಡಿದ್ದೀರಿ. ನೀವು ನೀವಲ್ಲದೇ ಇರುವಂತದ್ದರ ಜೊತೆ ಗುರುತಿಸಿಕೊಂಡಾಕ್ಷಣ, ನಿಮ್ಮ ಮನಸ್ಸು ಹುಚ್ಚು ಕುದುರೆಯಂತೆ ಓಡತೊಡಗುತ್ತದೆ. ಇದು ಹೇಗೆಂದರೆ, ನೀವು ಕೆಲವು ರೀತಿಯ ಪದಾರ್ಥಗಳನ್ನು ಅತಿಯಾಗಿ ತಿಂದಾಗ, ನಿಮ್ಮ ಹೊಟ್ಟೆಯಲ್ಲಿ ಗ್ಯಾಸ್ ತುಂಬಿಕೊಳ್ಳುತ್ತದೆ. ಆಗ ನೀವದನ್ನು ತಡೆಯುವ ಪ್ರಯತ್ನ ಮಾಡಿದರೆ, ಅದು ಅಸಾಧ್ಯ. ಅದೇ ನೀವು ಸರಿಯಾದ ಆಹಾರ ತಿನ್ನುತ್ತಿದ್ದೇ ಆದರೆ, ನೀವೇನನ್ನೂ ತಡೆಹಿಡಿದುಕೊಳ್ಳಬೇಕಾಗಿ ಬರುವುದಿಲ್ಲ. ದೇಹ ಆರಾಮವಾಗಿರುತ್ತದೆ. ನಿಮ್ಮ ಮನಸ್ಸಿಗೂ ಸಹ ಇದೇ ಅನ್ವಯಿಸುತ್ತದೆ–ನೀವು ನೀವಲ್ಲದ ವಿಷಯಗಳ ಜೊತೆ ಗುರುತಿಸಿಕೊಂಡಿದ್ದೀರಿ. ಒಮ್ಮೆ ನಿಮ್ಮನ್ನು ನೀವು ತಪ್ಪಾಗಿ ಗುರುತಿಸಿಕೊಂಡರೆ, ನಿಮ್ಮ ಮನಸ್ಸನ್ನು ನಿಲ್ಲಿಸಲು ನಿಮಗೆ ಸಾಧ್ಯವಾಗುವುದಿಲ್ಲ.

ನೀವಲ್ಲದಿರುವಂತಹ ವಿಷಯಗಳಿಂದ ನಿಮ್ಮನ್ನು ನೀವು ಬಿಡಿಸಿಕೊಂಡಾಗ, ನಿಮ್ಮ ಮನಸ್ಸು ತಿಳಿಯಾಗಿ, ಖಾಲಿಯಾಗಿರುತ್ತದೆ ಎನ್ನುವುದನ್ನು ನೀವು ಗಮನಿಸುತ್ತೀರಿ. ನಿಮಗೆ ಬಳಸಬೇಕೆಂದಾಗ ನೀವದನ್ನು ಬಳಸಬಹುದು; ಇಲ್ಲವಾದಲ್ಲಿ ಅದು ತನ್ನ ಶುಭ್ರವಾದ ಸಹಜ ಸ್ಥಿತಿಯಲ್ಲಿರುತ್ತದೆ. ಅದು ಇರಬೇಕಾದದ್ದು ಹಾಗೆ, ಬೇರಿನ್ಯಾವ ರೀತಿಯಲ್ಲೂ ಅಲ್ಲ. ಆದರೆ ಸದ್ಯದಲ್ಲಿ, ನೀವು ನಿಮ್ಮನ್ನು ನೀವಲ್ಲದಂತಹ ಬಹಳಷ್ಟು ವಿಷಯಗಳಿಂದ ಗುರುತಿಸಿಕೊಂಡಿದ್ದೀರಿ. ನಿಮ್ಮ ದೇಹವನ್ನೂ ಸೇರಿದಂತೆ, ಅದೆಷ್ಟು ವಿಷಯಗಳೊಂದಿಗೆ ನಿಮ್ಮನ್ನು ನೀವು ಗುರುತಿಸಿಕೊಂಡಿದ್ದೀರಿ ಎನ್ನುವುದನ್ನು ಸ್ವಲ್ಪ ಗಮನಿಸಿ ನೋಡಿ. ಹೀಗಿರುವಾಗ ನೀವದನ್ನು ನಿಲ್ಲಿಸುವ ಮತ್ತು ಧ್ಯಾನ ಮಾಡುವ ಪ್ರಯತ್ನವನ್ನು ಮಾಡುತ್ತೀರಿ? ಅದು ಕೆಲಸ ಮಾಡುವುದಿಲ್ಲ. ಒಂದೋ ನೀವಾಗಿ ನೀವೇ ನಿಮ್ಮ ಗುರುತುಗಳನ್ನು ಅಳಿಸಿಹಾಕಬೇಕು ಅಥವಾ ಬದುಕು ಹೇಗಿದ್ದರೂ ನಿಮಗದನ್ನು ಮಾಡಿ ತೋರಿಸುತ್ತದೆ. ಸಾವು ನಿಮ್ಮನ್ನು ಎದುರಾದಾಗ, ನೀವೇನೇ ಗುರುತುಗಳನ್ನು ಇಟ್ಟುಕೊಂಡಿದ್ದರೂ ಅವೆಲ್ಲವೂ ಕಳಚಿಬೀಳುತ್ತವೆ ಅಲ್ಲವೇ? ಹಾಗಾಗಿ, ಈಗ ನೀವಿದನ್ನು ಕಲಿಯದಿದ್ದರೆ, ಸಾವು ಬಂದು ನಿಮಗೆ ನಿಜ ಸಂಗತಿ ಯನ್ನು ಕಲಿಸುತ್ತದೆ ಅಷ್ಟೆ. ನಿಮ್ಮಲ್ಲಿ ಸ್ವಲ್ಪವಾದರೂ ಬುದ್ಧಿ ಎನ್ನುವುದಿದ್ದರೆ, ಈ ತಕ್ಷಣವೇ ನೀವು ಶೇಖರಿಸಿಕೊಂಡ ವಿಷಯಗಳೊಂದಿಗೆ ನಿಮ್ಮನ್ನು ನೀವು ಗುರುತಿಸಿಕೊಳ್ಳಬಾರದು ಎಂಬುದನ್ನು ಕಲಿಯುತ್ತೀರಿ. ಇಲ್ಲದೇ ಹೋದರೆ, ಸಾವು ಬಂದು ನಿಮ್ಮೆಲ್ಲಾ ಗುರುತುಗಳನ್ನೂ ಹೊಡೆದುರುಳಿಸುತ್ತದೆ.

ಹಾಗಾಗಿ ನೀವು ನಿಮ್ಮ ಗುರುತುಗಳನ್ನು ಅಳಿಸಿಹಾಕಬೇಕು. ನೀವು ನೀವಲ್ಲದ ಯಾವ್ಯಾವ ವಿಷಯ ಮತ್ತು ವಸ್ತುಗಳಿಂದ ಗುರುತಿಸಿಕೊಂಡಿದ್ದೀರಾ ಎನ್ನುವುದನ್ನು ಗಮನಿಸುವುದಕ್ಕಾಗಿ, ಪ್ರತಿದಿನ ಬೆಳಗ್ಗೆ ಕೇವಲ ಹತ್ತು ನಿಮಿಷಗಳನ್ನು ಮೀಸಲಿಡಿ. ಎಷ್ಟೊಂದು ಹಾಸ್ಯಾಸ್ಪದ ರೀತಿಗಳಲ್ಲಿ ಮತ್ತು ಎಷ್ಟೊಂದು ಹಾಸ್ಯಾಸ್ಪದ ವಸ್ತುಗಳ ಜೊತೆ ನೀವು ನಿಮ್ಮನ್ನು ಗುರುತಿಸಿಕೊಂಡಿದ್ದೀರಾ ಎನ್ನುವುದನ್ನು ನೋಡಿದರೆ ಆಶ್ಚರ್ಯಪಡುತ್ತೀರಾ. ನಿಮ್ಮ ಮನೆಯಲ್ಲಿರುವ ನಿಮ್ಮ ಸುತ್ತಲಿನ ಎಲ್ಲಾ ವಸ್ತುಗಳನ್ನು ಸುಮ್ಮನೆ ಹಾಗೆ, ನಿಮ್ಮ ಮನಸ್ಸಿನಲ್ಲೇ ಒಡೆದು ಹಾಕಿ ನೋಡಿ. ನೀವು ನಿಮ್ಮೊಂದಿಗೆ ಗುರುತಿಸಿಕೊಂಡ ಎಲ್ಲ ವಿಷಯಗಳು ಮತ್ತು ವಸ್ತುಗಳ ಬಗ್ಗೆ ಆಗ ತಿಳಿಯುವಿರಿ.

ಸಣ್ಣ ವಿಷಯಗಳು, ದೊಡ್ಡ ವಿಷಯಗಳು, ನಿಮ್ಮ ಸ್ವಂತ ಮನೆ, ನಿಮ್ಮ ಕುಟುಂಬ, ಎಲ್ಲವನ್ನೂ ಮಾನಸಿಕವಾಗಿ ದೂರಾಗಿಸಿಕೊಂಡು ನೋಡಿ. ಹಾಗೆ ಮಾಡಿದಾಗ ನಿಮಗೆ ನೋವನ್ನುಂಟು ಮಾಡಿದ ಎಲ್ಲಾ ವಿಷಯಗಳ ಜೊತೆ ನೀವು ಗುರುತಿಸಿಕೊಂಡಿದ್ದೀರ ಎನ್ನುವುದು ನಿಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಹೀಗಿದ್ದಾಗ, ನಿಮ್ಮ ಮನಸ್ಸು ನಿಲ್ಲಿಸಲು ಬಾರದಂತಹ ಒಂದು ಎಕ್ಸ್‌ಪ್ರೆಸ್ ರೈಲಿನಂತಾಗುತ್ತದೆ. ನೀವೇನೇ ಮಾಡಿದರೂ ಸಹ ಅದು ನಿಲ್ಲುವುದಿಲ್ಲ. ಮನಸ್ಸು ಹೀಗೆ ವೇಗವಾಗಿ ಓಡುತ್ತಿರುವಾಗ ನೀವದಕ್ಕೆ ಬ್ರೇಕ್ ಹಾಕಲು ಹೋದರೆ ಅದು ಕೆಲಸ ಮಾಡುವುದಿಲ್ಲ. ನೀವು ಯಾವುದೇ ವಾಹನಕ್ಕೆ ಬ್ರೇಕ್ ಹಾಕುವ ಮೊದಲು, ಅದರ ವೇಗವನ್ನು ಹತೋಟಿಗೆ ತಂದುಕೊಳ್ಳುವುದು ಅತ್ಯವಶ್ಯಕ.


ಬೂಕನಕೆರೆಯಲ್ಲಿ ಜನನ... ಶಿಕಾರಿಪುರದಲ್ಲಿ ರಾಜಕೀಯ ಜನ್ಮ...
ಸಮಸ್ತ ಕಾರ್ಯಕರ್ತರ ಪಾಲಿಗೆ ಸದಾ ಅಪ್ಪಾಜಿಯಾದವರು!

–ಪ್ರತಾಪ್ ಸಿಂಹ, ಮಾಜಿ ಸಂಸದ

ಅವತ್ತು 2008, ಮೇ 30. ಹೆಗಲ ಮೇಲೆ ಹಸಿರು ಶಾಲು ಹಾಕಿಕೊಂಡು, ನಾನು ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ... ಎನ್ನುತ್ತಾ ಅವರು ಪ್ರಮಾಣ ವಚನ ಸ್ವೀಕರಿಸುತ್ತಿದ್ದರೆ ವಿಧಾನಸೌಧದ ಎದುರು ನೆರೆದಿದ್ದ ಸಾವಿರ–ಸಾವಿರ ಸಂಖ್ಯೆಯ ಬಿಜೆಪಿ ಕಾರ್ಯಕರ್ತರು, ಟೀವಿ ಮುಖಾಂತರ ವೀಕ್ಷಿಸುತ್ತಿದ್ದ ಲಕ್ಷಾಂತರ ಬಿಜೆಪಿ ಕಟ್ಟಾಳುಗಳು, ಹಿತೈಷಿಗಳು ಸಂಭ್ರಮಿಸುತಿದ್ದರು. 2007ರಲ್ಲಿ ಎಂಟೇ ದಿನಕ್ಕೆ ಅಧಿಕಾರ ಕಳೆದುಕೊಂಡ ನೋವಿಗೆ ಅವತ್ತು ಮುಲಾಮು ಹಚ್ಚಿದಂತಿತ್ತು. ಪ್ರಮಾಣ ವಚನ ಸಮಾರಂಭಕ್ಕೆ ಈಗಿನ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದೀಜಿ, ಆಡ್ವಾಣಿ, ಪ್ರಕಾಶ್ ಸಿಂಗ್ ಬಾದಲ್, ವೆಂಕಯ್ಯನಾಯ್ಡು ಸೇರಿದಂತೆ ಎಲ್ಲ ಗಣ್ಯಮಾನ್ಯರು ಬಂದಿದ್ದರು. ಉತ್ತರ ಭಾರತಕ್ಕೆ ಸೀಮಿತವಾಗಿದ್ದ ಬಿಜೆಪಿ ಮೊದಲ ಭಾರಿಗೆ ಯಡಿಯೂರಪ್ಪನವರ ಮೂಲಕ ದಕ್ಷಿಣದಲ್ಲಿ ಅಧಿಕಾರ ಹಿಡಿದಿತ್ತು. ಮುಖ್ಯಮಂತ್ರಿಯಾದ ನಂತರ ಯಾರಾದರೂ ಕಾರ್ಯಕರ್ತರು ಯಾವುದಾದರೂ ಕೆಲಸ, ಮನವಿ ಹಿಡಿದುಕೊಂಡು ಹೋದರೆ 'ಘಟನೋತ್ತರ ಆದೇಶಕ್ಕಾಗಿ ಕಡತ ಮಂಡಿಸುವುದು– ಬಿಎಸ್‌ವೈ' ಎಂದು ಸಹಿ ಹಾಕುವಂಥ ದಾಢಸಿತನ ತೋರಿದರು!

ನಮ್ಮ ಕಾರ್ಯಕರ್ತರು ಯಡಿಯೂರಪ್ಪನವರು ಚುನಾವಣಾ ರಾಜಕಾರಣದಿಂದ ಹಿಂದೆ ಸರಿದು ರಾಜಕೀಯ ಸಂಧ್ಯಾಕಾಲದಲ್ಲಿದ್ದರೂ ಇವತ್ತಿಗೂ ಅವರನ್ನು ಪ್ರೀತಿಸುವುದಕ್ಕೆ, ಗೌರವಿಸುವುದದಕ್ಕೆ ಇಂಥ ಅಸಂಖ್ಯ ಉದಾಹರಣೆಗಳೇ ಕಾರಣ. ಇಂಥ ಉದಾಹರಣೆಗಳಿಂದಲೇ ಕಾರ್ಯಕರ್ತರು ಅವರನ್ನು ಯಡಿಯೂರಪ್ಪ ಸಾಹೇಬರು ಅನ್ನುವುದನ್ನು ಬಿಟ್ಟು 'ಅಪ್ಪಾಜಿ' ಎನ್ನಲಾರಂಭಿಸಿದರು. ಮೂಗಿನ ತುದಿಯಲ್ಲೇ ಕೋಪ, ಪೆಟ್ಟು ಬಿದ್ದರೂ ಆಶ್ಚರ್ಯವಿಲ್ಲ, ಮೂಡು ನೋಡಿ ಮಾತನಾಡಬೇಕು. ಆದರೆ ರಾಜಕೀಯಕ್ಕೆ ಇವೆಲ್ಲ ಪೂರಕ ಅಂಶಗಳಲ್ಲ. ಆದರೂ ಹುಟ್ಟು ಕೋಪಿಷ್ಟನೊಬ್ಬ ಹೇಗೆ ಅಪ್ಪಾಜಿಯಾದರು ಎಂದರೆ ಅವರು ಶೀಘ್ರ ಕೋಪಿಯೇ ಹೊರತು ದೀರ್ಘ ದ್ವೇಷಿಯಲ್ಲ. ಕೋಪ ತಣಿದ ಕೂಡಲೇ ಕರೆಸಿ ಉಪ್ಪಿಟ್ಟು ತಿನ್ನಿಸಿ, ಕೆಲಸ ಮಾಡಿಕೊಟ್ಟು ಕಳುಹಿಸುತ್ತಿದ್ದರು. ಸಾರ್ವಜನಿಕವಾಗಿ ಅವರಲ್ಲಿ ಕಾಣುತ್ತಿದ್ದ ಸಿಟ್ಟು ಸಾತ್ವಿಕವಾಗಿರುತ್ತಿತ್ತು. ಯಡಿಯೂರಪ್ಪನವರ ಸಿಟ್ಟು ಸೆಡವುಗಳ ಹಿಂದೆ ಹೆಂಗರುಳೂ ಇದೆ. ಅದಕ್ಕೆ ಉದಾಹರಣೆ ಬೇಕಾ?

ಬಡವನ ಮನೆಯಲ್ಲಿ ಹೆಣ್ಣು ಮಗಳು ಹುಟ್ಟಿದರೆ ಅವಳು ಮನೆಗೆ ಭಾರವಲ್ಲ, ಅವಳು ಮನೆಯ 'ಭಾಗ್ಯಲಕ್ಷ್ಮಿ' ಎಂದು ಯೋಜನೆಯನ್ನೇ ತಂದರು. ಅವಳ ಭವಿಷ್ಯಕ್ಕಾಗಿ ಒಂದು ಲಕ್ಷ ರೂಪಾಯಿಯ ಯೋಜನೆ ಅದಾಗಿತ್ತು. ಆ ಹೆಣ್ಣುಮಗಳ ಶಾದಿ ಬಗ್ಗೆ ಯೋಚಿಸಲಿಲ್ಲ. ಅವಳನ್ನ ಶಾಲೆಗೆ ಸೇರಿಸಿ ವಿದ್ಯಾಲಕ್ಷ್ಮೀಯನ್ನಾಗಿ ಮಾಡುವುದಕ್ಕಾಗಿ ಸೈಕಲ್ ಕೊಟ್ಟರು. ರೆಕ್ಕೆ ಪುಕ್ಕ ಬಂದ ಮೇಲೆ ಗೂಡು



ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ತೊರೆದು ಹಾರಿಹೋಗುವ ಹಕ್ಕಿಗಳಂತೆ ವೃದ್ಧ ತಂದೆ–ತಾಯಂದಿರನ್ನು ಊರಲ್ಲಿ ಬಿಟ್ಟು ಮಕ್ಕಳು ಪೇಟೆ ಸೇರಿದರೇನಂತೆ ಆಳುವ ಪಕ್ಷಕ್ಕೆ ಹಿರಿಯರನ್ನು ಸಾಕಿ ಸಲಹುವ ಸಾಮಾಜಿಕ ಜವಾಬ್ದಾರಿಯಿದೆಯೆಂದು ಅರಿತು ಸಂಧ್ಯಾ ಸುರಕ್ಷಾ ಯೋಜನೆಯನ್ನು ಜಾರಿಗೆ ತಂದರು. ವೃದ್ಧಾಪ್ಯ, ವಿಧವಾ ವೇತನವನ್ನು ಹೆಚ್ಚಿಸಿದರು. ನಲವತ್ತು ವರ್ಷ ದಾಟಿದ ಅವಿವಾಹಿತ ಹೆಣ್ಣು ಮಕ್ಕಳನ್ನೂ ಪಿಂಚಣಿ ಯೋಜನೆಯ ವ್ಯಾಪ್ತಿಗೆ ತಂದರು.

ಈ ದಿನ ಜನುಮ ದಿನ

ರೈತರ ವಿಷಯ ಬಂದರೆ ಅವರು ಮೃದುವಾಗುತ್ತಿದ್ದರು. ಉಪಮುಖ್ಯಮಂತ್ರಿಯಾಗಿದ್ದಾಗ ಸಾಲ ಮನ್ನಾ ಮಾಡಿದ್ದ ಅವರು, ಮುಖ್ಯಮಂತ್ರಿಯಾದ ನಂತರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿದ್ದ ಸಾಲವನ್ನೂ ಒಳಪಟ್ಟಂತೆ ರೈತನ ಬಡ್ಡಿ ಮನ್ನಾ ಮಾಡಿದರು. ಕರೆಂಟಿನ ಬಿಸಿಯಲ್ಲಿ ರೈತನ ಬದುಕು ಮತ್ತು ಬೆಳೆ ಸುಟ್ಟು ಹೋಗಬಾರದೆಂದು ಭಾವಿಸಿ ಆತನ ಲಕ್ಷಾಂತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಿದರು. ಹಾಗಾಗಿಯೇ ರಾಜ್ಯದಲ್ಲಿರುವ ಬರಪೀಡಿತ ಪ್ರದೇಶಗಳಲ್ಲೆಲ್ಲ ಕುಡಿಯುವ ನೀರು ಪೂರೈಕೆ ಹಾಗೂ ಕೆರೆಗಳಿಗೆ ನೀರು ತುಂಬಿಸುವ ಕಾಯಕಕ್ಕೆ ಕೈಹಾಕಿದರು. ಜೋಳಕ್ಕೆ, ಭತ್ತಕ್ಕೆ ಕೇಂದ್ರ ಸರ್ಕಾರ ಕೊಡುವ ಕನಿಷ್ಟ ಬೆಂಬಲ ಬೆಲೆಗೆ 150 ರೂ. ಸೇರಿಸಿಕೊಟ್ಟು ಖರೀದಿ ಮಾಡಿದರು.

ಕಳೆದ ಮೂರು ದಶಕಗಳನ್ನು ನೋಡಿದರೆ ನಮ್ಮ ರಾಜ್ಯದ ಒಂದಿಲ್ಲೊಂದು ಭಾಗಗಳು ಬರ, ನೆರೆಗೆ ತುತ್ತಾಗುತ್ತಲೇ ಬಂದಿವೆ. ಆದರೆ ಒಬ್ಬ ಮುಖ್ಯಮಂತ್ರಿಯಾದವರಿಗೆ ದೂರದೃಷ್ಟಿ ಇರಬೇಕಾಗುತ್ತದೆ. ಎಸ್.ಎಂ.ಕೃಷ್ಣ ಅವರು ಮೂರು ವರ್ಷಗಳ ಸತತ ಬರ ಬಂದಾಗ ಅಂತರ್ಜಲ ಮಟ್ಟವನ್ನು ಹೆಚ್ಚಿಸಬೇಕಾದರೆ ಬೀಳುವ ಹನಿ ಹನಿ ನೀರನ್ನೂ ಕಾಪಿಟ್ಟುಕೊಳ್ಳಬೇಕೆಂದು ಭಾವಿಸಿ ಕೆರೆಗಳ ಪುನಶ್ಚೇತನಕ್ಕೆಂದೇ ಕಾಯಕ ಕೆರೆ ಎಂಬ ಯೋಜನೆ ಜಾರಿಗೆ ತಂದಿದ್ದರು. ಅದೇ ರೀತಿ ಬರ ಎದುರಿಸುತ್ತಿದ್ದ ಚಾಮರಾಜನಗರ ಜಿಲ್ಲೆಯ ಕೆರೆಗಳು ನೀರಿಗಾಗಿ ಬಾಯ್ಬಿಟ್ಟುಕೊಂಡು ಕುಳಿತಿವೆ, ಬತ್ತಿದ ಕೆರೆಗಳಿಂದಾಗಿ ದನಕರುಗಳು ಬಳಲಿವೆ ಎಂಬುದನ್ನು ಕಂಡ ಕೂಡಲೇ 19 ಕೆರೆಗಳಿಗೆ ಕಬಿನಿಯಿಂದ ನೀರು ತುಂಬಿಸಲು 219 ಕೋಟಿ ರೂಪಾಯಿಯನ್ನು ನಿಂತಲ್ಲೇ ಬಿಡುಗಡೆ ಮಾಡಿದವರು ಬಿಎಸ್‌ವೈ.

> ▶ ಕಳೆದ ಮೂರು ದಶಕಗಳನ್ನು ನೋಡಿದರೆ ನಮ್ಮ ರಾಜ್ಯದ ಒಂದಿಲ್ಲೊಂದು ಭಾಗಗಳು ಬರ, ನೆರೆಗೆ ತುತ್ತಾಗುತ್ತಲೇ ಬಂದಿವೆ. ಆದರೆ ಒಬ್ಬ ಮುಖ್ಯಮಂತ್ರಿಯಾದವರಿಗೆ ದೂರ ದೃಷ್ಟಿ ಇರಬೇಕಾಗುತ್ತದೆ. ಎಸ್.ಎಂ.ಕೃಷ್ಣ ಅವರು ಮೂರು ವರ್ಷಗಳ ಸತತ ಬರ ಬಂದಾಗ ಅಂತರ್ಜಲ ಮಟ್ಟವನ್ನು ಹೆಚ್ಚಿಸಬೇಕಾದರೆ ಬೀಳುವ ಹನಿ ಹನಿ ನೀರನ್ನೂ ಕಾಪಿಟ್ಟುಕೊಳ್ಳಬೇಕೆಂದು ಭಾವಿಸಿ ಕೆರೆಗಳ ಪುನಶ್ಚೇತನಕ್ಕೆಂದೇ ಕಾಯಕ ಕೆರೆ ಎಂಬ ಯೋಜನೆ ಜಾರಿಗೆ ತಂದಿದ್ದರು. ಅದೇ ರೀತಿ ಬರ ಎದುರಿಸುತ್ತಿದ್ದ ಚಾಮರಾಜನಗರ ಜಿಲ್ಲೆಯ ಕೆರೆಗಳು ನೀರಿಗಾಗಿ ಬಾಯ್ಬಿಟ್ಟುಕೊಂಡು ಕುಳಿತಿವೆ, ಬತ್ತಿದ ಕೆರೆಗಳಿಂದಾಗಿ ದನ–ಕರುಗಳು ಬಳಲಿವೆ ಎಂಬುದನ್ನು ಕಂಡ ಕೂಡಲೇ 19 ಕೆರೆಗಳಿಗೆ ಕಬಿನಿಯಿಂದ ನೀರು ತುಂಬಿಸಲು 219 ಕೋಟಿ ರೂಪಾಯಿಯನ್ನು ನಿಂತಲ್ಲೇ ಬಿಡುಗಡೆ ಮಾಡಿದವರು ಬಿಎಸ್‌ವೈ.

2013ರಲ್ಲಿ ಸಿದ್ದರಾಮಯ್ಯನವರ ಸರ್ಕಾರ ಅಸ್ತಿತ್ವಕ್ಕೆ ಬಂದ ಪ್ರಾರಂಭದಲ್ಲಿ ಬೆಳಗಾವಿ ಅಧಿವೇಶನದಲ್ಲಿ ಕಬ್ಬು ಬೆಳೆಗಾರ ವಿಠ್ಠಲ ಅರಭಾವಿ ಆತ್ಮಹತ್ಯೆ ಮಾಡಿಕೊಂಡ. ಅವರು ವಾರಕ್ಕೊಮ್ಮೆ ಬರುವ ಮೈಸೂರಿನ ಮಾರ್ಗ ಮಧ್ಯದಲ್ಲಿ ಸಿಗುವ ಮಂಡ್ಯದಲ್ಲಿ ತಾನೇ ಬೆಳೆದ ಕಬ್ಬಿನ ಗದ್ದೆಗೆ ಬೆಂಕಿಕೊಟ್ಟು ರೈತ ಸುಟ್ಟುಕೊಂಡು ಸಾವಾದ. ಆದರೆ ಸಿದ್ದರಾಮಯ್ಯನವರ ಸ್ಪಂದನೆ ಹೇಗಿತ್ತು? ಅದಕ್ಕೂ ಮೊದಲು ಮುಖ್ಯಮಂತ್ರಿಯಾಗಿದ್ದ ಬಿಎಸ್‌ವೈ ಕೂಡ ಕಬ್ಬು ಬೆಳೆಗಾರರ ಸಮಸ್ಯೆ ಎದುರಿಸಿದ್ದರು. ಕೂಡಲೇ ಸಕ್ಕರೆ ಕಾರ್ಖಾನೆಗಳ ಪುನಶ್ಚೇತನಕ್ಕೆ ಕೈಹಾಕಿದರು. ಬರ, ನೆರೆಯಂಥ ಪ್ರಕೃತಿ ವಿಕೋಪಗಳಾದರೆ ಕೂಡಲೇ ರೈತನ ಸಂಕಷ್ಟಕ್ಕೆ ಸ್ಪಂದಿಸಲು 500 ಕೋಟಿಯನ್ನು ಮೀಸಲಿಡುವ ಆವರ್ತ ನಿಧಿಯನ್ನು ಆರಂಭಿಸಿದರು.

ರಾಜಕೀಯವಾಗಿಯೂ ಸೋಷಿಯಲ್ ಎಂಜಿನಿಯರಿಂಗನ್ನು ಯಡಿಯೂರಪ್ಪನವರು 2008ರಲ್ಲಿ ಮುಖ್ಯಮಂತ್ರಿಯಾದ ಕೂಡಲೇ ಆರಂಭಿಸಿದ್ದರು. ಸಣ್ಣ–ಸಣ್ಣ ಜಾತಿಗಳನ್ನೂ ಗುರುತಿಸಿ ಸಮಾವೇಶ ನಡೆಸಿದರು, ಅವರ ಬೇಡಿಕೆ, ನೋವನ್ನು ಆಲಿಸಿ ಸ್ಪಂದಿಸುವ ಕೆಲಸ ಮಾಡಿದರು. ಅವರಲ್ಲಿ



ನಾಯಕತ್ವ ಬೆಳೆಸುವ ಕಾರ್ಯಕ್ಕೂ ಕೈಹಾಕಿದ್ದರು. ನಮ್ಮ ಹಿಂದುಳಿದ ಜಾತಿ, ವರ್ಗ, ಜನಾಂಗಗಳಲ್ಲಿ ಹೆಮ್ಮೆಯನ್ನು ಮೂಡಿಸಬೇಕೆಂದು ಕನಕ, ವಾಲ್ಮೀಕಿ ಜಯಂತಿಯನ್ನು ಆರಂಭಿಸಿದರು. ಇಂತಹ ಆದರ್ಶ ವ್ಯಕ್ತಿಯನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ಹೆಮ್ಮೆಯಿಂದ ಮುನ್ನಡೆಯಿರಿ ಎಂಬ ಸಂದೇಶ ಕೊಟ್ಟಿದ್ದರು. 24 ಕೋಟಿ ಕೊಟ್ಟು ಕನಕ ಪ್ರಾಧಿಕಾರ ರಚಿಸಿದರು. ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿ ಅಂಬೇಡ್ಕರ್, ಬಾಬು ಜಗಜೀವನ್‌ರಾಮ್, ವಾಲ್ಮೀಕಿ, ಕನಕ ಭವನಗಳ ನಿರ್ಮಾಣಕ್ಕೆ ಕೈಹಾಕುವ ಮೂಲಕ ಮದುವೆ, ಮುಂಜಿ ಅಥವಾ ಯಾವುದೇ ಸಮಾರಂಭವಿರಲಿ, ಎಲ್ಲರಂತೆ ಭವ್ಯ ಕಟ್ಟಡಗಳಲ್ಲೇ ಆಚರಿಸಿ ಎಂದು ಸಾಮಾಜಿಕ ನ್ಯಾಯ ಸ್ಥಾಪನೆಗೆ ಮುಂದಾದವರು ಬಿಎಸ್‌ವೈ. ಕನಕ ಜಯಂತಿ, ವಾಲ್ಮೀಕಿ ಜಯಂತಿಗೆ ರಜಾ ಘೋಷಣೆ ಮಾಡಿದ್ದೇ ಅವರು.

ಬಸವ ವಸತಿ ಯೋಜನೆ ಆರಂಭಿಸಿ ಪ್ರತಿ ಪಂಚಾಯಿತಿಗೆ ಗರಿಷ್ಠ 300 ಮನೆಗಳನ್ನು ಕೊಟ್ಟರು. ಅಷ್ಟೇ ಅಲ್ಲ, ಪ್ರತಿ ನಗರ ಸಭೆಗಳಿಗೆ 25 ಕೋಟಿ, ಮಹಾನಗರಪಾಲಿಕೆಗಳಿಗೆ ತಲಾ ವಾರ್ಷಿಕ 50 ಕೋಟಿ ನೀಡಿದ್ದರು. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗೆ ಸೋನಿಯಾ ಗಾಂಧಿ ನಿಯಂತ್ರಿತ ಯುಪಿಎ ಸರ್ಕಾರ ದುಡ್ಡೇ ಕೊಡದೇ ಹೋದಾಗ, ನೀವು ಕೊಡದಿದ್ದರೇನಂತೆ ನಾನೇ ಗ್ರಾಮಗಳ ರಸ್ತೆಯನ್ನು ಅಭಿವೃದ್ಧಿ ಮಾಡುತ್ತೇನೆಂದು ನಮ್ಮ ಗ್ರಾಮ; ನಮ್ಮ ರಸ್ತೆ ಯೋಜನೆಯನ್ನು ಜಾರಿಗೆ ತಂದರು. 4 ಸಾವಿರ ಸುವರ್ಣ ಗ್ರಾಮಗಳನ್ನು ತಲಾ 75 ಲಕ್ಷದಿಂದ 2 ಕೋಟಿ ವರೆಗೂ ನೀಡಿ ಅಭಿವೃದ್ಧಿಪಡಿಸಿದರು.

ಅವರು 2008ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಬೆಳಗ್ಗೆ 8 ಗಂಟೆಯ ತಿಂಡಿಗೆ ಮೊದಲು ಆ ದಿನದ ಎಲ್ಲ ಪತ್ರಿಕೆಗಳ ವರದಿಗಳನ್ನು ಪಟ್ಟಿ ಮಾಡಿ, ಸಮಸ್ಯೆ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ಸಿದ್ಧಮಾಡಿ ಅಧಿಕಾರಿಗಳು ಅವರ ಟೇಬಲ್ಲಿನ ಮೇಲಿಟ್ಟಿರಬೇಕಿತ್ತು. ಸೂಕ್ತ ಕ್ರಮಕ್ಕೆ ಸೂಚನೆ ಕೊಟ್ಟ ನಂತರವೇ ಬ್ರೇಕ್ ಫಾಸ್ಟ್.

ಅದು ಯಾರೇ ಆಗಿರಲಿ, ಯಾವುದೇ ವ್ಯಕ್ತಿಯನ್ನು ಇಡಿ ಇಡಿಯಾಗಿ ಒಪ್ಪಿಕೊಳ್ಳುವುದು ಯಾರಿಗೂ ಸಾಧ್ಯವಿಲ್ಲ. ಬಿಡಿ ಬಿಡಿಯಾಗಿ ವ್ಯಕ್ತಿಯ ಕೆಲಸ, ಸಾಧನೆ, ಸಂವೇದನೆಯನ್ನು ನೋಡಿದಾಗ ಮನಸ್ಸಿಗೆ ಹತ್ತಿರವಾಗುತ್ತಾರೆ. ಯಡಿಯೂರಪ್ಪ ಸಾಹೇಬರು ನಮಗೆ ಅಪ್ಪಾಯಮಾನರಾಗುವುದು ಇದೇ ಕಾರಣಕ್ಕೆ. ಐವತ್ತು ವರ್ಷಗಳ ರಾಜಕೀಯ ಜೀವನದೊಂದಿಗೆ ಇವತ್ತು 84ನೇ ವರ್ಷಕ್ಕೆ ಕಾಲಿಡುತ್ತಿದ್ದಾರೆ. ಹ್ಯಾಪಿ ಬರ್ತ್ ಡೇ ಸರ್!

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

AFFIDAVIT

I, **Jacqueline Antony**, 64 years, W/o. Gerard Antony, residing at # 180, 3rd Main, 9th Cross, Siddivinayaka Block, Teachers layout, Mysuru-570011, do hereby state that my correct name is **Jacqueline Antony**. But in my Passport No. **H9937697**my name is wrongly mentioned as **Jaqueline Antony.** Hence I solemnly affirm on oath for necessary spelling correction of my name as **'Jacqueline Antony'** in my passport, vide affidavit sworn before Notary SATHISH.M.K, Mysore on 26.02.2026.

Sd/- Jacqueline Antony

PUBLIC NOTICE

My Clients DR.N.SIDDHARTH SHANKAR & DR.RADHIKAY.G.negotiating to purchase the property more fully described in the schedule below from its Owners SRI. T.SHANKARANARAYAN, SMT.T. JAYALAKSHMI, SRI. T.RAMESH, SMT. T. LALITHA & SRI. T.HARISH children's of Late. Thimmegowda. Any person/s, interested parties, claimants, Agreement Holders, Banks, Financial institutions and/or statutory authorities having/ asserting any right, title, interest, claims of any nature or any lien, charge, enforceable right or intending to oppose the development and/or has/have any objections of any nature to the aforesaid transaction should lodge such claims or objections in writing to the undersigned together with documentary proof/-supporting documents within SEVEN DAYS from the date of publication of this notice, failing which it will be presumed that no valid claims or objections subsist and where after no such claims will be entertained.

SCHEDULE

The Site bearing No. 221 measuring East to West 12.1920 Meters (40 Feet) and North to South 18.288037 Meters (60 Feet), Total 222.9677 Square Meters situated at Thonachikoppal Layout, Saraswathipuram, Chamaraja Mohalla, Mysore and as per Namoone -2 (Niyama-20) Property No. 20-1-588-221 Ward No.20, New Ward No. 47 Property Old No. 221 of Mysore City Corporation, Mysore and bounded on: East by: Site No. 220, West by: Site No. 222, North by: Road & South by: Site No.204

Sd/- A.N. Puttaswamy Gowda. B.A. LL.B
Advocate & Notary
#324/1, 1st Floor, D.Subbaiah Road,
Near Ramaswamy Circle, Mysore
Date: 26-02-2026 mob: 9731948535



PUBLIC NOTICE

Our client proposes to acquire absolute ownership of the residential house property which is more fully described in the schedule below referred to as the **"Property"**, from its present owner **"SHELL INDIA MARKETS PRIVATE LIMITED"** Represented by GURPREET ARORA, Office at# PRESTIGE ROYALE GARDENS TOWERS 10, Flat No.1007/2, Doddabalapur Road, Yelahanka, Bengaluru North, Jakkur, Bengaluru-560 064. The Owner has represented that, it has not mortgaged, created any lien or encumbered the Property or part thereof in any manner and that the Owner has not entered into any other agreement of sale/development agreement/ memorandum of understanding /arrangement etc., with any person/s with regard to the Property. The Owner has further represented that it is the absolute owner of the Property having clear and marketable, right, title and interest therein and that apart from them, there is no other person/s having any right, title or claim over the Property. Any person/s, entity, trust, firm, HUF, institution (corporate or otherwise) having claims, demand, right, title or interest, minor's claim or any right of whatsoever nature capable of establishing such claim, demand, right, title or interest with respect to the Property shall lodge their written objections/claims together with all documentary evidence within seven (7) days from the date of this notice with the undersigned. Failing to do so, it shall be presumed that, the ownership and title of the Owner with respect to the Property is clear, marketable, and free from all encumbrances of any kind whatsoever, and our client shall then proceed to complete the proposed sale transaction. Any claims or alleged interests, which are received without documentary evidence or received after seven (7) days from the date of publication of this notice, shall be deemed to be invalid and not binding on the parties to the proposed transaction.

SCHEDULE OF THE PROPERTY:

All that piece and parcel of the site bearing No.32, as per MCC issued Form 2 bearing Property No.9985399904 carved out in Survey 147, measuring 14,476 Sqaure Feet or 1344.863828 Square Meters situated at, Metagalli, Devaraja Mohalla, Ward No.04, Mysuru, Karnataka, bounded on the: East by : Mysore- KRS Road, West by : Road, North by : Private Property, South by Site No.31.

Sd/- **DINESH SOLANKI**
Advocate, #1197, 12/2, KRB Road,
Chamarajapuram, Mysuru,
Date:26.02.2026. Ph: 9343430011
advdineshsolanki@rediffmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಬಯಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀಮತಿ ಶ್ವೇತ.ಎಸ್.ಆರ್ ಬಿನ್ ರಾಜಣ್ಣ.ಎಸ್.ಜಿ ಕೋಂ ಮಧು.ಎಸ್.ಪಿ, ವಯಸ್ಸು ಸುಮಾರು 41 ವರ್ಷ, ವಾಸ : ಮನೆ ನಂ.31, ಎ-ಬ್ಲಾಕ್, 5ನೇ ಮುಖ್ಯ ರಸ್ತೆ, ದಟ್ಟಗಳ್ಳಿ 3ನೇ ಹಂತ, ಮೈಸೂರು-570023 ರವರು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಲ್ಲಹಳ್ಳಿ (ಬೀರಿಹುಂಡಿ) ಗ್ರಾಮಕ್ಕೆ ಸೇರಿದ ಸರ್ವೆ ನಂ.70/6 ರಲ್ಲಿನ 1 ಎಕರೆ 11 ಗುಂಟೆ ಜಮೀನನ್ನು (ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತು) ಇದರ ಪ್ರಸ್ತುತ ಮಾಲೀಕರಾದ ಶ್ರೀ ಬೋಳೇಗೌಡ ಬಿನ್ ಲೇಟ್ ರಾಮೇಗೌಡ, ವಯಸ್ಸು ಸುಮಾರು 95 ವರ್ಷ, ವಾಸ : ಮನೆ ನಂ.101/ಎ, ಬೀರಿಹುಂಡಿ ಗ್ರಾಮ ಮತ್ತು ಅಂಚೆ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರಿಂದ ಖರೀದಿಸಲು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರಿಗಾದರು, ಯಾವುದೇ ತರಹದ ಹಕ್ಕು-ಬಾಧ್ಯತೆಗಳು ಇದ್ದ ಪಕ್ಷದಲ್ಲಿ, ಸದರಿ ವ್ಯಕ್ತಿಗಳು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ನಿಮ್ಮ ಹಕ್ಕು-ಬಾಧ್ಯತೆಗಳನ್ನು ಈ ಸಾರ್ವಜನಿಕ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗಾಗಿ ತಿಳಿಸತಕ್ಕದು. ತಪ್ಪಿದಲ್ಲಿ ಯಾವುದೇ ಹಕ್ಕು ಬಾಧ್ಯತೆಗಳು ಇರುವುದಿಲ್ಲವೆಂದು ಭಾವಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಲ್ಲಹಳ್ಳಿ (ಬೀರಿಹುಂಡಿ) ಗ್ರಾಮಕ್ಕೆ ಸೇರಿದ ಸರ್ವೆ ನಂ.70/6 ರಲ್ಲಿನ 1 ಎಕರೆ 11 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ:ಪೂರ್ವಕ್ಕೆ: ಶ್ರೀ.ಬೋಳೇಗೌಡ ರವರ ಜಮೀನು, ಪಶ್ಚಿಮಕ್ಕೆ: ಡಿ.ಮಾದೇಗೌಡ ರವರ ಜಮೀನು, ಉತ್ತರಕ್ಕೆ: ಹೊಟ್ಟೆಕರಿಯನ ಜವರೇಗೌಡ ರವರ ಜಮೀನು, ದಕ್ಷಿಣಕ್ಕೆ : ಕುಂಟೇಗೌಡ ರವರ ಜಮೀನು.

ಸಹಿ/- ಕೆ.ಎಸ್. ಮಹದೇವಪ್ರಸಾದ್, ವಕೀಲರು,
ಕೆ.ಎ.ಆರ್ ನಂ. 1353/2002, ನಂ. 1028,ಸಿ.ಹೆಚ್-20/ಡಿ, ರೂಂ ನಂ. 2 ರಿಂದ 4, 1ನೇ ಮಹಡಿ,
ಜಯಲಕ್ಷ್ಮೀ ವಿಲಾಸ ರಸ್ತೆ, ಚಾಮರಾಜಪುರಂ,
ಮೈಸೂರು-570 005. Mob: 9164277766
Date: 26-02-2026



ಹೆಸರು ಬದಲಾವಣೆ

ರಮಾಕಾಂತ ಹೆಗಡೆ S/o ರಾಮಚಂದ್ರ ಹೆಗಡೆ, ನಂ. 135, ಬಿ ಬ್ಲಾಕ್, 23ನೇ ಮೇನ್, ವಿಜಯನಗರ 3ನೇ ಹಂತ, ಮೈಸೂರು, ಇಲ್ಲಿ ವಾಸವಾಗಿದ್ದು, ನನ್ನ ಸ್ವಂತ ಇಚ್ಛೆಯ ಮೇರೆಗೆ ನನ್ನ ಹೆಸರನ್ನು ರಮಾಕಾಂತ ಹೆಗಡೆ (Ramakanta Hegde) ಎಂಬುದರ ಬದಲು ರಮಾಕಾಂತ ಹೆಗಡೆ (Ramakanth Hegde) ಎಂದು ಬದಲಾಯಿಸಿರುತ್ತೇನೆ, ನೋಟರಿ ಕುಸುಮಾ ಆರ್. ಮೈಸೂರು ಅವರ ಮುಂದೆ ದಿನಾಂಕ: 26-02-2026 ರಂದು ಪ್ರಮಾಣೀಕರಿಸುತ್ತೇನೆ.

ಸಹಿ/- ರಮಾಕಾಂತ ಹೆಗಡೆ(Ramakanth Hegde)

PUBLIC NOTICE

NOTICE IS HERE BY GIVEN to the public that my client is intending to purchase schedule properties Item No. 1 and Item No. 2 from Smt. G.P. Sowbhagya W/o Late Rajendra Residing at Putthanapura Village, Hangala Hobli, Gundlupete Taluk, Chamarajanagara District and have been negotiating the formalities of sale of the schedule properties.

All or any person/s having any claim of any nature whatsoever in the Schedule Properties by way of Sale, exchange, lease, license, trust, lien, easement, inheritance, possession, attachment, mortgage, charge, Gift, or otherwise of any nature whatsoever including any financial institutions, are hereby required to make the same known in writing with copies of all supporting documents to the undersigned within SEVEN DAYS from the date of publication of this Notice, failing which the same shall be deemed to have been waived and my client will proceed and finalize the sale transaction after the expiry of the above period.

SCHEDULE

Item No.1

All that piece and parcel of Agricultural Dry land bearing Old Sy. No. 186 New Sy. No. 186/2 measuring 1 Acre 31.08 guntas, situated at Puthanapura Village, Hangala Hobli, Gundlupete Taluk, Chamarajanagar District.

Bounded on:- East by: Land bearing Sy. No. 186/1 ; West by: Land bearing Sy. No. 186/3 ; North by: Road ; South by : Land bearing Sy. No. 185/1.

Item No.2

All that piece and parcel of Agricultural Dry land bearing Old Sy. No. 186 New Sy. No. 186/3 measuring 1 Acre 24.08 guntas, situated at Puthanapura Village, Hangala Hobli, Gundlupete Taluk, Chamarajanagar District.

Bounded on:- East by: Land bearing Sy. No. 186/2 ; West by: Land bearing Sy. No. 183/1 ; North by: Road ; South by : Land bearing Sy. No. 185/1

Sd/- M.D. HARISH KUMAR HEGDE,
B.Com, LLB., M/s HEGDE ASSOCIATES
Advocates & Legal consultants, No. 1064, New CH-16, Hotel Airlines Complex, Jayalakshmivilas Road, Chamarajapuram, Mysore.
Date: 26-02-2026

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್.ಸ್ಟೇಷನ್ ಎದುರು, ಹೈಟೆನ್ಷನ್, ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ-570018
ಸಹಾಯವಾಣಿ ಸಂಖ್ಯೆ : 0821-2001737, E-Mail: ka.hootagalli.cmc@gmail.com

ಸಂಖ್ಯೆ: ನಸಹೂ/5%/ವಿ.ಸ್ಕೂ/ಸಿ.ಆರ್/01/2025-26 ದಿನಾಂಕ: 25.02.2026

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ)

ಕೆಪಿಪಿಪಿ 2000ರ ನಿಯಮದನ್ವಯ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ವಿಕಲಚೇತನರಿಗೆ ಮೂರು ಚಕ್ರದ ಸ್ಕೂಟರ್ ಅನ್ನು ನಗರಸಭಾ ಅನುದಾನದಲ್ಲಿ ಖರೀದಿಸಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ/ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಿಂದ ಟೆಂಡರ್ ಷರತ್ತು ಹಾಗೂ ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರಗಳಿಗೆ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು. ಇಂಡೆಂಟ್ ನಂ. **DMA/2025-26IND5958,** ಅಂದಾಜು ಮೊತ್ತ: **42.90** ಲಕ್ಷಗಳು ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **18.03.2026** ರ ಸಂಜೆ **5.30** ಗಂಟೆ ಸಲ್ಲಿಸಬಹುದಾಗಿದೆ. ಟೆಂಡರ್ ಅನ್ನು ತೆರೆಯುವ ದಿನಾಂಕ: **20.03.2026** ರ ಸಂಜೆ **5.00** ಗಂಟೆಗೆ.


ಸಹಿ/- ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿಸಾಯಿ/1743/2025-26

ಮರಳವಾಡಿ ಕೆರೆ ಪ್ರದೇಶದಲ್ಲಿ ಈಜುಕೊಳ ನಿರ್ಮಿಸಿ; ಕುವೆಂಪುನಗರಕ್ಕೆ ಸಮರ್ಪಕ ನಾಗರಿಕ ಸೌಲಭ್ಯ ಕಲ್ಪಿಸಿ

ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್ ಆಗ್ರಹ





ಕೆ.ವಿ.ಮಲ್ಲೇಶ್

ಮೈಸೂರು,ಫೆ.26–ಮೈಸೂರು ಮಹಾ ನಗರಪಾಲಿಕೆ ವ್ಯಾಪ್ತಿಯ ಕುವೆಂಪುನಗರವು ಶೈಕ್ಷಣಿಕ, ಸಾಂಸ್ಕೃತಿಕ, ವೈದ್ಯಕೀಯ, ವಾಣಿಜ್ಯ ವ್ಯವಹಾರ ಸೇರಿದಂತೆ ಬಹು ಚಟುವಟಿಕೆಗಳ ಬಡಾವಣೆಯಾಗಿದ್ದು, ಪರಿಸ್ಥಿತಿಗೆ ಅನುಗುಣವಾಗಿ ಸಮರ್ಪಕ ನಾಗರಿಕ ಸೌಲಭ್ಯಗಳನ್ನು ಕಲ್ಪಿಸುವಂತೆ ಅನಿ ಕೇತನ ಸೇವಾ ಟ್ರಸ್ಟ್ ಅಧ್ಯಕ್ಷ, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆಗ್ರಹಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಮೈಸೂರು ಸುತ್ತಮುತ್ತ ಜನವಸತಿ ಪ್ರದೇಶಗಳು ನಿರ್ಮಾಣವಾಗಿರುವುದರಿಂದ ಕುವೆಂಪು ನಗರ ಕೇಂದ್ರಸ್ಥಾನವಾಗಿ ರೂಪುಗೊಳ್ಳುತ್ತಿದೆ. ಅನೇಕ ಶೈಕ್ಷಣಿಕ ಸಂಸ್ಥೆಗಳು, ಔದ್ಯೋಗಿಕ ಮತ್ತು ಕ್ರೀಡಾ ತರಬೇತಿ ಕೇಂದ್ರಗಳು ಸೇರಿದಂತೆ ವಾಣಿಜ್ಯ ಚಟುವಟಿಕೆಗಳ ಕೇಂದ್ರವೂ ಆಗುತ್ತಿದೆ. ಆದ್ದರಿಂದ ಅವಶ್ಯಕತೆಗೆ ಅನುಗುಣವಾಗಿ ಬಡಾವಣೆಗೆ ನಾಗರಿಕ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಮಹಾನಗರಪಾಲಿಕೆ ಕಾರ್ಯೋನ್ಮುಖವಾಗಬೇಕು ಎಂದು ಮನವಿ ಮಾಡಿದ್ದಾರೆ.

ವಿದ್ಯಾರ್ಥಿಗಳು, ಯುವ ಜನ ಸೇರಿದಂತೆ ಆಸಕ್ತ ಸಾರ್ವಜನಿಕರ ಬಳಕೆಗಾಗಿ ಸುಸಜ್ಜಿತ 'ಈಜು ಕೊಳ'ದ ಅಗತ್ಯವಿದೆ. ಇದಕ್ಕೆ ಮರಳವಾಡಿ ಕೆರೆಯ ಪ್ರದೇಶದಲ್ಲಿ ಪ್ರಶಸ್ತ ಜಾಗವೂ ಇದೆ. ಇಲ್ಲಿ ಒತ್ತುವರಿಯಾಗಿದ್ದ ಜಾಗವನ್ನು ತೆರವುಗೊಳಿಸಿ ಸಾಲುಮರದ ತಿಮ್ಮಕ್ಕ ಅವರ ಹೆಸರಿನಲ್ಲಿ ಉದ್ಯಾನವನ ನಿರ್ಮಿಸಲಾಗಿದೆ. ಒಂದಷ್ಟು ಜಾಗವನ್ನು ಇಸ್ಕಾನ್ ದೇವಾಲಯಕ್ಕೆ ನೀಡಲಾಗಿದೆ. ಖಾಲಿ ಇರುವ ಜಾಗದಲ್ಲಿ ಕಟ್ಟಡ ತ್ಯಾಜ್ಯಗಳನ್ನು ಸುರಿಯಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಒತ್ತುವರಿಯಾಗುವ ಸಾಧ್ಯತೆ ಇದೆ. ಆದ್ದರಿಂದ ಈ ಜಾಗದಲ್ಲಿ ಪಾಲಿಕೆ ನೇರವಾಗಿ ಅಥವಾ ಪಿಪಿಪಿ(ಸಾರ್ವಜನಿಕ–ಖಾಸಗಿ ಸಹಭಾಗಿತ್ವ) ಮಾದರಿಯಲ್ಲಿ ಸುಸಜ್ಜಿತ ಈಜುಕೊಳ ನಿರ್ಮಿಸಬೇಕು. ಇದನ್ನು ಪ್ರಸಕ್ತ ವರ್ಷದ ಆಯವ್ಯಯದಲ್ಲೇ ಆದ್ಯತೆಯಾಗಿ ಪರಿಗಣಿಸಬೇಕು ಎಂದು ಕೆ.ವಿ.ಮಲ್ಲೇಶ್ ಒತ್ತಾಯಿಸಿದ್ದಾರೆ.

ಬೇಸಿಗೆಯಲ್ಲಿ ಮಕ್ಕಳು ಬಾವಿ, ಕೆರೆ, ನಾಲೆ, ನದಿಗಳಲ್ಲಿ ಈಜಲು ತೆರಳುತ್ತಾರೆ. ಈ ವೇಳೆ ಅದೆಷ್ಟೋ ಮಕ್ಕಳು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ನಗರದಲ್ಲಿ ಸುರಕ್ಷಿತವಾದ ಹೆಚ್ಚು ಈಜುಕೊಳಗಳಿದ್ದರೆ, ಇಂಥ ಅನಾಹುತಗಳನ್ನು ತಪ್ಪಿಸಬಹುದು. ಮಾತ್ರವಲ್ಲ, ಈಜು ಸ್ಪರ್ಧೆಯಲ್ಲಿ ಭಾಗವಹಿಸುವ ಈ ಭಾಗದ ಮಕ್ಕಳಿಗೆ, ಆರೋಗ್ಯದ ದೃಷ್ಟಿಯಿಂದ ಈಜಲು ಬಯಸುವ ಸಾರ್ವಜನಿಕರಿಗೆ ಈಜುಕೊಳ ನಿರ್ಮಾಣದಿಂದ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಲ್ಲಿ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನ

‘ಆಧುನಿಕ ಕಾನೂನುಗಳು, ಸ್ಮಾರ್ಟ್ ಪೊಲೀಸ್ ವ್ಯವಸ್ಥೆ, ಬಲಿಷ್ಠ ಸೇವೆ’ ಕುರಿತು ವಿಚಾರ ಸಂಕಿರಣ





ಮೈಸೂರಿನ ಲೀ ರುಚಿ ಹೋಟೆಲ್‌ನಲ್ಲಿ ಮೈಸೂರು ನಗರ ಪೊಲೀಸ್ ವತಿಯಿಂದ ಗುರುವಾರ ಮೊದಲ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನ ನಡೆಯಿತು.

ಮೈಸೂರು, 26(ಎಂಕೆ)– ಮೈಸೂರಿನ ಲೀ ರುಚಿ ಹೋಟೆಲ್‌ನಲ್ಲಿ ಮೈಸೂರು ನಗರ ಪೊಲೀಸ್ ವತಿಯಿಂದ ಮೊದಲ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮ್ಮೇಳನದ ಅಂಗವಾಗಿ 'ಆಧುನಿಕ ಕಾನೂನುಗಳು, ಸ್ಮಾರ್ಟ್ ಪೊಲೀಸ್ ವ್ಯವಸ್ಥೆ, ಬಲಿಷ್ಠ ಸೇವೆ' ಕುರಿತು ಗುರುವಾರ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು.

ಸಮ್ಮೇಳನ ಉದ್ಘಾಟಿಸಿದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಹೊರ ದೇಶದಲ್ಲಿ ನೆಲೆಸಿರುವ ಕ್ರಿಮಿನಲ್‌ಗಳನ್ನು ಕರೆತರುವ ನಿಟ್ಟಿನಲ್ಲಿ ನೀಡುವ ರೆಡ್ ನೋಟಿಸ್, ಕಾಣೆಯಾದ ವ್ಯಕ್ತಿಗಳನ್ನು ಕರೆತರಲು ನೀಡುವ ಯೆಲ್ಲೋ ನೋಟಿಸ್ ಸೇರಿದಂತೆ ಇಂಟರ್‌ಪೋಲ್ ನೋಟಿಸ್‌ಗಳ ಕುರಿತು ಮಾಹಿತಿ ನೀಡಿದರು.

ಹಾಗೆಯೇ ಅಂತರರಾಷ್ಟ್ರೀಯ ಪೊಲೀಸ್ ಸಹಕಾರವನ್ನು ಸುವ್ಯವಸ್ಥಿತಗೊಳಿಸಲು ಮತ್ತು ಅಂತರರಾಷ್ಟ್ರೀಯ ಅಪರಾಧಗಳನ್ನು ತನಿಖೆಗಾಗಿ ಸಿಬಿಐ ಅಭಿವೃದ್ಧಿಪಡಿಸಿರುವ BHARATPOL ಪೋರ್ಟಲ್ ಡಿಜಿಟಲ್ ವೇದಿಕೆಯಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿದೆ ಎಂದು ತಿಳಿಸಿದರು.

ಪೋರ್ಟಲ್ ಮೂಲಕವೇ ರೆಡ್ ನೋಟಿಸ್ ನೀಡುವುದರ ಜೊತೆಗೆ ಜಾಗತಿಕವಾಗಿ ಅಪಾರಾಧ ಅಪರಾಧಿ ಮತ್ತು ಅಪರಾಧದ ಜಾಡು ಹಿಡಿಯಲಾಗುತ್ತಿದೆ. ಅಲ್ಲದೆ ಆರೋಪಿಗಳನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ (BNSS) ಸೆಕ್ಷನ್ 355 ರ ಅಡಿಯಲ್ಲಿ ಭಾರತೀಯ ನ್ಯಾಯಾಲಯಗಳಲ್ಲಿ ಗೈರು ಹಾಜರಿಯಲ್ಲಿ ವಿಚಾರಣೆಗೆ ಒಳಪಡಿಸಬಹುದು ಎಂದು ಹೇಳಿದರು.

ಇದಕ್ಕೂ ಮುನ್ನ ವಿವಿಪುರಂ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಲವ ಹಾಗೂ ಮಹಿಳಾ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಅಶೋಕ್, ಹೊಸ ಕ್ರಿಮಿನಲ್ ಕಾನೂನು (ಬಿಎನ್‌ಎಸ್, ಬಿಎನ್‌ಎಸ್‌ಎಸ್ ಮತ್ತು ಬಿಎಸ್‌ಎ)ಗಳ ಕುರಿತು ತಿಳಿಸಿಕೊಟ್ಟರು. ಹಾಗೆಯೇ ಬೆಂಗಳೂರಿನ ಚಿನ್ನಸ್ವಾಮಿ ಮೈದಾನದ ಬಳಿ ನಡೆದ ಕಾಲ್ತುಳಿತ ದುರಂತ, ನಾಡಹಬ್ಬ ಮೈಸೂರು ಸೇರಿದಂತೆ ಕೆಲವು ಉದಾಹರಣೆಯೊಂದಿಗೆ ಜನ ಸಮೂಹ ನಿರ್ವಹಣೆ ಮತ್ತು ಬಂದೋಬಸ್ತ್ ಕುರಿತು ಎಸಿಪಿ ಶಿವಶಂಕರ್ ಹಾಗೂ ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರಘು ಮಾಹಿತಿ ನೀಡಿದರು.

ಸೈಬರ್ ಕ್ರೈಂ ಮತ್ತು ಎನ್‌ಡಿಪಿಎಸ್ ಕುರಿತು ಸೈಬರ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ನಂದೀಶ್ ಮತ್ತು ಪಿಎಸ್‌ಐ ಅನಿಲ್ ಮಾಹಿತಿ ನೀಡಿದರೆ, ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್(SOP) ಬಗ್ಗೆ ಸಿದ್ದಾರ್ಥನಗರ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶ್ರೀಧರ್ ಹಾಗೂ ಎಐ(ಕೃತಕ ಬುದ್ಧಿಮತ್ತೆ) ವಿಚಾರಣೆ ಕುರಿತು ಎನ್‌ಆರ್ ಸಂಚಾರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಸಿದ್ದೇಶ್ ತಿಳಿಸಿಕೊಟ್ಟರು.

ಸಂವಾದ: ಕೊನೆಯಲ್ಲಿ ನಡೆದ ಸಂವಾದದಲ್ಲಿ ನಗರದ ಕಾನೂನು ಮತ್ತು ಸುವ್ಯವಸ್ಥೆ ಕುರಿತು ಉತ್ತಮಪಡಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹಾಗೂ ವರ್ಷದಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಡಿಸಿಪಿ ಸುಂದರ್‌ರಾಜ್, ಎನ್.ಆರ್.ವಿಭಾಗದ ಎಸಿಪಿ ಕೆ.ಟಿ. ಮ್ಯಾಥ್ಯೂಸ್ ಥಾಮಸ್ ಸೇರಿದಂತೆ ನಗರದ ಎಲ್ಲಾ ಠಾಣೆ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್‌ಗಳು ಉಪಸ್ಥಿತರಿದ್ದರು.

ಕೌಶಲ್ಯಾಭಿವೃದ್ಧಿಯ ಮೊದಲ ಹಂತವಾಗಿ ಪ್ರಾಥಮಿಕ ಶಿಕ್ಷಣ ಬಲಗೊಳ್ಳಬೇಕು

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಅಭಿಮತ



ಮೈಸೂರು ವಿವಿ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಕೌಶಲ್ಯಾಭಿವೃದ್ಧಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು.

ಮೈಸೂರು, 26(ಎಂಕೆ)– ಕೌಶಲ್ಯಾಭಿವೃದ್ಧಿಯ ಮೊದಲ ಹಂತವಾಗಿ ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸುವ ಅಗತ್ಯವಿದೆ. ಕೌಶಲ್ಯಾಧಾರಿತ ಪಠ್ಯಕ್ರಮ, ಉತ್ತಮ ಸಾಕ್ಷರತೆ, ತಾಂತ್ರಿಕ ಜ್ಞಾನ ಹಾಗೂ ಡಿಜಿಟಲ್ ಅರಿವು ಇಲ್ಲದೆ ಉನ್ನತ ಮಟ್ಟದ ತರಬೇತಿ ಸಾಧ್ಯವಿಲ್ಲ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ತಿಳಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಸಾಮಾಜಿಕ ಸೇರ್ಪಡೆ ಅಧ್ಯಯನ ಕೇಂದ್ರ ಹಾಗೂ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ ಕೌಶಲ್ಯಾಭಿವೃದ್ಧಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಮಾರುಕಟ್ಟೆಯ ನಿಜವಾದ ಬೇಡಿಕೆಗಳಿಗೆ ಹೊಂದಿಕೊಳ್ಳಬೇಕು. ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಇಂದಿನ ಪರಿಸ್ಥಿತಿಯಲ್ಲಿ ಅವಶ್ಯಕವಾಗಿದ್ದು, ಪಠ್ಯಕ್ರಮ ರೂಪಿಸುವಿಕೆ, ಫೆಲೋಶಿಪ್ ಕಾರ್ಯಕ್ರಮಗಳು ಮತ್ತು ಉದ್ಯೋಗಾವಕಾಶ ಕಲ್ಪಿಸುವಲ್ಲಿ ಉದ್ಯಮ ವಲಯ ಸಕ್ರೀಯ ಪಾತ್ರ ವಹಿಸಬೇಕು ಎಂದರು.

ಗ್ರಾಮೀಣ ಯುವಕ–ಯುವತಿಯರು, ಮಹಿಳೆಯರು ಹಾಗೂ ಹಿಂದುಳಿದ ವರ್ಗದವರು ಕೌಶಲ್ಯ ತರಬೇತಿ ಪಡೆಯಲು ಹಲವು ಅಡೆತಡೆಗಳನ್ನು ಎದುರಿಸುತ್ತಿದ್ದಾರೆ. ಅವರಿಗೆ ಅನುಕೂಲಕರ ತರಬೇತಿ ಕೇಂದ್ರಗಳು, ಸಹಾಯಕ ವ್ಯವಸ್ಥೆಗಳು ಮತ್ತು ಸುಗಮ ಕಲಿಕೆ ವಿಧಾನಗಳನ್ನು ಒದಗಿಸಬೇಕು. ಕೃತಕ ಬುದ್ಧಿಮತ್ತೆ(ಎಐ), ಮಾಹಿತಿ ತಂತ್ರಜ್ಞಾನ, ಯಾಂತ್ರೀಕರಣ ಮತ್ತು ಯಂತ್ರ ಅಧ್ಯಯನದ ಬೆಳವಣಿಗೆಯಿಂದ ಉದ್ಯಮ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಯುವಕರು ಹೊಸ ತಂತ್ರಜ್ಞಾನಗಳಿಗೆ ಹೊಂದಿಕೊಳ್ಳಲು ಜೀವನಪೂರ್ತಿ ಕಲಿಕೆ ಸಂಸ್ಕೃತಿ ಬೆಳೆಸಿಕೊಳ್ಳುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಬಳಿಕ ಕೌಶಲ್ಯಾಭಿವೃದ್ಧಿ ಕುರಿತ ಪ್ರಕಟಣೆಗಳ ಕುರಿತ ಕೈಪಿಡಿಯನ್ನು ಬಿಡುಗಡೆಗೊಳಿಸಲಾಯಿತು. ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿವಿ ಕುಲಪತಿ ಪ್ರೊ.ವಿಶ್ವನಾಥ ವಿಚಾರ ಸಂಕಿರಣ ಉದ್ಘಾಟಿಸಿದರು. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಕೆ.ನಾರಾಯಣ ಮೂರ್ತಿ, ಡಾ.ಎಂ.ಮಹೇಶ್, ಡಾ.ವಿ.ಜಿ. ಸಿದ್ದರಾಜು ಮತ್ತಿತರರಿದ್ದರು.

ಹೂಟಗಳ್ಳಿ ನಗರಸಭೆಯ ನೂತನ ಕಚೇರಿ ಕಾರ್ಯಾರಂಭ



ಮೈಸೂರಿನ ಹೂಟಗಳ್ಳಿಯ ಕೆ.ಹೆಚ್.ಬಿ.ಕಾಲೋನಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಹೂಟಗಳ್ಳಿ ನಗರಸಭೆಯ ನೂತನ ಕಚೇರಿಯು ಗುರುವಾರ ವಿಶೇಷ ಪೂಜೆ ಮೂಲಕ ಕಾರ್ಯಾರಂಭವಾಯಿತು. ಶಾಸಕ ಜಿ.ಟಿ.ದೇವೇಗೌಡರು ವಿಶೇಷ ಪೂಜೆಯಲ್ಲಿ ಭಾಗವಹಿಸಿ, ಶುಭ ಕೋರಿದರು. ಈ ಸಂದರ್ಭದಲ್ಲಿ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಮುಖಂಡರು ಭಾಗವಹಿಸಿದ್ದರು.

ಮೈಸೂರು ಒಡೆಯರ ಕಾಲ ಸುವರ್ಣಯುಗ

ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಭಿಮತ



ಸಿಐಐ ಮೈಸೂರು ವಲಯ ವಾರ್ಷಿಕ ಸಭೆ ಉದ್ದೇಶಿಸಿ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ನಿತೇಶ್ ಪಾಟೀಲ್ ಮಾತನಾಡಿದರು.

ಮೈಸೂರು, ಫೆ.26(ವಿವಿಹೆಚ್)– ಶತಮಾನಗಳ ಹಿಂದೆಯೇ ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಯ ಮಹಾ ಚಿಂತನೆ ಜೊತೆಗೆ ಕೈಗಾರಿಕೆ, ವಾಸ್ತುಶಿಲ್ಪ ಹಾಗೂ ನವೀನ ಅಂಶಗಳ ಒಳಗೊಳ್ಳುವಿಕೆಗೆ ಹೆಸರುವಾಸಿಯಾಗಿದ್ದ ಮೈಸೂರು ಒಡೆಯರ ಕಾಲ ಸುವರ್ಣ ಯುಗವಾಗಿತ್ತು ಎಂದು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಭಿಪ್ರಾಯಪಟ್ಟರು.

ಮೈಸೂರಿನ ಮೇಟಗಳ್ಳಿಯ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಆಯೋಜಿಸಿದ್ದ ಸಿಐಐ ಮೈಸೂರು ವಲಯ ವಾರ್ಷಿಕ ಸಭೆ–2026ರಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮೈಸೂರು ರಾಜ್ಯ ಅಂದಿನ ಕಾಲಘಟ್ಟದಲ್ಲಿಯೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಮಾರುಕಟ್ಟೆಯನ್ನು ತೆರೆದುಕೊಂಡಿತ್ತು. ತನ್ನ ಕೌಶಲ್ಯಯುತ ಕಲೆಯೊಂದಿಗೆ, ಕೈಗಾರಿಕೆ, ಕಾರ್ಖಾನೆಗೆ ಮಾತ್ರವಲ್ಲದೇ, ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಿತ್ತು. ಅದಕ್ಕೆ ಉದಾಹರಣೆ ಎಂಬಂತೆ ಮೈಸೂರು ಸಿಲ್ಕ್‌ಗಾಗಿ ಜನರೂ ಇಂದಿಗೂ ಮುಗಿಬೀಳುತ್ತಿರುವುದು ಮೈಸೂರು ಸ್ಯಾಂಡಲ್ಸ್ ಉತ್ಪನ್ನಗಳನ್ನು ನೆದರ್ಲೆಂಡ್ಸ್ ಪ್ರಧಾನಿ ಸ್ವೀಕರಿಸಿದ್ದನ್ನು ಈ ವೇಳೆ ಸ್ಮರಿಸಿದರು.

ಮೈಸೂರು ರಾಜ್ಯದಲ್ಲೇ ಎರಡನೇ ಅತೀ ದೊಡ್ಡ ಸಾಫ್ಟ್‌ವೇರ್ ಉತ್ಪನ್ನಗಳ ರಫ್ತು ಕೇಂದ್ರವಾಗಿದೆ. ಇನ್ಫೋಸಿಸ್, ವಿಪ್ರೋ ಸೇರಿದಂತೆ ದೊಡ್ಡ–ದೊಡ್ಡ ಇಂಡಸ್ಟ್ರೀಗಳನ್ನೂ ಈ ನಗರ ಒಳಗೊಂಡಿದೆ. ಅದಕ್ಕೆ ಪೂರಕವೆಂಬಂತೆ, ಮಾನವ ಸಂಪನ್ಮೂಲದಲ್ಲಿಯೂ ಪ್ರಗತಿ ಸಾಧಿಸಿದೆ ಎಂದರು.

ಬೆಂಗಳೂರು ಮಾತ್ರವಲ್ಲದೇ ಪ್ರಪಂಚದಾದ್ಯಂತ ಹಲವಾರು ಭಾಗಗಳಿಂದ ಮೈಸೂರು ಕೈಗಾರಿಕಾ ವಲಯದಲ್ಲಿ ಹೂಡಿಕೆ ಮಾಡಲು ಸಾಕಷ್ಟು ಮಂದಿ ಆಸಕ್ತಿ ತೋರುತ್ತಿದ್ದಾರೆ. ಇದಕ್ಕೆ ಅವಶ್ಯಕವಾದ ನೈಸರ್ಗಿಕ ವಾತಾವರಣ ಮೈಸೂರಲ್ಲಿದೆ. ಸೌಜನ್ಯಯುತ ಜನರು, ಉತ್ತಮ ಸಂಸ್ಕೃತಿ ಜೊತೆಗೆ ಬೆಂಗಳೂರಿಗಿಂತಲೂ ಕಡಿಮೆ ಖರ್ಚು ಹಾಗೂ ಅಧಿಕ ಲಾಭವನ್ನು ಇಲ್ಲಿ ಕಾಣಬಹುದಾಗಿದೆ ಎಂದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ಬಳಿಕ ಮೈಸೂರು ತ್ವರಿತಗತಿಯಲ್ಲಿ ಬೆಳೆಯತೊಡಗಿತು. ಜೊತೆಗೆ ಮೈಸೂರು–ಕೊಡಗು ಹೆದ್ದಾರಿ ನಿರ್ಮಾಣ ಹಂತದಲ್ಲಿದ್ದು, ಇದು ಮೈಸೂರು ಪ್ರವಾಸೋದ್ಯಮಕ್ಕೆ ಮಾತ್ರವಲ್ಲದೇ ಇಲ್ಲಿನ ಕೈಗಾರಿಕೋದ್ಯಮ ಬೆಳವಣಿಗೆಗೆ ಪೂರಕವಾಗಿರಲಿದೆ ಎಂದರು.

ಈಗಾಗಲೇ ಮೈಸೂರು ಹೊರವಲಯವನ್ನು ಎಂಡಿಎ ಅಡಿಯಲ್ಲಿ ಸೇರಿಸುವ ಕೆಲಸ ಮಾಡಲಾಗುತ್ತಿದೆ. ಸುಗಮ ಸಂಚಾರಕ್ಕಾಗಿ ರಿಂಗ್ ರೋಡ್ ಇದ್ದು, ಜನದಟ್ಟಣೆ, ವಾಹನ ಸಂಚಾರದ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಪೆರಿಫೆರಲ್ ರಿಂಗ್ ರೋಡ್ ನಿರ್ಮಾಣ ಆಗಲಿದೆ. ಇಲ್ಲಿನ ಸ್ಥಳೀಯ ಆಡಳಿತದಿಂದಲೂ ಸೂಕ್ತ ಸಹಾಯ ಸಿಗಲಿದೆ ಎಂದು ತಿಳಿಸಿದರು.

ಸಿಐಐ ಮೈಸೂರು ವಲಯ ಅಧ್ಯಕ್ಷ ಉತ್ಸವ್ ಅಗರ್ವಾಲ್, ಉಪಾಧ್ಯಕ್ಷೆ ಸವಿತಾ ಮಲ್ಲಪ್ಪ, ಮಾಜಿ ಅಧ್ಯಕ್ಷ ನಾಗರಾಜ ಗರ್ಗೇಶ್ವರಿ, ಸ್ಯಾಮ್ ಚೆರಿಯನ್, ವಿಜಯ ಕೃಷ್ಣನ್ ವೆಂಕಟೇಶನ್, ರಬೀಂದ್ರ ಶ್ರೀಕಾಂತ್, ರಾಧಿಕಾ ಧಾಲ್ ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರಲ್ಲಿ ಕಿಸಾನ್ ಸ್ವರಾಜ್ ಸಮ್ಮೇಳನ

● ವೈವಿಧ್ಯಮಯ ಗೆಡ್ಡೆ-ಗೆಣಸುಗಳ ಪ್ರದರ್ಶನ ● ಐವತ್ತಕ್ಕೂ ಹೆಚ್ಚು ದೇಸಿ ಬೀಜ, ಹಣ್ಣು-ಕಾಯಿ ತೆನೆಗಳ ಮಾರಾಟ ವ್ಯವಸ್ಥೆ



ಮೈಸೂರು, ಫೆ26– ಸಾವಯವ ಕೃಷಿಕರ ಕುಂಭಮೇಳವೆಂದೇ ಖ್ಯಾತಿ ಪಡೆದಿರುವ ಕಿಸಾನ್ ಸ್ವರಾಜ್ ಸಮ್ಮೇಳನವು ಫೆ.27 ರಿಂದ ಮಾ.1 ರವರೆಗೆ ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಮುಕ್ತಗಂಗೋತ್ರಿ ಆವರಣದಲ್ಲಿ ನಡೆಯಲಿದೆ.

ಮೂರು ದಿನಗಳ ಕಾಲ ನಡೆಯಲಿರುವ ಕಿಸಾನ್ ಸ್ವರಾಜ್ ಸಮ್ಮೇಳನದಲ್ಲಿ ವಿವಿಧ ರಾಜ್ಯಗಳ ಒಂದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಸುಸ್ಥಿರ ಮತ್ತು ಸಮಗ್ರ ಕೃಷಿ ಮೈತ್ರಿಕೂಟ' (ಅಲಯನ್ಸ್ ಫಾರ್ ಸಸ್ಟೈನೆಬಲ್ ಅಂಡ್ ಹೊಲಿಸ್ಟಿಕ್ ಅಗ್ರಿಕಲ್ಚರ್– ಆಶಾ) ಮತ್ತು ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಜೊತೆಯಾಗಿ ಸಮ್ಮೇಳನವನ್ನು ಆಯೋಜಿಸಿವೆ.

ಕೃಷಿ–ಪರಿಸರ ದಿಗ್ಗಜರು ಭಾಗಿಯಾಗಲಿರುವ ಕಿಸಾನ್ ಸ್ವರಾಜ್ ಸಮ್ಮೇಳನಕ್ಕೆ ಭರದ ಸಿದ್ದತೆಗಳು ನಡೆಯುತ್ತಿವೆ. ಸಹಜ ಸಮೃದ್ಧವಾಗಿ ಆಯೋಜಿಸಿರುವ 'ಜೀವ ವೈವಿಧ್ಯ ಮೇಳಕ್ಕೆ' ಅಸ್ಸಾಂ, ಆಂಧ್ರ ಪ್ರದೇಶ, ಕೇರಳ,ತೆಲಂಗಾಣ, ತಮಿಳುನಾಡು, ಮತ್ತು ಮಹಾರಾಷ್ಟ್ರದಿಂದ ಬಂದಿರುವ ಐವತ್ತಕ್ಕೂ ಹೆಚ್ಚಿನ ಬೀಜ ಸಂರಕ್ಷಕರು ವಿವಿಧ ಬಗೆಯ ದೇಸಿ ಬೀಜ, ಹಣ್ಣು–ಕಾಯಿ, ತೆನೆಗಳ ಪ್ರದರ್ಶನವಿರಲಿದೆ. ವೈವಿಧ್ಯಮಯ ಬೀಜಗಳು ಮಾರಾಟಕ್ಕೆ ಸಿಗುತ್ತವೆ.

ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಕೇರಳದ ವಯನಾಡಿನ ಶಾಜಿ 200ಕ್ಕೂ ಹೆಚ್ಚಿನ ಗೆಡ್ಡೆ–ಗೆಣಸುಗಳನ್ನು ಪ್ರದರ್ಶಿಸುತ್ತಿದ್ದಾರೆ. ದೇಶ–ವಿದೇಶಗಳ, ವೈವಿಧ್ಯಮಯ ಗೆಡ್ಡೆ ಗೆಣಸುಗಳು ಇವರ ಸಂಗ್ರಹದಲ್ಲಿವೆ. ಹೆಗ್ಗಡದೇವನಕೋಟೆಯ ಅಂತರಸಂತೆಯ ಹುಲಿಕಾಡು ರೈತ ಉತ್ಪಾದಕರ ಕಂಪನಿ ಪರ್ಪಲ್ ಯಾಮ್, ಬಳ್ಳಿ ಆಲೂಗೆಡ್ಡೆ ಮತ್ತು ಉತ್ತರಿ ಗೆಣಸುಗಳನ್ನು ಮಾರಾಟಕ್ಕೆ ತಂದಿದೆ.ಆಂಧ್ರ ಪ್ರದೇಶದ ಅರಕು ವ್ಯಾಲಿಯ ಸಂಜೀವಿನಿ ಆದಿವಾಸಿ ಸಂಘದವರು ಅಪರೂಪದ ಗೆಡ್ಡೆ ಗೆಣಸುಗಳನ್ನು ಪ್ರದರ್ಶನಕ್ಕಿಡಲಿದ್ದಾರೆ.

ಬೆಳಗೊಳದ ಬೆಳುವಲ ಫೌಂಡೇಷನ್ ನಗರ ತೋಟಗಾರಿಕೆ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಇದಕ್ಕಾಗಿ ಆಕರ್ಷಕ ಕೈ ತೋಟದ ಮಾದರಿಗಳನ್ನು ರೂಪಿಸಲಾಗಿದೆ. ತೋಟ ಮಾಡಲು ಆಸಕ್ತರಾದ ನಗರವಾಸಿಗಳಿಗೆ ಅಗತ್ಯ ಮಾಹಿತಿ ನೀಡಲು ಬೆಳುವಲ ತಂಡ ಸಿದ್ಧವಾಗಿದೆ.

ನೈಸರ್ಗಿಕ ಕೃಷಿ ಉತ್ಪನ್ನಗಳು ಮತ್ತು ಮೌಲ್ಯವರ್ಧಿತ ಪದಾರ್ಥಗಳ 30 ಸಾವಯವ ಮಳಿಗೆಗಳು ಸಮ್ಮೇಳನಕ್ಕೆ ಬಂದಿವೆ. ನೋಂದಾಯಿಸಿದ್ದ 130 ಮಾರುಕಟ್ಟೆದಾರರಲ್ಲಿ 30 ಮಂದಿಯನ್ನು ಮಾತ್ರ ಆಯ್ಕೆ ಮಾಡಲಾಗಿದೆ. ಪ್ಲಾಸ್ಟಿಕ್ ಮುಕ್ತವಾಗಿ, ಪರಿಸರಪ್ರಿಯ ಪ್ಯಾಕಿಂಗ್ ಮಾಡಿದ, ನಂಬಿಕಾರ್ಹ ಸಾವಯವ ಮೂಲಗಳಿಂದ ಉತ್ಪನ್ನಗಳನ್ನು ಖರೀದಿಸುವ ಮಳಿಗೆದಾರರಿಗೆ ಮಾತ್ರ ಅವಕಾಶ ನೀಡಲಾಗಿದೆ.

ಏಳು ಆಹಾರ ಮಳಿಗೆಗಳು ಕೇರಳ, ಕರ್ನಾಟಕ, ಆಂಧ್ರ ಮತ್ತು ತಮಿಳುನಾಡಿನ ಸಾಂಪ್ರದಾಯಿಕ ಶೈಲಿಯ ಅಡುಗೆಗಳನ್ನು ಉಣಬಡಿಸಲು ಸಿದ್ಧವಾಗಿವೆ. ರಾಗಿ ಶ್ಯಾವಿಗೆ, ಜೋಳದ ರೊಟ್ಟಿ, ಬೆರಕೆ ಸೊಪ್ಪಿನ ಪಲ್ಯ, ಮರೆತ ಹಣ್ಣುಗಳಾದ ಬೇಲ, ಫ್ಯಾಷನ್ ಫ್ರೂಟ್, ಹೇರಳೆ ಕಾಯಿ ಜ್ಯೂಸ್‌ಗಳು ಸವಿಯಲು ಸಿಗಲಿವೆ.

ದೇಸಿರಿ ನ್ಯಾಚುರಲ್ಸ್‌ನವರು ಎತ್ತಿನ ಗಾಣ ಹಾಕಿದ್ದಾರೆ. ಹರಳನ್ನು ಬೇಯಿಸುವ ಪ್ರಾತ್ಯಕ್ಷತೆ ನಡೆಯಲಿದೆ. ಗ್ರಾಹಕರು ತಮ್ಮ ಇಷ್ಟದ ಗಾಣದ ಎಣ್ಣೆ ಖರೀದಿಸಬಹುದು.

ಆಂಧ್ರ ಪ್ರದೇಶದ ಪೊಂಡೂರಿನ ನೇಕಾರರು ಜಗತ್ ಪ್ರಸಿದ್ಧರು. ದೇಸಿ ಹತ್ತಿಯಿಂದ ಗುಣಮಟ್ಟದ ಬಟ್ಟೆಗಳನ್ನು ನೇಯುವ ಇವರ ಕೌಶಲ್ಯ ಎಂಥವರನ್ನೂ ನಿಬ್ಬೆರಗಾಗಿಸುತ್ತದೆ. ಪೊಂಡೂರಿನ ಮಹಿಳೆಯರು, ಪ್ರಸಿದ್ಧ ಪಟ್ಟೂಲ ನೂಲಾಟದ ನೇರ ಪ್ರದರ್ಶನ ಮಾಡಲಿದ್ದಾರೆ. ಚರಕದಿಂದ ನೂಲು ತೆಗೆವ ಕೌಶಲ್ಯ ಕಾಣಬಹುದು. ಚೆನ್ನೈನ ತುಲಾ ಇಂಡಿಯಾದವರು ದೇಸಿ ಹತ್ತಿಯ ಉಡುಪುಗಳನ್ನು ಮಾರಾಟ ಮಾಡಲಿದ್ದಾರೆ.

ಈ ಸಮ್ಮೇಳನದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ನೈಸರ್ಗಿಕ ಕೃಷಿಕರಾದ ಸುಭಾಷ್ ಶರ್ಮಾ ಸೇರಿದಂತೆ ಹಲವಾರು ಕೃಷಿ ದಿಗ್ಗಜರು ಭಾಗವಹಿಸಲಿದ್ದಾರೆ. ಗೋಕೃಪಾಮೃತ ಸಂಶೋಧಕ ಗುಜರಾತಿನ ಗೋಪಾಲ್ ಭಾಯ್ ಸುತಾರಿಯ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಕೃಷಿ ಮತ್ತು ಗ್ರಾಮೀಣ ಜೀವನೋಪಾಯಗಳಿಗೆ ಎದುರಾಗಿರುವ ಪ್ರಮುಖ ಸವಾಲುಗಳ ಬಗ್ಗೆ ಚರ್ಚೆ, ಸಂವಾದಗಳು ನಡೆಯಲಿವೆ. ಬೀಜ ಸ್ವಾಯತ್ತತೆ, ರೈತರ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳು, ಕಳೆನಾಶಕ ಸಹಿಷ್ಣು ಬೆಳೆಗಳ ಪರಿಣಾಮ, ಕೃಷಿ ಕಾರ್ಮಿಕರ ಸಮಸ್ಯೆಗಳು ಮತ್ತು ಮಾನವ–ಪ್ರಾಣಿ ಸಂಘರ್ಷಗಳಂತಹ ವಿಷಯಗಳು ಚರ್ಚೆಗೆ ಬರಲಿವೆ.

ಶಾಲಾ ವಿದ್ಯಾರ್ಥಿಗಳು, ನಗರದ ಗ್ರಾಹಕರು ಹಾಗೂ ರೈತರಿಗೆ ಶೈಕ್ಷಣಿಕ ಪ್ರದರ್ಶನಗಳನ್ನು ಏರ್ಪಡಿಸಲಾಗಿದ್ದು, ಪರಿಸರ ಸ್ನೇಹಿ ಜೀವನ ಪದ್ಧತಿಯ ಅನುಭವ ಪಡೆಯಬಹುದು.

ಕೃಷಿ ಮತ್ತು ಪರಿಸರ ವಿಷಯಾಧಾರಿತ ಚಲನಚಿತ್ರೋತ್ಸವ ಏರ್ಪಡಿಸಲಾಗಿದೆ. ಶುಕ್ರವಾರ ರಾತ್ರಿ 8 ಗಂಟೆಗೆ ಖ್ಯಾತ ಗಾಯಕ ವಾಸು ದೀಕ್ಷಿತ್ ಅವರ "ಸಾಂಗ್ಸ್ ಫಾರ್ ದ ಸೋಲ್" ಸಂಗೀತ ಕಾರ್ಯಕ್ರಮ ನಡೆಯಲಿದೆ. ಫೆ.28ರ ಸಂಜೆ 8 ಗಂಟೆಗೆ ಅಭಿನಯಕ್ತಿ ಫೌಂಡೇಶನ್ ಕಲಾವಿದರಿಂದ ವಿಶಿಷ್ಟ ಭರತನಾಟ್ಯ ಪ್ರದರ್ಶನ ನಡೆಯಲಿದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸಂಘಟಕರು ಮನವಿ ಮಾಡಿದ್ದು, ಪರ್ಯಾಯ ಜೀವನ ಶೈಲಿಯನ್ನು ರೂಪಿಸಿಕೊಳ್ಳಲು, ನೈಸರ್ಗಿಕ ಕೃಷಿ ಚಳವಳಿಯ ಭಾಗವಾಗುವ ಅಪೂರ್ವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕೋರಿದ್ದಾರೆ. ಮಾಹಿತಿಗಾಗಿ ಮೊ.ನಂ.8105579839ನ್ನು ಸಂಪರ್ಕಿಸಬಹುದು.

ಪರಿಸರದ ಮೇಲಿನ ಗದಾಪ್ರಹಾರಕ್ಕೆ ಸುತ್ತೂರು ಶ್ರೀಗಳ ಆತಂಕ



ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಗುರುವಾರ ನಡೆದ ಎರಡು ದಿನಗಳ ರಾಷ್ಟ್ರೀಯ ಗೃಹ ವಿಜ್ಞಾನ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಗೃಹ ವಿಜ್ಞಾನ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಮೈಸೂರು, ಫೆ.26(ಬಿಎಲ್‌ಯು)– ಮನೆಗಳಲ್ಲಿ ಸುಸ್ಥಿರತೆ ಇದ್ದರೆ ಸಹಜವಾಗಿಯೇ ಸಮಾಜವೂ ಕೂಡ ಸುಸ್ಥಿರತೆಯೆಡೆಗೆ ಸಾಗುತ್ತದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಇಂದು ಎರಡು ದಿನಗಳ ರಾಷ್ಟ್ರೀಯ ಗೃಹ ವಿಜ್ಞಾನ ಸಮ್ಮೇಳನ –2026 ಉದ್ಘಾಟಿಸಿ ಮಾತನಾಡಿದ ಅವರು, ಪರಿಸರದ ಮೇಲೆ ಆಗುತ್ತಿರುವ ಗದಾ ಪ್ರಹಾರ, ಇದರ ಪರಿಣಾಮದಿಂದ ಆಗುತ್ತಿರುವ ಹವಾಮಾನ ವೈಪರಿತ್ಯ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಕೊರತೆ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ವಿಜ್ಞಾನ ಎಲ್ಲವನ್ನೂ ಕೂಡಿಸುವ ಹಾಗೂ ಪುನರುಜ್ಜೀವನಗೊಳಿಸುವ ಕೆಲಸ ಮಾಡುತ್ತದೆ. ಈ ನಿಟ್ಟಿನಲ್ಲಿ ವಿಜ್ಞಾನ ಪ್ರಯೋಗಗಳ ಪಾತ್ರ ಬಹು ಮುಖ್ಯ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಪ್ರಪಂಚದಲ್ಲಿ ದಿನ ನಿತ್ಯ ಹಲವು ರೀತಿಯ ಬದಲಾವಣೆಗಳಾಗುತ್ತಿವೆ. ಇದನ್ನು ತಿಳಿಸುವ ಪ್ರಮುಖ ಜವಾಬ್ದಾರಿ ಶಿಕ್ಷಣದ್ದಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು ಈ ಬದಲಾವಣೆಯನ್ನು ಅವಲೋಕಿಸಿ ಅದನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕೊಡಗು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಅಶೋಕ್ ಎಸ್.ಆಲೂರು, ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವಿ.ಭಾರತಿ ಹರಿಶಂಕರ್, ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ. ಸವಿತಾ ಅವರು ಉಪಸ್ಥಿತರಿದ್ದರು.

ಗಾನ ಸುಧೆ ಸಂಗೀತ ಕಾರ್ಯಕ್ರಮ



ಗಾನಸುಧೆ ಸಂಗೀತ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, 26(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಗಾನ ಗಂಗೋತ್ರಿ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ 2ನೇ ವರ್ಷದ 'ಗಾನಸುಧೆ' ಸಂಗೀತ ಕಾರ್ಯಕ್ರಮ ನಡೆಯಿತು.

ನಿವೃತ್ತ ಪೊಲೀಸ್ ಅಧಿಕಾರಿ ಮಹದೇವ ನೇತೃತ್ವದಲ್ಲಿ ನಡೆದ ಗಾನಸುಧೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಡಾ.ಬಿ.ಆರ್.ನಟರಾಜ್ ಜೋಯಿಷ್, ಸಮಾಜ ಸೇವಕ ರಘುರಾಂ ವಾಜಪೇಯಿ, ಪ್ರೊ.ಎಸ್.ಲಿಂಗಣ್ಣ, ಅರಕಲವಾಡಿ ನಾಗೇಂದ್ರ ಮತ್ತಿತರರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ವೇಳೆ ಗಾನ ಗಂಗೋತ್ರಿ ಸಾಂಸ್ಕೃತಿಕ ಕಲಾ ವೇದಿಕೆಯ ಸದಸ್ಯರು ಉಪಸ್ಥಿತರಿದ್ದರು.

ಮಾರ್ಚ್ ಮೊದಲ ವಾರದಿಂದ ಅಕ್ಕ ಕೆಫೆ ಆರಂಭ

- ತಿಂಡಿಗೆ ಇಡ್ಲಿ, ಪೊಂಗಲ್, ಖಾರಾಬಾತ್, ಕೇಸರಿಬಾತ್
- ಮಧ್ಯಾಹ್ನ ಊಟಕ್ಕೆ ಮುದ್ದೆ, ಚಪಾತಿ, ಅನ್ನ-ಸಾಂಬಾರ್




ಮೈಸೂರು ಜಿಪಂ ಕಚೇರಿ ಹಿಂಭಾಗ ನಿರ್ಮಿಸಿರುವ ಪ್ರೀಮಿಯಂ ಅಕ್ಕ ಕೆಫೆ. ಬಲಚಿತ್ರದಲ್ಲಿ ತಾಲೂಕು ಕಚೇರಿ ಹಿಂಭಾಗ ನಿರ್ಮಾಣಗೊಳ್ಳುತ್ತಿರುವ ಕ್ಲಾಸ್ಕ್ ಅಕ್ಕ ಕೆಫೆ.

ಮೈಸೂರು,ಫೆ.26(ಜಿಎ)–ಮೈಸೂರು ನಗರದಲ್ಲಿ ನಿರ್ಮಾಣಗೊಂಡಿರುವ ಅಕ್ಕ ಕೆಫೆ ಮಾರ್ಚ್ ಮೊದಲ ವಾರದಿಂದ ಆರಂಭಗೊಳ್ಳಲಿದೆ.

ರಾಜ್ಯ ಸರ್ಕಾರದ ಕಳೆದ ಬಜೆಟ್‌ನಲ್ಲಿ ಅಕ್ಕ ಕೆಫೆ ಘೋಷಣೆಯಾಗಿತ್ತು. ರಾಜ್ಯದಲ್ಲಿ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಜತೆಗೂಡಿ ಯೋಜನೆ ಅನುಷ್ಠಾನಗೊಳಿಸುತ್ತಿದ್ದು, ಈಗಾಗಲೇ ರಾಜ್ಯದ ವಿವಿಧೆಡೆ ಅಕ್ಕ ಕೆಫೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈಗ ಮೈಸೂರಿನ ಜಿಪಂ ಕಚೇರಿ ಹಿಂಭಾಗ, ತಾಲೂಕು ಕಚೇರಿ ಹಿಂಭಾಗ ಹಾಗೂ ಹುಣಸೂರು ತಾಲೂಕಿನಲ್ಲಿ ಮೊದಲ ಹಂತದಲ್ಲಿ ಪ್ರಾರಂಭವಾಗಲಿದ್ದು, ಈಗಾಗಲೇ ಭರದ ತಯಾರಿ ನಡೆದಿದೆ. ಮುಂದಿನ ದಿನಗಳಲ್ಲಿ ಬೇಡಿಕೆಗೆ ತಕ್ಕಂತೆ ಅಕ್ಕ ಕೆಫೆಯನ್ನು ಆರಂಭಿಸಲು ಚಿಂತಿಸಲಾಗಿದೆ.

ಮೈಸೂರು-ಮಡಿಕೇರಿ ರಾಷ್ಟ್ರೀಯ ಹೆದ್ದಾರಿಯ ಬೀಜಗನಹಳ್ಳಿ ಗ್ರಾಮ ಪಂಚಾಯಿತಿಯ ಹಾಲಗೆರೆ ಗ್ರಾಮದಲ್ಲಿ ರೆಸ್ಟೋರೆಂಟ್ (ಪ್ರೀಮಿಯಂ) ಹಾಗೂ ಕಂಪಲಾಪುರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ, ಬೆಟ್ಟದಪುರದ ಶ್ರೀ ಶಾಂತವೀರಮ್ಮ ದೇವಸ್ಥಾನದ ಬಳಿಯಲ್ಲೂ ಕಿರು ಅಕ್ಕ ಕೆಫೆ (ಕ್ಲಾಸ್ಕ್) ತೆರೆಯಲು ಸಲ್ಲಿಸಿದ್ದ ಪ್ರಸ್ತಾವನೆಗೆ ಅನುಮೋದನೆ ದೊರೆತಿದೆ. ಜಿಲ್ಲೆಯ ತಿ.ನರಸೀಪುರ, ಬನ್ನೂರು, ಹೆಚ್.ಡಿ.ಕೋಟೆ, ನಂಜನಗೂಡು ಪಟ್ಟಣದಲ್ಲೂ ಪ್ರೀಮಿಯಂ ರೆಸ್ಟೋರೆಂಟ್ ತೆರೆಯಲು ಚಿಂತನೆ ನಡೆಸಲಾಗಿದೆ.

ಸಾರ್ವಜನಿಕರು, ನೌಕರರು ಸೇರುವಂತಹ ಜನನಿಬಿಡ ಪ್ರದೇಶಗಳಲ್ಲಿ ಒಟ್ಟು ಮೂರು ಅಕ್ಕ ಕೆಫೆಗಳು ನಿರ್ಮಾಣಗೊಂಡಿದ್ದು, ನಂತರ ಬೇಡಿಕೆಗೆ ಅನುಗುಣವಾಗಿ ಸಂಖ್ಯೆಯನ್ನು ಹೆಚ್ಚು ಮಾಡಲು ನಿರ್ಧರಿಸಲಾಗಿದೆ. "ದುಡಿಯುವ ಮಹಿಳೆಯರಿಗೆ ಕೆಲಸ ನೀಡುವುದರ ಜತೆಗೆ, ಜನರಿಗೆ ಶುಚಿ ರುಚಿಯಾದ ಆಹಾರ ದೊರೆಯಬೇಕು ಎಂಬುದು ಅಕ್ಕ ಕೆಫೆಯ ಉದ್ದೇಶವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಅಕ್ಕ ಕೆಫೆ ಘೋಷಿಸಿದರು.

ಅಕ್ಕ ಕೆಫೆ ಸ್ಥಾಪನೆಗೆ ಆಯ್ಕೆಯಾಗುವ ಸ್ಥಳ ಹಾಗೂ ಸ್ವಸಹಾಯ ಸಂಘಗಳ ನಡುವೆ ಸರ್ಕಾರ ಒಡಂಬಡಿಕೆ ಮಾಡಿಕೊಂಡು ಸರ್ಕಾರದ ಅನುದಾನದಲ್ಲೇ ಸಂಪೂರ್ಣ ಮೂಲಸೌಕರ್ಯವನ್ನು ಒದಗಿಸಲಿದೆ. ಪ್ರೀಮಿಯಂ ರೆಸ್ಟೋರೆಂಟ್‌ಗೆ ಸರ್ಕಾರ 15 ಲಕ್ಷ ರೂ. ಕ್ಲಾಸ್ಕ್ ಕಿರು ಅಕ್ಕ ಕೆಫೆಗೆ 7 ಲಕ್ಷ ರೂ. ನೀಡಲಿದೆ. ಕೆಫೆಯ ನವೀಕರಣ, ನೆಲಹಾಸು, ಗೋಡೆಗಳು ಮತ್ತು ಚಾವಣಿ, ಶೇಖರಣಾ ಕ್ಯಾಬಿನೆಟ್‌ಗಳು, ನೀರಿನ ವ್ಯವಸ್ಥೆ, ಸಿಸಿಟಿವಿ ಕ್ಯಾಮರಾ, ರಶೀದಿ ಯಂತ್ರ, ಪೀಠೋಪಕರಣಗಳು, ಬ್ರ್ಯಾಂಡಿಂಗ್ ವ್ಯವಸ್ಥೆಗೆ ಸರ್ಕಾರ ಅನುದಾನ ನೀಡಲಿದೆ. ಕೆಫೆಗೆ ಬೇಕಾದ ವಸ್ತುಗಳಾದ ಪಾತ್ರೆಗಳು, ಓವನ್, ಗ್ಯಾಸ್ ಸಿಲಿಂಡರ್, ಸ್ಟವ್, ಮಿಕ್ಸಿ, ಗ್ರೈಂಡರ್, ರೆಫ್ರಿಜರೇಟರ್ ಗಳನ್ನು ಸ್ವಸಹಾಯ ಸಂಘದ ಸದಸ್ಯರು ಖರೀದಿಸಬೇಕು.

ಅಕ್ಕ ಕೆಫೆ ಆರಂಭಿಸಲು ಉದ್ದೇಶಿಸಿರುವ ಮಹಿಳಾ ಸ್ವ ಸಹಾಯ ಸಂಘಗಳು ಕಡ್ಡಾಯವಾಗಿ ಗ್ರಾಮೀಣ ಜೀವನೋಪಾಯ ಮಿಷನ್, ನಗರ ಜೀವನೋಪಾಯ ಮಿಷನ್‌ನಲ್ಲಿ ನೋಂದಾಯಿತ ಸಂಘವಾಗಿರಬೇಕು, ಪಾಕ ಪರಿಣಿತಿಯಲ್ಲಿ ಆಸಕ್ತಿ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು, ಬಂಡವಾಳ ಹೂಡುವ ಸ್ವಸಹಾಯ ಸಂಘಗಳಿಗೆ ಆದ್ಯತೆ ನೀಡಲಾಗುವುದು. ಯಾವುದೇ ಸಂಘ ಹಣಕಾಸು ಸಂಸ್ಥೆಯ ಸಾಲ ಬಾಕಿದಾರರಾಗಿರಬಾರದು, ಗುಂಪಿನಲ್ಲಿ ಕನಿಷ್ಠ 5 ರಿಂದ 10 ಸದಸ್ಯರು ಇರಬೇಕು ಎಂಬ ನಿಯಮಗಳನ್ನು ವಿಧಿಸಲಾಗಿದೆ.

ಅಕ್ಕ ಕೆಫೆಯು ಗ್ರಾಹಕರಿಗೆ ಬೆಳಗ್ಗಿನಿಂದ ರಾತ್ರಿವರೆಗೆ ಉತ್ತಮ ಗುಣಮಟ್ಟದ ತಿಂಡಿ, ಊಟವನ್ನು ಒದಗಿಸಲಿದ್ದು, ಈ ಕೆಫೆಯನ್ನು ಸಂಪೂರ್ಣ ಮಹಿಳಾ ಸದಸ್ಯರೇ ನಿರ್ವಹಣೆ ಮಾಡಲಿದ್ದಾರೆ. ಸಂಘದ ಲೇಬಲ್‌ವುಳ್ಳ ಉಡುಪುಗಳನ್ನು ಧರಿಸಿಕೊಂಡು ಅಡುಗೆ ತಯಾರಿಸುವುದು, ಸಪ್ಲೈಯರ್, ಕ್ಲೀನಿಂಗ್ ಮತ್ತಿತರ ಕಾರ್ಯವನ್ನು ನಿರ್ವಹಿಸಲಿದ್ದಾರೆ.

ಸ್ಥಳೀಯ ಬೇಡಿಕೆಯ ಆಹಾರಗಳು, ರುಚಿಗೆ ಅನುಗುಣವಾಗಿ ಆಹಾರ ತಯಾರಿಕೆ ಮಾಡಬೇಕು. ಬೆಳಗ್ಗೆ ಇಡ್ಲಿ, ವಡೆ, ಖಾರಾಬಾತ್, ಕೇಸರಿಬಾತ್, ಪೊಂಗಲ್, ಮಧ್ಯಾಹ್ನ ಮಿನಿಮೀಲ್ಸ್, ಚಪಾತಿ, ಮುದ್ದೆ ಊಟದ ಮೆನು ಇರುತ್ತದೆ. ಆಯ್ಕೆಗೊಳ್ಳುವ ಸ್ವಸಹಾಯ ಸಂಘಗಳಿಗೆ ಸರ್ಕಾರ ಕಾಲ ಕಾಲಕ್ಕೆ ಅಗತ್ಯ ತರಬೇತಿ ನೀಡಲಿದೆ.

> "ಅಕ್ಕ ಕೆಫೆ ಹದಿನೈದು ದಿನಗಳಲ್ಲಿ ಮೂರು ಕಡೆ ಶುರುವಾಗಲಿದೆ. ಜಿಪಂ ಕಚೇರಿ ಹಿಂಭಾಗದ ಜಾಗದಲ್ಲಿ ಕೆಫೆಯನ್ನು ನಿರ್ಮಿಸಲಾಗಿದೆ. ಆ ಜಾಗದಲ್ಲಿ ವಾಹನಗಳನ್ನು ನಿಲುಗಡೆ ಮಾಡಲಾಗುತ್ತಿತ್ತು. ಪಾರ್ಕಿಂಗ್‌ಗೆ ಬೇರೆ ಸ್ಥಳವನ್ನು ನಿಯೋಜಿಸಲಾಗಿದೆ. ಮೊದಲ ಹಂತದಲ್ಲಿ ಮೂರು ಕೆಫೆಗಳು ಆರಂಭಗೊಳ್ಳಲಿವೆ. ಇಂದಿರಾ ಕ್ಯಾಂಟೀನ್‌ಗೂ ಅಕ್ಕ ಕೆಫೆಗೂ ವ್ಯತ್ಯಾಸವಿದೆ. ಹಂತ ಹಂತವಾಗಿ ಸಾರ್ವಜನಿಕರು, ಹೆಚ್ಚು ನಾಗರಿಕರು ಸೇರುವ ಸ್ಥಳಗಳಲ್ಲಿ ಆರಂಭಿಸಲಾಗುವುದು.
> –ಎಸ್.ಯುಕೇಶ್‌ಕುಮಾರ್, ಸಿಇಒ, ಜಿಪಂ

ಮೈಸೂರು ಮಣಿಪಾಲ್ ಆಸ್ಪತ್ರೆಯಲ್ಲಿ 'ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಸೈನ್ಸಸ್' ಆರಂಭ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಣಿಪಾಲ್ ಆಸ್ಪತ್ರೆಯ ಹಿರಿಯ ಕನ್ಸಲ್ಟೆಂಟ್ ಡಾ.ಎ.ಕೆ.ಸತೀಶ್ ರಾವ್ ಮಾತನಾಡಿದರು.

ಮೈಸೂರು,ಫೆ.26(ಜಿಎ)–ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಜೀರ್ಣಾಂಗ ಮತ್ತು ಲಿವರ್ ಸಂಬಂಧಿತ ಕಾಯಿಲೆಗಳಿಗಾಗಿ 'ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಸೈನ್ಸಸ್' ಆರಂಭವಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಉಪೇಂದ್ರ ಶೆಣೈ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಮೈಸೂರು ಮತ್ತು ಅಕ್ಕಪಕ್ಕದ ಜಿಲ್ಲೆಗಳಲ್ಲಿ ಜೀರ್ಣಾಂಗ ಮತ್ತು ಲಿವರ್ ಸಂಬಂಧಿತ ಕಾಯಿಲೆಗಳು ಹೆಚ್ಚುತ್ತಿವೆ. ಬದಲಾದ ಜೀವನಶೈಲಿ, ದೈಹಿಕ ಶ್ರಮವಿಲ್ಲದ ದಿನಚರಿ, ಹೆಚ್ಚುತ್ತಿರುವ ಮಾನಸಿಕ ಒತ್ತಡ ಮತ್ತು ರೋಗ ಲಕ್ಷಣಗಳ ಬಗ್ಗೆ ಅರಿವಿನ ಕೊರತೆಯಿಂದಾಗಿ ರೋಗ ನಿರ್ಣಯ ವಿಳಂಬವಾಗುತ್ತಿದೆ. ಹೀಗಾಗಿ ರೋಗಿಗಳಿಗೆ ಒಂದೇ ಕಡೆ ಎಲ್ಲಾ ರೀತಿಯ ಚಿಕಿತ್ಸೆ ನೀಡಲು ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಸೈನ್ಸಸ್ ಪ್ರಾರಂಭಿಸಲಾಗಿದೆ ಎಂದರು.

ಹಿರಿಯ ಕನ್ಸಲ್ಟೆಂಟ್ ಡಾ.ಎ.ಕೆ. ಸತೀಶ್‌ರಾವ್ ಮಾತನಾಡಿ, ಈ ನೂತನ ವಿಭಾಗವು ಗ್ಯಾಸ್ಟ್ರೋ ಎಂಟರಾಲಜಿ, ಹೆಪಟಾಲಜಿ, ಸರ್ಜಿಕಲ್ ಗ್ಯಾಸ್ಟ್ರೋ ಎಂಟರಾಲಜಿ ಮತ್ತು ಆಧುನಿಕ ಇಂಟರ್ವೆನ್ಷನಲ್ ಎಂಡೋಸ್ಕೋಪಿಯನ್ನು ಒಂದೆಡೆ ಲಭ್ಯವಾಗುವಂತೆ ಮಾಡಲಿದೆ. ರೋಗಿಗಳಿಗೆ ಆರಂಭಿಕ ಹಂತದಲ್ಲಿಯೇ ನಿಖರ ರೋಗಪತ್ತೆ, ಸುಧಾರಿತ ಪರೀಕ್ಷಾ ವಿಧಾನಗಳು ಮತ್ತು ಸಮಗ್ರ ಚಿಕಿತ್ಸೆ ಒದಗಿಸುವುದು ಇದರ ಉದ್ದೇಶ ಎಂದರು.

ಜೀರ್ಣಾಂಗ ಮತ್ತು ಲಿವರ್ ಕಾಯಿಲೆಗಳು ಸದ್ದಿಲ್ಲದೆ ಬೆಳೆಯುತ್ತವೆ. ಮೈಸೂರಿನಲ್ಲಿಯೇ ಲಭ್ಯವಿರುವ ಸುಧಾರಿತ ತಂತ್ರಜ್ಞಾನ ಬಳಸಿಕೊಂಡು ಆರಂಭಿಕ ರೋಗ ನಿರ್ಣಯಕ್ಕೆ ಒತ್ತು ನೀಡುವುದು ನಮ್ಮ ಗುರಿ. ಜೀರ್ಣಾಂಗ ಸಮಸ್ಯೆ ಕಾಣಿಸಿಕೊಂಡಾಗ ಯಾರೂ ನಿರ್ಲಕ್ಷ್ಯ ವಹಿಸಬಾರದು. ರಕ್ತವಾಂತಿ, ಮಲದಲ್ಲಿ ರಕ್ತ ಹೋಗುವುದು ಮುಂತಾದ ಸಮಸ್ಯೆ ಎದುರಾದ ಕೂಡಲೇ ತಪಾಸಣೆಗೆ ಒಳಗಾಗಬೇಕು. ಈಗ ಎಂಡೋಸ್ಕೋಪಿ ಮೂಲಕವೇ ಚಿಕಿತ್ಸೆ ನೀಡಬಹುದಾಗಿದೆ ಎಂದರು.

ತಜ್ಞ ವೈದ್ಯ ಡಾ.ವಾಸುದೇವ್ ಪೈ ಹೊಸದುರ್ಗ ಮಾತನಾಡಿ, ರೋಗಿಗಳು ಸಾಮಾನ್ಯವಾಗಿ ಜೀರ್ಣಾಂಗವು ಸಂಪೂರ್ಣವಾಗಿ ಕೆಟ್ಟ ಮೇಲೆಯೇ ಆಸ್ಪತ್ರೆಗೆ ಬರುತ್ತಾರೆ. ಆ ಕೋಶಗಳು ಕೊಳೆತಿರುತ್ತವೆ. ಲಿವರ್ ಫೇಲ್ ಆಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ನಾವು ಕೀ ಹೋಲ್ ಸರ್ಜರಿ ಮೂಲಕ ಸರಿಪಡಿಸುತ್ತೇವೆ. ಈಗ ಗ್ಯಾಸ್ಟ್ರೋ ವಿಭಾಗವು ಗುಣ ಮಟ್ಟದ ತಂಡವನ್ನು ಹೊಂದಿದೆ. ಜೊತೆಗೆ ಆಸ್ಪತ್ರೆಗೆ ಲಿವರ್ ಟ್ರಾನ್ಸ್‌ಪ್ಲಾಂಟ್‌ಗೆ ಅನುಮತಿಯೂ ದೊರಕಿರುವುದರಿಂದ ಹೆಚ್ಚಿನ ಚಿಕಿತ್ಸೆಗೆ ಇಲ್ಲಿ ಅನುಕೂಲಕತೆಗಳು ಲಭ್ಯವಿದೆ ಎಂದರು.

ಆಸ್ಪತ್ರೆಯ ಡಾ.ನಿಶ್ಚಯ್ ಮಾತನಾಡಿ, ಮಣಿಪಾಲ್ ಆಸ್ಪತ್ರೆಯು ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಚಿಕಿತ್ಸೆ ನೀಡುತ್ತಿದೆ. ತೀರ ಬಡವರಿಗೆ ಮಣಿಪಾಲ್ ಫೌಂಡೇಷನ್ ಮೂಲಕ ಸಹಾಯ ಧನ ನೀಡಲು ಸಾಧ್ಯವಿದೆ ಎಂದು ತಿಳಿಸಿದರು.

ನಾಳೆ ಕನ್ನಡ, ಹಿಂದಿ ಹಾಡುಗಳ ಗೀತ ಗಾಯನ

ಮೈಸೂರು,ಫೆ.26(ಜಿಎ)–'ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್' ತನ್ನ 12ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಹಾಗೂ ಹಳೇ ಕನ್ನಡ, ಹಿಂದಿ ಹಾಡುಗಳ ಗೀತಗಾಯನ ಕಾರ್ಯಕ್ರಮವನ್ನು ನಾದಬ್ರಹ್ಮ ಸಂಗೀತ ಸಭಾದಲ್ಲಿ ಫೆ.28ರಂದು ಸಂಜೆ 5ಕ್ಕೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಟ್ರಸ್ಟ್‌ನ ಸಂಸ್ಥಾಪಕ ರೇವಣ್ಣ ಈ ವಿಷಯ ತಿಳಿಸಿ, ವಿಜಯನಗರದ ಯೋಗ ನರಸಿಂಹ ದೇವಸ್ಥಾನದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಅಧ್ಯಕ್ಷತೆ ವಹಿಸುವರು. ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ್ ವಿ.ಬೈರಿ, ನೆಹರು ಯುವ ಕೇಂದ್ರದ ನಿವೃತ್ತ ನಿರ್ದೇಶಕ ನಟರಾಜು, ಚಿಂತಕ ಕೆ.ರಘುರಾಂ ವಾಜಪೇಯಿ, ವಕೀಲರಾದ ಹೆಚ್.ಹರೀಶ್ ಹೆಗ್ಡೆ, ಹೆಚ್.ಎನ್.ವೆಂಕಟೇಶ್, ಎಸ್.ಜೆ. ಮದ್ದುರಾಜ್ ಮತ್ತು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ರಂಗಭೂಮಿ ಕಲಾವಿದ ಮತ್ತು ತಬಲವಾದಕ ರಂಗಸ್ವಾಮಿ ಅವರನ್ನು ಅಭಿನಂದಿಸಲಾಗುವುದು. ಹಳೆಯ ಅನುಭವಿ ಗಾಯಕರು ಹಳೆಯ ಚಿತ್ರ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶ್ರೀಕಂಠರಾವ್, ರೇಣುಕಾ ಆರಾಧ್ಯ, ಗೋಪಾಲ್ ಉಪಸ್ಥಿತರಿದ್ದರು.

ಇಮ್ಮಾವು ಗೇಣಿದಾರರಿಗೆ ಪರಿಹಾರಕ್ಕೆ ಆಗ್ರಹಿಸಿ ರೈತರ ಅನಿರ್ದಿಷ್ಟಾವಧಿ ಧರಣಿ



ಮೈಸೂರು ಡಿಸಿ ಕಚೇರಿ ಎದುರು ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಯಿತು.

ಮೈಸೂರು,26(ಎಂಕೆ)– ನಂಜನಗೂಡು ತಾಲೂಕು ಇಮ್ಮಾವು ಗ್ರಾಮದ ಸರ್ವೆ ನಂ.390ರಿಂದ 430ರವರೆಗಿನ ಜಮೀನು ಗೇಣಿದಾರರಿಗೆ ಪರಿಹಾರ ಕಲ್ಪಿಸುವಂತೆ ಹಾಗೂ ಕಾನೂನುಬಾಹಿರವಾಗಿ ಪರಿಹಾರ ಪಡೆದವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ರಾಜ್ಯ ರೈತ ಸಂಘದ ವತಿಯಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಯಿತು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಭಗವಾನ್ ಗೌತಮ ಬುದ್ಧ ವೃತ್ತದಲ್ಲಿ ಗುರುವಾರ ಜಮಾವಣೆಗೊಂಡ ನೂರಾರು ರೈತರು, ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿ ಧಿಕ್ಕಾರದ ಘೋಷಣೆ ಮೂಲಕ ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಂಜನಗೂಡಿನ ಚಿಕ್ಕಯ್ಯನ ಛತ್ರ ಹೋಬಳಿ ಇಮ್ಮಾವು ಗ್ರಾಮಕ್ಕೆ ಸೇರಿದ ಸುಮಾರು 500 ಎಕರೆಗೂ ಹೆಚ್ಚು ಸರಕಾರಿ ಜಮೀನಿನಲ್ಲಿ, ಕಳೆದ 70–80 ವರ್ಷಗಳಿಂದ ಗೇಣಿದಾರರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ಜಮೀನನ್ನು ಸರಕಾರ ಕೈಗಾರಿಕಾ ಉದ್ದೇಶಕ್ಕಾಗಿ 2008ರಲ್ಲಿ ಭೂಸ್ವಾಧೀನ ಪಡಿಸಿಕೊಂಡು ಖಾತೆದಾರರಿಗೆ ಎಕರೆಗೆ 21 ಲಕ್ಷ ರೂ. ಪರಿಹಾರವನ್ನು ನಿಗಧಿಪಡಿಸಿ ಪರಿಹಾರವನ್ನು ಪಾವತಿಸಿದೆ.

ಹಾಗೆಯೇ ಬಿ ಖರಾಬಿನಲ್ಲಿ ಸಾಗುವಳಿ ಮಾಡುತ್ತಿದ್ದ ರೈತರಿಗೆ ಸರ್ಕಾರ ಸುಮಾರು 18 ಕೋಟಿ ಬಿಡುಗಡೆ ಮಾಡಿ ನಿಜವಾದ ಸಾಗುವಳಿದಾರರ ಬಿಟ್ಟು ಬೇರೆಯವರಿಗೆ ಪರಿಹಾರದ ಹಣವನ್ನು ನೀಡುವ ಮೂಲಕ ವಂಚಿಸಲಾಗಿದೆ ಎಂದು ಆರೋಪಿಸಿದರು.

ಇದರ ವಿರುದ್ಧ 2025ರ ಮೇ 25ರಿಂದ ನಿರಂತರವಾಗಿ ಸ್ಥಳದಲ್ಲಿ ಅನಿರ್ದಿಷ್ಟ ಕಾಲ ಚಳುವಳಿ ನಡೆಸಿ, ಡಿಸಿ ಕಚೇರಿ ಮುಂಭಾಗ ಎರಡು ಬಾರಿ ಪ್ರತಿಭಟನೆ ಮಾಡಿ ಗಮನಕ್ಕೆ ತಂದರೂ ನ್ಯಾಯ ಸಿಕ್ಕಿಲ್ಲ. ಮೈಸೂರಿನ ಕೆಐಎಡಿಬಿ ಕಚೇರಿ ಮುಂದೆ ಫೆ.2ರಂದು ಅನಿರ್ದಿಷ್ಟಾವಧಿ ಚಳುವಳಿ ಪ್ರಾರಂಭ ಮಾಡಿದ ನಂತರ ಫೆ.3ರಂದು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು 15 ದಿನಗಳ ಒಳಗಾಗಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದ ಮೇರೆಗೆ ಚಳವಳಿ ಹಿಂದಕ್ಕೆ ಪಡೆಯಲಾಗಿತ್ತು ಆದರೆ, ಗಡುವು ಮುಕ್ತಾಯಗೊಂಡರು ಯಾವುದೇ ಕ್ರಮಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರಿಗಳು ಗಂಭಿರವಾಗಿ ಪರಿಗಣಿಸದೇ ಇರುವುದರಿಂದ ನೈಜ ರೈತರಿಗೆ ಅನ್ಯಾಯವಾಗಿದೆ. ನೊಂದ ರೈತರಿಗೆ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಸುತ್ತೇವೆ. ಚಿತ್ರನಗರಿಗಾಗಿ ಭೂಮಿ ಕಳೆದುಕೊಂಡ ಇಮ್ಮಾವು ಹಾಗೂ ಗಾಲ್ಫ್ ಕಂಪನಿಗೆ ಭೂಮಿ ಕಳೆದುಕೊಂಡ ಕೋಚನಹಳ್ಳಿ ರೈತರಿಗೆ ಉದ್ಯೋಗ ಮತ್ತು ನಿವೇಶನ ನೀಡುವಂತೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಹೊಸಕೋಟೆ ಬಸವರಾಜ್, ಪಿ.ಮರಂಕಯ್ಯ, ಪ್ರೇಮ್‌ರಾಜ್, ಮೈದನಹಳ್ಳಿ ಮಹೇಶ್, ಕೋಚನಹಳ್ಳಿ, ಇಮ್ಮಾವು ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

ಮಾನವ-ವನ್ಯಜೀವಿ ಸಂಘರ್ಷ ತಡೆ ಸೇರಿ ನಾನಾ ಬೇಡಿಕೆ ಈಡೇರಿಸಲು ಆಗ್ರಹಿಸಿ ರೈತ ಸಂಘಟನೆಗಳ ಪ್ರತಿಭಟನೆ



ಮೈಸೂರು ಡಿಸಿ ಕಚೇರಿ ಎದುರು ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ, ಸೇವ್ ಕಬಿನಿ ಸಮಿತಿ ವತಿಯಿಂದ 2ನೇ ದಿನವೂ ಪ್ರತಿಭಟನೆ ನಡೆಸಲಾಯಿತು.

ಮೈಸೂರು, 26(ಎಂಕೆ)– ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆ, ಮಾನವ ಹಾಗೂ ವನ್ಯಜೀವಿ ಸಂಘರ್ಷ, ಬೆಳೆ ನಷ್ಟಕ್ಕೆ ವೈಜ್ಞಾನಿಕವಾಗಿ ಪರಿಹಾರ ಹಾಗೂ ನೀರಾವರಿ ಇಲಾಖೆ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಹಾಗೂ ಸೇವ್ ಕಬಿನಿ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಮುಷ್ಕರ ಹಿನ್ನೆಲೆಯಲ್ಲಿ ಎರಡನೇ ದಿನವೂ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣದ ಎದುರು ಜಮಾವಣೆಗೊಂಡಿದ್ದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ ಕೂಡಲೇ ಕಾಡಂಚಿನ ಗ್ರಾಮಗಳ ರೈತರ ಹಿತ ರಕ್ಷಣೆಗಾಗಿ ಬಂಡೀಪುರ, ನಾಗರಹೊಳೆ ಅರಣ್ಯದಲ್ಲಿ ಸಫಾರಿ ಸ್ಥಗಿತಗೊಳಿಸುವಂತೆ ಒತ್ತಾಯಿಸಿದರು. ಹಾಗೆಯೇ ರೈತರ ಕೃಷಿ ಭೂಮಿ ದುರಸ್ತಿ, ಪೋಡಿ ಸಮೇತ ಹಕ್ಕುಪತ್ರ ಕೊಡಬೇಕು, ಕೃಷಿ ಪಂಪ್‌ಸೆಟ್‌ಗಳಿಗೆ 7 ಗಂಟೆಗಳ ನಿರಂತರ ವಿದ್ಯುತ್ ಸರಬರಾಜು ಮಾಡಬೇಕು ಎಂದು ಆಗ್ರಹಿಸಿದರಲ್ಲದೆ 'ಕಾಡನ್ನು ಉಳಿಸಿ, ಬೆಳೆಗಳನ್ನು ಉಳಿಸಿ', 'ಕಬಿನಿ ನೀರು ರೈತರ ಉಸಿರು', 'ಕಾಡಂಚಿನಲ್ಲಿ ರೆಸಾರ್ಟ್‌ಗಳು ಬೇಡವೇ ಬೇಡ' ಎಂಬಿತ್ಯಾದಿ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು.

ಮುಖ್ಯಮಂತ್ರಿಗಳ ಚಿನ್ನದ ಪದಕ ವಿತರಣೆ...



ಮೈಸೂರಿನ ಹೆಬ್ಬಾಳು ಅಗ್ನಿಶಾಮಕ ಠಾಣೆಯಲ್ಲಿ ಫೈರ್ ಸ್ಟೇಷನ್ ಆಫೀಸರ್ ಆಗಿ ಕಾರ್ಯನಿರ್ವಹಿಸುತ್ತಿರುವ ಜಿ.ಲಕ್ಷ್ಮೀಕಾಂತ ಯಾದವ್ ಅವರ ಸಾಹಸ ಮತ್ತು ಶಿಸ್ತನ್ನು ಪರಿಗಣಿಸಿ, ಗೃಹ ಸಚಿವ ಜಿ.ಪರಮೇಶ್ವರ್ ಬೆಂಗಳೂರಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಚಿನ್ನದ ಪದಕ ನೀಡಿ ಗೌರವಿಸಿದರು.

'ಟೀಂ ಮೈಸೂರ್'ಗೆ ಪಾಲಿಕೆಯಿಂದ ಸ್ವಚ್ಛತಾ ಚಾಂಪಿಯನ್ ಬಿರುದು



ಮೈಸೂರು ಮಹಾನಗರಪಾಲಿಕೆ ವತಿಯಿಂದ ಸ್ವಚ್ಛತಾ ರಾಯಬಾರಿಗಳನ್ನು ಸನ್ಮಾನಿಸಿದ ವೇಳೆ 'ಟೀಂ ಮೈಸೂರು'ಗೆ ಸ್ವಚ್ಛತಾ ಚಾಂಪಿಯನ್' ಬಿರುದು ನೀಡಿ, ತಂಡದ ಸದಸ್ಯರನ್ನು ಅಭಿನಂದಿಸಲಾಯಿತು.

ಮೈಸೂರು,ಫೆ.26–ಮೈಸೂರು ಮಹಾನಗರಪಾಲಿಕೆ ವತಿಯಿಂದ ಆಯೋಜಿಸಿದ್ದ 2025–26ನೇ ಸಾಲಿನ ಸ್ವಚ್ಛ ಸರ್ವೇಕ್ಷಣೆ ರಾಯಬಾರಿಗಳನ್ನು ಅಭಿನಂದಿಸಿದ ವೇಳೆ ಟೀಂ ಮೈಸೂರು ತಂಡಕ್ಕೆ 'ಸ್ವಚ್ಛತಾ ಚಾಂಪಿಯನ್' ಬಿರುದು ನೀಡಿ, ಪ್ರಶಂಸಿಸಲಾಯಿತು.

ನಗರದೆಲ್ಲೆಡೆ ಗಿಡಗಳನ್ನು ನೆಟ್ಟು ಪೋಷಿಸುವುದು, ಅರಳಿಕಟ್ಟೆ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಇಡಲಾಗುವ ದೇವರ ಹಳೆಯ ಫೋಟೋಗಳನ್ನು ಗೌರವಯುತವಾಗಿ ಹಾಗೂ ಶ್ರದ್ಧಾಭಕ್ತಿಯೊಂದಿಗೆ ವಿಲೇವಾರಿ ಮಾಡುವುದು ಸೇರಿದಂತೆ ಕಳೆದ 12 ವರ್ಷಗಳಿಂದ ವಿವಿಧ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿರುವುದನ್ನು ಗಮನಿಸಿ, ಟೀಂ ಮೈಸೂರು ಸದಸ್ಯರನ್ನು ಅಭಿನಂದಿಸಲಾಯಿತು.

ಈ ವೇಳೆ ಸ್ವಚ್ಛತಾ ರಾಯಬಾರಿಗಳಾದ ನಟ ವಸಿಷ್ಠ ಸಿಂಹ ಹಾಗೂ ನಟಿ ಹರಿಪ್ರಿಯಾ ದಂಪತಿ, ಶಿಲ್ಪ ಕಲಾವಿದ ಅರುಣ್ ಯೋಗಿರಾಜ್, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಸೇರಿದಂತೆ ಅನೇಕ ಅಧಿಕಾರಿಗಳು, ಟೀಂ ಮೈಸೂರು ಸದಸ್ಯರಾದ ಗೋಕುಲ್ ಗೋವರ್ಧನ್, ಕಿರಣ್ ಜೈರಾಮ್ ಗೌಡ, ಅನಿಲ್ ಜೈನ್, ಹಿರಿಯಣ್ಣ ರಾಮಪ್ರಸಾದ್, ಆನಂದ್, ನಾರಾಯಣ್, ಬಾಲಕೃಷ್ಣ, ಹರೀಶ್ ಶೆಟ್ಟಿ, ಹರೀಶ್ ಗೋಕುಲಂ, ಶೇಖರ್, ಮಂಜುನಾಥ್, ಗಣೇಶ್‌ಪ್ರಸಾದ್, ಉಮಾ, ಸಹನಾ, ಕುಮಾರಿ ಸುಕೃತ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಜಾಗ ಖಾಲಿ ಮಾಡಲು ಪಾಕ್‌ಗೆ ಎಚ್ಚರಿಕೆ



ನವದೆಹಲಿ: ಜಮ್ಮು-ಕಾಶ್ಮೀರದ ಅಭಿವೃದ್ಧಿ ಬಗ್ಗೆ ತಪ್ಪು ಮಾಹಿತಿ ಹರಡಿದ್ದ ಪಾಕಿಸ್ತಾನವನ್ನು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಭಾರತ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಯುಎನ್‌ಎಚ್‌ಆರ್‌ಸಿಯ 16ನೇ ಅಧಿವೇಶನದಲ್ಲಿ ಮಾತನಾಡಿದ ಭಾರತದ ಪ್ರತಿನಿಧಿ ಅನುಪಮಾಸಿಂಗ್, ಭಾರತೀಯ ಪ್ರದೇಶದ ಅಭಿವೃದ್ಧಿಯನ್ನು ನಂಬಲು ಕಷ್ಟವಾಗಿ ಪಾಕಿಸ್ತಾನವು ಭ್ರಮೆಯಲ್ಲಿ ಮುಳುಗಿರಬೇಕು ಇಲ್ಲವೇ ಲಾ-ಲಾ ಭೂಮಿ(ಕಾಲ್ಪನಿಕ ಪ್ರದೇಶ)ಯಲ್ಲಿ ವಾಸಿಸುತ್ತಿರಬೇಕು. ಏಕೆಂದರೆ ಈ ಭಾರತೀಯ ಪ್ರದೇಶದ ಬಜೆಟ್ ಇತ್ತೀಚೆಗೆ ಇಸ್ಲಾಮಾಬಾದ್ ಅಂತಾರಾಷ್ಟ್ರೀಯ ಹಣಕಾಸು ನಿಧಿಯಿಂದ ಬಯಸಿದ್ದಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ ಎಂದರು.

ಜಮ್ಮು-ಕಾಶ್ಮೀರದಲ್ಲಿ ಕಳೆದ ವರ್ಷ ಉದ್ಘಾಟನೆಗೊಂಡ ವಿಶ್ವದ ಅತಿ ಎತ್ತರದ ಸೇತುವೆ ಚೆನಾಬ್ ರೈಲು ಸೇತುವೆ ನಕಲಿಯಾಗಿದ್ದರೆ, ಪಾಕಿಸ್ತಾನವು ಭ್ರಮೆಯಲ್ಲಿ ಮುಳುಗಿರಬೇಕು ಇಲ್ಲವೇ ಕಾಲ್ಪನಿಕ ಪ್ರದೇಶದಲ್ಲಿ ವಾಸಿಸುತ್ತಿರಬೇಕು. ನಾವು ಈ ಆರೋಪವನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತೇವೆ. ಜಮ್ಮು-ಕಾಶ್ಮೀರ ಎಂದಿಗೂ ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗವಾಗಿದೆ. 1947ರಲ್ಲಿ ಈ ಪ್ರದೇಶವನ್ನು ಭಾರತಕ್ಕೆ ಸೇರಿಸಿಕೊಳ್ಳುವುದು ಭಾರತೀಯ ಸ್ವಾತಂತ್ರ್ಯ ಕಾಯ್ದೆ, ಅಂತಾ ರಾಷ್ಟ್ರೀಯ ಕಾನೂನಿನ ಪ್ರಕಾರ ಕಾನೂನುಬದ್ಧ ಹಾಗೂ ಬದಲಿಸಲಾಗದ್ದು. ಇಸ್ಲಾಮಾಬಾದ್ ತನ್ನ ನಿಯಂತ್ರಣದಲ್ಲಿರುವ ಪ್ರದೇಶಗಳನ್ನು ಖಾಲಿ ಮಾಡಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಭಾರತದ ಸೌರ ಉತ್ಪನ್ನಗಳ ಮೇಲೆ ಶೇ.126 ಸುಂಕ



ಅಮೆರಿಕ: ಭಾರತ ಸೇರಿದಂತೆ ಕೆಲವು ದೇಶಗಳಿಂದ ಅಮೆರಿಕಕ್ಕೆ ಬರುವ ಸೌರ ಉತ್ಪನ್ನಗಳ ಮೇಲೆ ತಾತ್ಕಾಲಿಕವಾಗಿ ಶೇಕಡಾ 126ವರೆಗೆ ಸುಂಕ ವಿಧಿಸಿರುವ ಡೊನಾಲ್ಡ್ ಟ್ರಂಪ್ ಸರ್ಕಾರ, ಸರ್ಕಾರಿ ಸಹಾಯಧನಗಳು ಅಮೆರಿಕದ ಉತ್ಪಾದಕರಿಗೆ ಹಾನಿ ಉಂಟುಮಾಡುತ್ತಿರುವುದರಿಂದ ಈ ಕ್ರಮ ಕೈಗೊಂಡಿರುವುದಾಗಿ ತಿಳಿಸಿದೆ. ಇಂಡೋನೇಷ್ಯಾದ ರಫ್ತುದಾರರ ಮೇಲೆ ಶೇ.86ರಿಂದ ಶೇ.143ರವರೆಗೆ ಸುಂಕ ವಿಧಿಸಲಾಗಿದ್ದು, ಲಾವೋಸ್‌ನ ರಫ್ತುದಾರರು ಸುಮಾರು ಶೇ.81ರಷ್ಟು ಸುಂಕವನ್ನು ಎದುರಿಸಬೇಕಾಗಿದೆ. ಇದು ನವೀಕರಿಸಬಹುದಾದ ಇಂಧನ ಸರಪಳಿಯನ್ನು ಗುರಿಯಾಗಿಸಿಕೊಂಡ ಮಹತ್ವದ ವ್ಯಾಪಾರ ಕ್ರಮವೆಂದು ಪರಿಗಣಿಸಲಾಗಿದೆ. ಈ ಮೂರು ದೇಶಗಳಲ್ಲಿ ಸರ್ಕಾರ ಬೆಂಬಲಿತ ಪ್ರೋತ್ಸಾಹಧನಗಳಿಂದ ಉತ್ಪಾದಕರು ಮಾರುಕಟ್ಟೆ ದರಕ್ಕಿಂತ ಕಡಿಮೆ ಬೆಲೆಗೆ ಸೌರ ಮಾಡ್ಯೂಲ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಅಮೆರಿಕ ಸರ್ಕಾರ ಭಾವಿಸಿಕೊಂಡಿದ್ದು, ಇದರಿಂದ ಅಮೆರಿಕದ ಸ್ಥಳೀಯ ಸೌರ ಉತ್ಪಾದಕರಿಗೆ ಹಾನಿಯಾಗಿದೆ ಎಂದು ಹೇಳಿ ಹೆಚ್ಚಿನ ಸುಂಕ ವಿಧಿಸಿದೆ. ವಿಶ್ಲೇಷಕ ವಿಕ್ರಮ್ ಬಾಗ್ರಿ ಹೇಳುವಂತೆ, ಈ ಹೆಚ್ಚಿದ ಸುಂಕ ಭವಿಷ್ಯದಲ್ಲಿ ಭಾರತೀಯ ಉತ್ಪಾದಕರನ್ನು ಅಮೆರಿಕ ಮಾರುಕಟ್ಟೆಯಿಂದ ಹೊರಗುಳಿಸುವ ಸಾಧ್ಯತೆ ಇದೆ.

ಶತಮಾನದ ಹಿಂದಿನ ಸಾಲ ವಸೂಲಿಗೆ ಮುಂದಾದ ಉದ್ಯಮಿ ಮೊಮ್ಮಗ



ಭೋಪಾಲ್: ಶತಮಾನದ ಹಿಂದೆ ಬ್ರಿಟಿಷ್ ಸರ್ಕಾರಕ್ಕೆ ತಮ್ಮ ಪೂರ್ವಜರು ನೀಡಿದ್ದ ಸಾಲವನ್ನು ವಾಪಸ್ ಕೇಳಲು ವ್ಯಕ್ತಿಯೊಬ್ಬರು ಮುಂದಾಗಿರುವುದು ದೇಶದ ಗಮನ ಸೆಳೆದಿದೆ.

ಭಾರತದ ಶ್ರೀಮಂತ ವ್ಯಾಪಾರಿ ಬ್ರಿಟಿಷ್ ಸರ್ಕಾರವು 109 ವರ್ಷಗಳ ಹಿಂದೆ ಅಂದರೆ 1917ರಲ್ಲಿ ಮಧ್ಯಪ್ರದೇಶದ ಸೆಹೋರ್ ಪಟ್ಟಣದ ಪ್ರತಿಷ್ಠಿತ ಉದ್ಯಮಿ ಸೇಠ್ ಜುಮ್ಮಾಲಾಲ್ ರುಥಿಯಾ ಅವರಿಂದ 35,000 ರೂ. ಸಾಲವಾಗಿ ಪಡೆದಿತ್ತು. ಮೊದಲ ಮಹಾಯುದ್ಧ ಸಂದರ್ಭದಲ್ಲಿ ಆಡಳಿತಾತ್ಮಕ ವೆಚ್ಚಗಳಿಗಾಗಿ ಈ ಹಣ ಪಡೆಯಲಾಗಿತ್ತು ಎನ್ನಲಾಗಿದೆ. ಆದರೆ ಒಂದು ಶತಮಾನ ಕಳೆದರೂ ಈ ಸಾಲ ತೀರಿಲ್ಲ ಎಂದು ರುಥಿಯಾ ಅವರ ಕುಟುಂಬ ಈಗ ನ್ಯಾಯಾಲಯದ ಮೆಟ್ಟಿಲೇರಲು ಸಿದ್ಧತೆ ನಡೆಸುತ್ತಿದೆ. ಸೇಠ್ ಜುಮ್ಮಾಲಾಲ್ ಅವರ ಮೊಮ್ಮಗ ವಿವೇಕ್ ರುಥಿಯಾ ಅವರಿಗೆ ಇತ್ತೀಚೆಗೆ ತಮ್ಮ ತಂದೆಯ ನಿಧನದ ನಂತರ ಹಳೆಯ ದಾಖಲೆಗಳನ್ನು ಪರಿಶೀಲಿಸುವಾಗ ಈ ಸಾಲದ ವಿವರಗಳು ಲಭ್ಯವಾಗಿವೆ. 1917ರಲ್ಲಿ 35,000 ರೂ. ಎನ್ನುವುದು ಅತ್ಯಂತ ದೊಡ್ಡ ಮೊತ್ತವಾಗಿತ್ತು. ಅಂದಿನ ಚಿನ್ನದ ಬೆಲೆಗೆ ಹೋಲಿಸಿದರೆ ಈ ಮೊತ್ತದ ಇಂದಿನ ಮೌಲ್ಯ ನೂರಾರು ಕೋಟಿ ಆಗುತ್ತದೆ ಎನ್ನುವುದು ಕುಟುಂಬದ ವಾದ. ಸರ್ಕಾರಗಳು ಬದಲಾದರೂ ಈ ಹಿಂದೆ ಪಡೆದ ಸಾಲ ತೀರಿಸುವ ಜವಾಬ್ದಾರಿ ಆಯಾ ದೇಶಗಳ ಮೇಲಿರುತ್ತದೆ ಎಂಬ ಕಾನೂನುಗಳನ್ವಯ ಬ್ರಿಟಿಷ್ ಸರ್ಕಾರಕ್ಕೆ ಕಾನೂನು ನೋಟಿಸ್ ನೀಡಲು ನಿರ್ಧರಿಸಿದ್ದಾರೆ.

ಅಮೆರಿಕಾ ಮಾಜಿ ಪೈಲಟ್‌ನಿಂದ ಚೀನಾದವರಿಗೆ ತರಬೇತಿ



ವಾಷಿಂಗ್ಟನ್: ಅಮೆರಿಕದ ಮಾಜಿ ಫೈಟರ್ ಪೈಲಟ್ ಒಬ್ಬರು ಚೀನಾದ ಮಿಲಿಟರಿ ಪೈಲಟ್‌ಗಳಿಗೆ ರಹಸ್ಯವಾಗಿ ತರಬೇತಿ ನೀಡಿರುವ ಆರೋಪದಡಿ ಯುಎಸ್ ಅಧಿಕಾರಿಗಳು ಬಂಧಿಸಿದ್ದಾರೆ.

ಅಮೆರಿಕದ ಮಾಜಿ ವಾಯುಪಡೆಯ ಮೇಜರ್ ಮತ್ತು ಎಫ್-35 ಲೈಟ್ನಿಂಗ್ 2ರ ಟ್ರೇನರ್ ಪೈಲಟ್ ಆಗಿರುವ 65 ವರ್ಷದ ಜೆರಾಲ್ಡ್ ಬ್ರೌನ್, ಅಮೆರಿಕದ ಅಧಿಕೃತ ಅನುಮತಿಯಿಲ್ಲದೆ ಅಕ್ರಮವಾಗಿ ಚೀನಾದ ಪೈಲಟ್‌ಗಳಿಗೆ ರಹಸ್ಯ ತರಬೇತಿ ನೀಡಿದ್ದಾರೆನ್ನಲಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಅಮೆರಿಕದ ನ್ಯಾಯಾಂಗ ಇಲಾಖೆಯು ಬಂಧಿತ ಬ್ರೌನ್ 2 ದಶಕಗಳ ಕಾಲದ ಮಿಲಿಟರಿ ಅನುಭವ ಹೊಂದಿದ್ದು, ಅಮೆರಿಕದ ಹಲವು ಸೂಕ್ಷ್ಮ ಘಟಕಗಳನ್ನು ಮುನ್ನಡೆಸಿದ್ದಾರೆ. ಇವರನ್ನು ಗಣ್ಯ ಯುದ್ಧ ಪೈಲಟ್ ಎಂದು ಪರಿಗಣಿಸಲಾಗಿತ್ತು. ಆದರೆ, ಈತ ತನ್ನ ಅಮೂಲ್ಯ ಮಿಲಿಟರಿ ಜ್ಞಾನ ಹಾಗೂ ಕೌಶಲವನ್ನು ವಿದೇಶಿ ಮಿಲಿಟರಿಗಳು ಗುರಿಯಾಗಿಸಿಕೊಂಡು ಅಕ್ರಮವಾಗಿ ನೇಮಕ ಮಾಡಿಕೊಂಡಿದ್ದಾರೆ. ಇದು ಅಮೆರಿಕದ ಶಸ್ತ್ರಾಸ್ತ್ರ ರಫ್ತು ನಿಯಂತ್ರಣ ಕಾಯ್ದೆ ಉಲ್ಲಂಘನೆಯಾಗಿದೆ. ಈ ಘಟನೆ ರಾಷ್ಟ್ರೀಯ ಭದ್ರತಾ ವಿಚಾರಗಳ ಬಗ್ಗೆ ಕಳವಳ ಸೃಷ್ಟಿಸಿದೆ ಎಂದಿದ್ದಾರೆ. ಗುಪ್ತಚರ ಮತ್ತು ಬೇಹುಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ರೋಮನ್ ರೋಜಾವ್ಸ್ಕಿ, ಬ್ರೌನ್ ದೇಶಕ್ಕೆ ದ್ರೋಹ ಬಗೆದಿದ್ದಾನೆ. ಇಂತಹವರಿಗೆ ಈ ಬಂಧನವು ಎಚ್ಚರಿಕೆ ಗಂಟೆಯಾಗಿದೆ ಎಂದು ತಿಳಿಸಿದ್ದಾರೆ.

ಪ್ರಧಾನಿ ಮೋದಿ ಇನ್ಸ್ಟಾಗ್ರಾಮ್‌ನಲ್ಲಿ 100 ಮಿಲಿಯನ್ ಫಾಲೋವರ್ಸ್




ನವದೆಹಲಿ: ಜಾಗತಿಕ ಮಟ್ಟದಲ್ಲಿ ಅನುಯಾಯಿಗಳನ್ನು ಹೊಂದಿರುವ ಪ್ರಧಾನಿ ಮೋದಿ, ಸಾಮಾಜಿಕ ಜಾಲತಾಣಗಳಲ್ಲೂ ಯಾವ ಸೆಲೆಬ್ರಿಟಿಗೂ ಕಡಿಮೆ ಇಲ್ಲದ ಫಾಲೋವರ್ಸ್‌ಗಳನ್ನು ಹೊಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಇನ್ಸ್ಟಾಗ್ರಾಮ್‌ನಲ್ಲಿ ಬರೋಬ್ಬರಿ 100 ಮಿಲಿಯನ್(10 ಕೋಟಿ) ಫಾಲೋವರ್ಸ್ ಹೊಂದಿದ್ದಾರೆ. ಈ ಮೂಲಕ ಮೋದಿ ಇನ್ಸ್ಟಾಗ್ರಾಮ್‌ನಲ್ಲಿ ಅತಿಹೆಚ್ಚು ಅನುಯಾಯಿಗಳನ್ನು ಹೊಂದಿರುವ ವಿಶ್ವದ ಏಕೈಕ ರಾಜಕೀಯ ನೇತಾರ ಎಂಬ ಹೆಗ್ಗಳಿಕೆಯನ್ನು ಮುಡಿಗೇರಿಸಿಕೊಂಡಿದ್ದಾರೆ. ಪ್ರಧಾನಿ ಮೋದಿ ಫೇಸ್‌ಬುಕ್‌ನಲ್ಲೂ ಜನಪ್ರಿಯ ನಾಯಕ ಎನಿಸಿಕೊಂಡಿದ್ದಾರೆ.

2014ರಲ್ಲಿ ಮೊದಲ ಬಾರಿಗೆ ಪ್ರಧಾನಿಯಾದ ಬಳಿಕ, ನರೇಂದ್ರ ಮೋದಿ ಅವರು ಇನ್ಸ್ಟಾಗ್ರಾಮ್ ಅಕೌಂಟ್‌ನ್ನು ಆರಂಭಿಸಿದ್ದರು. ಇದೀಗ ಬರೋಬ್ಬರಿ 12 ವರ್ಷಗಳ ಬಳಿಕ ಅವರು 10 ಕೋಟಿ ಅನುಯಾಯಿಗಳನ್ನು ಪಡೆದುಕೊಂಡಿದ್ದಾರೆ. ಪ್ರಧಾನಿ ಮೋದಿ ಅವರು ಇನ್ಸ್ಟಾಗ್ರಾಮ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್(4.32 ಕೋಟಿ) ಅವರಿಗಿಂತ ದುಪ್ಪಟ್ಟು ಫಾಲೋವರ್ಸ್ ಹೊಂದಿದ್ದಾರೆ. ಅದೇ ರೀತಿ ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೋ 1.5 ಕೋಟಿ ಫಾಲೋವರ್ಸ್ ಹೊಂದುವ ಮೂಲಕ ಜಾಗತಿಕ ಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ.

ಶೀಘ್ರದಲ್ಲೇ ಕೊಡಗಿನಲ್ಲೂ ರಶ್ಮಿಕಾ–ದೇವರಕೊಂಡ ವಿವಾಹ ಸಂಭ್ರಮ



ಮಡಿಕೇರಿ,ಫೆ.26– ಕೊಡಗಿನ ಕುವರಿ ಬಹುಭಾಷಾ ತಾರೆ ವಿರಾಜಪೇಟೆ ಮೂಲದ ಮುಂಡಂಡಿರ ರಶ್ಮಿಕ ಮಂದಣ್ಣ ಹಾಗೂ ತೆಲುಗು ಖ್ಯಾತ ನಟ ವಿಜಯ್ ದೇವರಕೊಂಡ ಅವರು ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದಾರೆ. ವಿವಾಹ ಸಮಾರಂಭ ರಾಜಸ್ಥಾನದಲ್ಲಿ ನಡೆಯುತ್ತಿದ್ದು, ವಿರಾಜಪೇಟೆಯ ರಶ್ಮಿಕಾ ಮಂದಣ್ಣ ಅವರ ಮನೆಯಲ್ಲಿ ಮದುವೆ ಚಪ್ಪರ ಸಹಿತ ಮನೆಯನ್ನು ಹೂವುಗಳಿಂದ ಅಲಂಕರಿಸಲಾಗಿದೆ. ಈ ಶುಭ ಕಾರ್ಯದಲ್ಲಿ ಸ್ಯಾಂಡಲ್‌ವುಡ್, ಬಾಲಿವುಡ್, ಟಾಲಿವುಡ್ ಸೇರಿದಂತೆ ಸಿನಿಮಾ ರಂಗದ ಖ್ಯಾತ ನಟ ನಟಿಯರು ಪಾಲ್ಗೊಳ್ಳಲಿದ್ದಾರೆ.

ದೂರದ ರಾಜಸ್ಥಾನದ ಉದಯ್‌ಪುರದ ಖಾಸಗಿ ರೆಸಾರ್ಟ್‌ನಲ್ಲಿ ವಿವಾಹ ನಡೆಯುತ್ತಿದ್ದು, ಮಾರ್ಚ್ 4ರಂದು ಹೈದರಾಬಾದ್‌ನಲ್ಲಿ ರಿಸೆಪ್ಷನ್ ನಡೆಯಲಿದೆ. ಮುಂದಿನ ದಿನಗಳಲ್ಲಿ ಕೊಡಗಿನಲ್ಲೂ ವಿವಾಹ ಕಾರ್ಯದ ಸಂಭ್ರಮಾಚರಣೆ ನಡೆಸಲು ರಶ್ಮಿಕ ಮಂದಣ್ಣ ಅವರ ಪೋಷಕರು ನಿರ್ಧರಿಸಿದ್ದಾರೆ. ಈ ಸಂದರ್ಭ ಜಿಲ್ಲೆಯ ಗಣ್ಯರು, ರಶ್ಮಿಕಾ ಮಂದಣ್ಣ ಅವರ ಆಪ್ತ ಬಳಗವನ್ನು ಆಮಂತ್ರಿಸಲಾಗುತ್ತದೆ ಎಂದು ತಿಳಿದು ಬಂದಿದೆ. ಈಗಾಗಲೇ ಹಲವಾರು ಸಿನಿಮಾಗಳಲ್ಲಿ ಅಭಿನಯಿಸಿರುವ ರಶ್ಮಿಕಾ ಮಂದಣ್ಣ, ಇಂಗ್ಲಿಷ್ ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ಪದವಿ ಪಡೆದಿದ್ದಾರೆ.

ಮಾ.11ರಿಂದ ಕೊಡಗಲ್ಲಿ ವೈದ್ಯಕೀಯ ಸೇವೆ ಸ್ಥಗಿತ

ಬೇಡಿಕೆ ಈಡೇರಿಸುವಂತೆ ವೈದ್ಯರು, ಅಧಿಕಾರಿಗಳು, ಸಿಬ್ಬಂದಿಗಳ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಾ. ಎಂ.ಆನಂದ್ ಅವರು ಮಾತನಾಡಿದರು.

ಮಡಿಕೇರಿ,ಫೆ.26– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಮೂಲಭೂತ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಸೂಕ್ತ ಸ್ಪಂದನೆ ನೀಡಿಲ್ಲ ಎಂದು ಆರೋಪಿಸಿ ಮಾ.11ರಿಂದ ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದಾರೆ.

ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘ ಹಾಗೂ ಇಲಾಖೆಯ ಎಲ್ಲಾ ವೃಂದ ಸಂಘಗಳು ಜಂಟಿಯಾಗಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಾ.ಆನಂದ್ ಎಂ. ಅವರು ಈ ಬಗ್ಗೆ ವಿವರಿಸಿದರು.

ಸರ್ಕಾರ ಬೇಡಿಕೆಗಳ ಈಡೇರಿಕೆಗೆ ಅಗತ್ಯ ಕ್ರಮ ಕೈಗೊಳ್ಳದಿದ್ದಲ್ಲಿ ಮಾ.11ರಿಂದ ಮಾ.15ರವರೆಗೆ ಜಿಲ್ಲಾ ಆಸ್ಪತ್ರೆ, ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಡಿಸ್ಪೆನ್ಸರಿಗಳಲ್ಲಿನ ಎಲ್ಲಾ ವೃಂದದ ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಪ್ಪು ಪಟ್ಟಿ ಧರಿಸಿ, ಹೊರ ರೋಗಿಗಳ ಚಿಕಿತ್ಸೆಯನ್ನು ಸ್ಥಗಿತಗೊಳಿಸಿ, ತುರ್ತು ಸೇವೆಗಳನ್ನು ಮಾತ್ರ ನಿರ್ವಹಿಸುವ ಮೂಲಕ ಮುಷ್ಕರದಲ್ಲಿ ಪಾಲ್ಗೊಳ್ಳಲಿರುವುದಾಗಿ ಸ್ಪಷ್ಟಪಡಿಸಿದರು.

ಪ್ರಮುಖವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ತಿದ್ದುಪಡಿ ಮಾಡಲು ಸರ್ಕಾರಿ ಆದೇಶವಿದ್ದರೂ ಸಹ ಇದನ್ನು ಉಲ್ಲಂಘಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಿಲ್ಲ. ಇದಕ್ಕೆ ಸಂಬಂಧಿಸಿದಂತೆ ಶೀಘ್ರ ತಿದ್ದುಪಡಿಯನ್ನು ತಂದು ಸಮಸ್ಯೆ ಬಗೆಹರಿಸಬೇಕು. ಇಲಾಖೆಯ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಕಾಲ ಕಾಲಕ್ಕೆ ಪ್ರಕಟಿಸಬೇಕೆಂದು ಒತ್ತಾಯಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ವೃಂದದ ಯಾವುದೇ ಅಧಿಕಾರಿ ಮತ್ತು ನೌಕರರಿಗೆ ಕಳೆದ 5 ವರ್ಷಗಳಿಂದ ಮುಂಬಡ್ತಿಗಳನ್ನು ನೀಡಿಲ್ಲ. ಕೂಡಲೆ ಮುಂಬಡ್ತಿಗಳನ್ನು ನೀಡಬೇಕು. ನಿಯಮಗಳಂತೆ ಸೇವಾನಿರತ ವೈದ್ಯರು, ಅಧಿಕಾರಿ ಮತ್ತು ನೌಕರರ ಉನ್ನತ ವ್ಯಾಸಂಗಕ್ಕೆ ಅವಕಾಶ ಒದಗಿಸಬೇಕು. ಈ ಹಿಂದಿನಿಂದಲೂ ಉನ್ನತ ವ್ಯಾಸಂಗಕ್ಕೆ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ವೇತನ, ಶುಲ್ಕ ಹಾಗೂ ಭತ್ಯೆಗಳೊಂದಿಗೆ ನಿಯೋಜನೆ ಮಾಡುವ ನಿಯಮವಿದೆ. ಆದರೆ, ಈ ಸಾಲಿನಿಂದ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ನಿಯೋಜನೆಗೊಂಡ ವೈದ್ಯರುಗಳಿಗೆ ವೇತನ ಶುಲ್ಕ ಹಾಗೂ ಭತ್ಯೆ ನೀಡಿಲ್ಲ ಮತ್ತು ಉನ್ನತ ವ್ಯಾಸಂಗದ ನಿಯೋಜನೆ ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಇದನ್ನು ಮತ್ತೆ ಆರಂಭಿಸಬೇಕೆಂದು ಒತ್ತಾಯಿಸಿದರು.

ಕೊಡಗು ಜಿಲ್ಲೆಯಲ್ಲಿ ಔಷಧಿ, ವೈದ್ಯರುಗಳು ಇಲ್ಲ

ಪ್ರಸ್ತುತ ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ 478 ವಿವಿಧ ಔಷಧಿ(ಡ್ರಗ್) ಇರಬೇಕಿದ್ದು, ಈ ಪೈಕಿ 150 ಔಷಧಿಗಳಷ್ಟೆ ಲಭ್ಯವಿದೆ. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 393 ಔಷಧಿಗಳು ಇರಬೇಕಾಗಿದ್ದು ಕೇವಲ 113 ಔಷಧಿಗಳು ಇವೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕನಿಷ್ಠ 239 ಔಷಧಿಗಳು ಲಭ್ಯವಿರಬೇಕಾಗಿದ್ದು ಕೇವಲ 108 ಔಷಧಿಗಳು ಮಾತ್ರವಿದೆ. ಸರ್ಕಾರದ ವೈದ್ಯಕೀಯ ಸರಬರಾಜು ನಿಗಮ ಅಗತ್ಯ ಔಷಧಿಗಳನ್ನು ಪೂರೈಸುವಲ್ಲಿ ವಿಫಲವಾಗಿರುವುದರಿಂದ ಸಾರ್ವಜನಿಕರಿಗೆ ಅಗತ್ಯ ಚಿಕಿತ್ಸೆ ನೀಡುವುದು ಕಷ್ಟಸಾಧ್ಯವಾಗಿದೆ ಎಂದು ಡಾ. ಆನಂದ್ ತಿಳಿಸಿದರು. ಜಿಲ್ಲೆಯಲ್ಲಿ ವೈದ್ಯರುಗಳ ಹುದ್ದೆಯೂ ಖಾಲಿ ಇದೆ. ತಾಲೂಕು ಆಸ್ಪತ್ರೆಗಳಲ್ಲಿ 30 ವೈದ್ಯರ ಹುದ್ದೆಗಳಲ್ಲಿ 16 ವೈದ್ಯರು ಕರ್ತವ್ಯದಲ್ಲಿದ್ದಾರೆ. ಜಿಲ್ಲೆಯ 7 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಇರುವ 31 ವೈದ್ಯರ ಹುದ್ದೆಗಳ ಪೈಕಿ ಕೇವಲ 5 ವೈದ್ಯರು ಮಾತ್ರ ಇದ್ದಾರೆ. ತಜ್ಞ 20 ವೈದ್ಯರುಗಳ ಪೈಕಿ ಕೇವಲ 13 ಮಂದಿ ಮಾತ್ರ ಇದ್ದಾರೆ ಎಂದು ಮಾಹಿತಿ ನೀಡಿದರು.

ಬಾರದ ವೇತನ: ಹೊರ ಗುತ್ತಿಗೆ ನೌಕರರ ಪ್ರತಿಭಟನೆ

ಮಡಿಕೇರಿ,ಫೆ.26– ಹಾರಂಗಿ ನೀರಾವರಿ ನಿಗಮದ ಪಾರ್ಕಿಂಗ್ ಹಾಗೂ ಮುಖ್ಯ ದ್ವಾರದ ಗೇಟ್ ಹಾಗೂ ಟಿಕೆಟ್ ಕೌಂಟರ್‌ನಲ್ಲಿ ಹೊರಗುತ್ತಿಗೆ ನೌಕರರಾಗಿ ದುಡಿಯುತ್ತಿರುವ 29 ಮಂದಿ ನೌಕರರಿಗೆ ಕಳೆದ 3 ತಿಂಗಳಿನಿಂದ ವೇತನ ಪಾವತಿಸದ ಪ್ರಥಮ ದರ್ಜೆ ಗುತ್ತಿಗೆದಾರರ ವಿರುದ್ಧ ಹೊರ ಗುತ್ತಿಗೆ ನೌಕರರು ಹಾರಂಗಿ ನೀರಾವರಿ ನಿಗಮದ ಕಚೇರಿ ಎದುರು ಮೌನ ಪ್ರತಿಭಟನೆ ನಡೆಸಿದರು.

ಕಳೆದ ಹಲವಾರು ವರ್ಷಗಳಿಂದ ಹಾರಂಗಿ ನೀರಾವರಿ ನಿಗಮದಲ್ಲಿ ಕೆಲಸ ನಿರ್ವಹಿಸಿಕೊಂಡು ಬರುತ್ತಿರುವ ನಮಗೆ ಕಳೆದ 3 ತಿಂಗಳುಗಳಿಂದ ವೇತನ ಪಾವತಿಸದ ಕಾರಣ ಜೀವನ ಸಾಗಿಸುವುದೇ ದುಸ್ಥರವಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ತಕ್ಷಣವೇ ವೇತನ ಪಾವತಿಸದಿದ್ದಲ್ಲಿ ಪ್ರತಿಭಟನೆ ತೀವ್ರಗೊಳಿಸುವುದಾಗಿ ಎಚ್ಚರಿಸಿದರು. ಇದೇ ಸಂದರ್ಭ ಮಾತನಾಡಿದ ಕೂಡುಮಂಗಳೂರು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಭಾಸ್ಕರ್ ನಾಯಕ್, ಕಳೆದ ಹಲವಾರು ವರ್ಷಗಳಿಂದ ಹಾರಂಗಿ ನೀರಾವರಿ ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಕಳೆದ 3 ತಿಂಗಳಿನಿಂದ ವೇತನ ಪಾವತಿಯಾಗದೆ ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಆದಷ್ಟು ಶೀಘ್ರವಾಗಿ ವೇತನ ಪಾವತಿಸುವಂತೆ ಒತ್ತಾಯಿಸಿದರು.



ಹೊರ ಗುತ್ತಿಗೆ ನೌಕರ ಅನಂತು ಮಾತನಾಡಿ, ಕಳೆದ 3 ತಿಂಗಳಿನಿಂದ ವೇತನವನ್ನು ಪಾವತಿಸದ ಕಾರಣ ಜೀವನ ಸಾಗಿಸಲು ಕಷ್ಟವಾಗಿದೆ. ವೇತನ ಪಾವತಿಸುವಂತೆ ಮನವಿ ಮಾಡಿಕೊಂಡರೂ ಸ್ಪಂದಿಸದ ಕಾರಣ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಪಾಲು ಕುಟ್ಟಪ್ಪ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಚೇರಂಬಾಣೆ ಬೇಂಗ್ ನಾಡ್ ನಿವಾಸಿ ಪಟ್ಟಮಾಡ ಕುಟುಂಬದ ಪಟ್ಟೆದಾರ ಪಾಲು ಕುಟ್ಟಪ್ಪ (99) ಗುರುವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶುಕ್ರವಾರ ಚೇರಂಬಾಣೆ ಬೇಂಗ್ ನಾಡ್ ಗ್ರಾಮದಲ್ಲಿ ಜರುಗಲಿದೆ. ಮೃತರು ಪತ್ನಿ, ಎರಡು ಹೆಣ್ಣು ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ.

ರಾಜ್ಯದಲ್ಲಿ ನ್ಯೂ ಕ್ಯಾಸಲ್ ವಿವಿ ಶಾಖೆ ಸ್ಥಾಪನೆಗೆ ಆಸಕ್ತಿ

ಯುಕೆಯಲ್ಲಿ ಸಚಿವ ಸಿಆರ್‌ಎಸ್ ಮಹತ್ವದ ಚರ್ಚೆ



ನ್ಯೂ ಕ್ಯಾಸಲ್ (ಯುಕೆ), ಫೆ.26– ನ್ಯೂ ಕ್ಯಾಸಲ್ ವಿಶ್ವವಿದ್ಯಾಲಯದ ಶಾಖೆಯನ್ನು ಕರ್ನಾಟಕದಲ್ಲಿ ಆರಂಭಿಸಲು ಆಸಕ್ತಿ ಹೊಂದಿರುವ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು, ಈ ಸಂಬಂಧ ಯುಕೆಯಲ್ಲಿ ಮಹತ್ವದ ಚರ್ಚೆ ನಡೆಸಿದರು.

ಯುಕೆಯ ಪ್ರಖ್ಯಾತ ನ್ಯೂ ಕ್ಯಾಸಲ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿರುವ ಸಚಿವರು ಗುರುವಾರ ಕೃಷಿ ಮತ್ತು ಜಲ ಸಂರಕ್ಷಣೆ ಕುರಿತಾದ ಉನ್ನತ ಮಟ್ಟದ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಭಾರತದ ಪ್ರತಿಭಾವಂತ ವಿದ್ಯಾರ್ಥಿಗಳು ಇಂತಹ ಪ್ರತಿಷ್ಠಿತ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿ, ಅಲ್ಲಿಯೇ ಉದ್ಯೋಗ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಭಾರತದಲ್ಲಿ ಉತ್ತಮ ಪ್ರತಿಭೆಗಳ ಕೊರತೆ ಉಂಟಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ಈ ಹಿನ್ನೆಲೆಯಲ್ಲಿ ನ್ಯೂ ಕ್ಯಾಸಲ್ ವಿಶ್ವವಿದ್ಯಾಲಯದ ಶಾಖೆಯನ್ನು ಭಾರತದಲ್ಲಿಯೇ ತೆರೆಯುವ ಪ್ರಸ್ತಾಪಕ್ಕೆ ಅತ್ಯಂತ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವ ಎನ್.ಚಲುವರಾಯಸ್ವಾಮಿ ಅವರು, ಒಂದು ವೇಳೆ ಅಂತಹ ಅವಕಾಶವಿದ್ದಲ್ಲಿ ಈ ಜಾಗತಿಕ ಮಟ್ಟದ ವಿಶ್ವವಿದ್ಯಾಲಯದ ಶಾಖೆಯನ್ನು ಕರ್ನಾಟಕದಲ್ಲಿಯೇ ಆರಂಭಿಸಬೇಕು ಎನ್ನುವ ಬಲವಾದ ಇಂಗಿತ ವ್ಯಕ್ತಪಡಿಸಿದರು. ಇದು ರಾಜ್ಯದ ಕೃಷಿ ಸಂಶೋಧನೆ ಮತ್ತು ಉನ್ನತ ಶಿಕ್ಷಣಕ್ಕೆ ದೊಡ್ಡ ಬಲ ನೀಡಲಿದೆ ಎಂದು ಆಶಿಸಿದರು.

ಇದೇ ವೇಳೆ ವಿಶ್ವವಿದ್ಯಾಲಯದ ತಜ್ಞರು ನೀರು ಸಂರಕ್ಷಣೆ ಮತ್ತು ಕೃಷಿ ಕ್ಷೇತ್ರದಲ್ಲಿ ನೀರಿನ ಸಮರ್ಥ ಬಳಕೆ ಕುರಿತು ಸಚಿವರಿಗೆ ವಿಶೇಷ ಪ್ರೆಸೆಂಟೇಶನ್ ನೀಡಿದರು. ಜಾಗತಿಕ ಮಟ್ಟದಲ್ಲಿ ನೀರಿನ ಲಭ್ಯತೆ ಕುಗ್ಗುತ್ತಿರುವ ಈ ಸಂದರ್ಭದಲ್ಲಿ ಲಭ್ಯವಿರುವ ನೀರನ್ನು ಆಧುನಿಕ ತಂತ್ರ ಜ್ಞಾನದ ಮೂಲಕ ಹೇಗೆ ಕೃಷಿಗೆ ಬಳಸಿ ಕೊಳ್ಳಬಹುದು ಎಂಬ ಬಗ್ಗೆ ಗಹನವಾದ ಚರ್ಚೆ ನಡೆಯಿತು.

ಮಹತ್ವದ ಸಭೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತ ಉಪೇಂದ್ರ ಪ್ರತಾಪ್ ಸಿಂಗ್, ನಿರ್ದೇಶಕ ಮೊಹಮ್ಮದ್ ಪರವೇಜ್ ಬಂಥನಾಳ್, ಕೃಷಿ ಸಚಿವರ ಆಪ್ತ ಕಾರ್ಯದರ್ಶಿ ಪ್ರಭಾಕರ್ ಮತ್ತು ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಅನುಮತಿ ಇಲ್ಲದೇ ಬಡಾವಣೆ ನಿರ್ಮಿಸಿದರೆ ಕ್ರಮ

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಎಚ್ಚರಿಕೆ



ಸುದ್ದಿಗೋಷ್ಠಿಯಲ್ಲಿ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಮಾತನಾಡಿದರು.

ಮಂಡ್ಯ, ಫೆ.26– ಮುಡಾ ಅನುಮತಿ ಇಲ್ಲದೆ ಅಕ್ರಮವಾಗಿ ಬಡಾವಣೆ ನಿರ್ಮಿಸಿ, ನಿವೇಶನಗಳನ್ನು ಗ್ರಾಹಕರಿಗೆ ಮಾರಾಟ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಪಿ.ಪ್ರಕಾಶ್ ಎಚ್ಚರಿಕೆ ನೀಡಿದರು.

ನಗರದ ಮುಡಾ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ನಗರದ 8 ಕಡೆ ಮುಡಾ ಅನುಮತಿ ಪಡೆಯದೆ ಅಕ್ರಮವಾಗಿ ಬಡಾವಣೆಗಳನ್ನು ನಿರ್ಮಿಸಿದ್ದು, ಈ ಪೈಕಿ ಕೆಲ ಅಮಾಯಕ ಗ್ರಾಹಕರು ಮಾಹಿತಿ ಇಲ್ಲದೆ ನಿವೇಶನಗಳನ್ನು ಖರೀದಿಸಿದ್ದಾರೆ. ಇದರಿಂದ ಮುಂದೆ ಮನೆ ನಿರ್ಮಾಣಕ್ಕೆ ಖಾತೆ ಮಾಡಿಸಿಕೊಳ್ಳಲು, ಮುಡಾ ಅನುಮತಿ ಹಾಗೂ ಸಾಲ ಪಡೆಯಲು ತೊಂದರೆಯಾಗಲಿದೆ ಎಂದು ಎಚ್ಚರಿಸಿದರು.

ಮಂಡ್ಯ ನಗರದ ಸುತ್ತಮುತ್ತಲಿನ ಗ್ರಾಮಗಳಾದ ಪಣಕನಹಳ್ಳಿ ಸರ್ವೆ ನಂ.25/6, ಹೊಳಲು ಸರ್ವೆ ನಂ.48/3, ಕಿರಗಂದೂರು ಸರ್ವೆ ನಂ.116/1ಬಿ2, ಮಂಡ್ಯ ವ್ಯಾಪ್ತಿಯ ಸರ್ವೆ ನಂ.255, ಗೋಪಾಲಪುರ ಸರ್ವೆ ನಂ.39/4ಬಿ, ಗುತ್ತಲು ಬಡಾವಣೆ ಸರ್ವೆ ನಂ.700, 701, ಕ್ಯಾತುಂಗೆರೆ ಸರ್ವೆ 38/4, 38/9, 45 ಈ ಎಲ್ಲಾ ಬಡಾವಣೆಗಳು ಮುಡಾ ಅನುಮತಿ ಇಲ್ಲದೆ ಅನಧಿಕೃತವಾಗಿ ನಿರ್ಮಿಸಲಾಗಿದೆ ಎಂದರು.

ಈ ರೀತಿ ಅಕ್ರಮವಾಗಿ ಬಡಾವಣೆ ನಿರ್ಮಿಸಿರುವುದರಿಂದ ಪ್ರಾಧಿಕಾರ ಹಾಗೂ ಗ್ರಾಹಕರಿಗೆ ನಷ್ಟವಾಗಲಿದೆ. ಹಣದ ಆಸೆಗಾಗಿ ಅನುಮತಿ ಇಲ್ಲದೆ ನಿವೇಶನ ನಿರ್ಮಿಸಿ ಗ್ರಾಹಕರಿಗೆ ಮಾರಾಟ ಮಾಡುವುದರಿಂದ ಭವಿಷ್ಯದಲ್ಲಿ ಮನೆಗಳನ್ನು ತೆರವುಗೊಳಿಸಿದರೂ ಅಚ್ಚರಿ ಇಲ್ಲ. ಇದರಿಂದ ನಿವೇಶನ ಖರೀದಿಸುವ ಮುನ್ನ ಗ್ರಾಹಕರು ಎಲ್ಲಾ ರೀತಿಯ ಮಾಹಿತಿ ಪಡೆದು ನಂತರ ಖರೀದಿಸಬೇಕು. ಕಡಿಮೆ ಹಣಕ್ಕೆ ಸಿಗುತ್ತದೆ ಎಂದು ಮೋಸ ಹೋಗಬಾರದು ಎಂದು ಎಚ್ಚರಿಸಿದರು.

ಇಂದು ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ಅವರ ನೇತೃತ್ವದಲ್ಲಿ ಮುಡಾ ಸಾಮಾನ್ಯ ಸಭೆ ನಡೆದಿದ್ದು, ಸುಂದರ ನಗರ ನಿರ್ಮಿಸಬೇಕು ಎಂಬ ಆಕಾಂಕ್ಷೆ ಹೊಂದಿದ್ದಾರೆ. ಉತ್ತಮ ನಗರ ಕಟ್ಟುವಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ತಕ್ಕ ಕೆಲಸ ನಿರ್ವಹಿಸಬೇಕು ಎಂಬ ನಿಟ್ಟಿನಲ್ಲಿ ಸಲಹೆ ನೀಡಿದ್ದಾರೆ. ಶಾಸಕರ ಸಲಹೆಯಂತೆ ನಾವು ಕಾರ್ಯ ನಿರ್ವಹಿಸುತ್ತೇವೆ ಎಂದು ತಿಳಿಸಿದರು.

ಮುಡಾ ಆಯುಕ್ತ ಕೃಷ್ಣಕುಮಾರ್ ಮಾತನಾಡಿ, ಎಷ್ಟೇ ಪ್ರಭಾವಿಗಳಾದರೂ ಅಕ್ರಮ ನಿವೇಶನ, ಬಡಾವಣೆ ನಿರ್ಮಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದು ಶಾಸಕ ರವಿಕುಮಾರ್‌ಗೌಡ ಅವರು ಸಹ ನಿರ್ದೇಶನ ನೀಡಿದ್ದಾರೆ. ಅಮಾಯಕ ಗ್ರಾಹಕರನ್ನು ವಂಚಿಸುವ ಅಕ್ರಮ ಬಡಾವಣೆ ನಿರ್ಮಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ನಗರಾಭಿವೃದ್ಧಿ ಇಂದಿನಿಂದಲೇ ಕಾರ್ಯ ಪ್ರವೃತ್ತವಾಗಲಿದೆ ಎಂದರು.

ಈ ನಿಟ್ಟಿನಲ್ಲಿ ಉಪನೋಂದಣಾಧಿಕಾರಿ ಕಚೇರಿಗೆ ಮುಡಾ ಅನುಮತಿ ಇಲ್ಲದ ನಿವೇಶನ, ಬಡಾವಣೆಗಳಿಗೆ ಖಾತೆ ಮಾಡಿಕೊಡದಂತೆ ಪತ್ರ ಬರೆಯುತ್ತೇವೆ. ಜೊತೆಗೆ ಇದಕ್ಕೆ ಸಂಬಂಧಪಟ್ಟಂತೆ ಫಲಕಗಳನ್ನು ಉಪನೋಂದಣಾಧಿಕಾರಿ ಕಚೇರಿ ಬಳಿ ಅಳವಡಿಸಲಾಗುವುದು. ಆಗ ಕಟ್ಟಡ ನಿರ್ಮಿಸಲು ಪರವಾನಗಿ ಸಿಗದಿದ್ದಾಗ ಗ್ರಾಹಕರು ಹಾಗೂ ಅಕ್ರಮ ಬಡಾವಣೆ ನಿರ್ಮಿಸುವವರಿಗೆ ಮುಡಾದಿಂದ ಅನುಮತಿ ಪಡೆಯಬೇಕೆಂಬುದು ತಿಳಿಯಲಿದೆ. ಸಾರ್ವಜನಿಕರು ಈ ನಿಟ್ಟಿನಲ್ಲಿ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ಈ ಹಿಂದೆ ಮುಡಾದಲ್ಲಿ ಆಡಳಿತ ನಿರ್ವಹಿಸಿದವರು ಈ ಬಗ್ಗೆ ಸಮರ್ಪಕ ಕ್ರಮ ಕೈಗೊಳ್ಳದಿರಬಹುದು. ಆದರೆ ಮುಂದೆ ಈ ರೀತಿ ಆಗಲು ಬಿಡುವುದಿಲ್ಲ. ಈ ನಿಟ್ಟಿನಲ್ಲಿ ಸಾರ್ವಜನಿಕರು ಸಹ ಸಹಕರಿಸಬೇಕು ಎಂದು ಮನವಿ ಮಾಡಿದರು.

50:50 ಅನುಪಾತದಲ್ಲಿ ಬಡಾವಣೆಗಳನ್ನು ನಿರ್ಮಿಸಲು ನಗರಾಭಿವೃದ್ಧಿ ಪ್ರಾಧಿಕಾರ ಸಿದ್ಧವಿದೆ. ರೈತರು ಮುಂದೆ ಬಂದು ಜಮೀನು ನೀಡಬೇಕು. ಮುಂದೆ ಬರುವ ರೈತರಿಗೆ ಮುಡಾ ವತಿಯಿಂದ ಸಾಲ ಪಡೆದು ಬಡಾವಣೆ ನಿರ್ಮಿಸಲಾಗುವುದು. ಆದರೆ ಮಂಡ್ಯ ನಗರದ ಅಕ್ಕಪಕ್ಕದಲ್ಲಿ ಹಸಿರೀಕರಣ ಹೆಚ್ಚಾಗಿರುವುದರಿಂದ ರೈತರು ಜಮೀನು ಕೊಡಲು ಮುಂದೆ ಬರುತ್ತಿಲ್ಲ. ಕೊಟ್ಟರೂ ದುಪ್ಪಟ್ಟು ಬೆಲೆ ಕೇಳುತ್ತಿರುವುದರಿಂದ ಬಡಾವಣೆ ನಿರ್ಮಾಣಕ್ಕೆ ಕೊಂಚ ತೊಡಕಾಗಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಡಾ ಅಧಿಕಾರಿ ಪ್ರವೀಣ್, ನಿರ್ದೇಶಕರಾದ ಮಹೇಶ್, ಕಾರ್ತಿಕ್, ಇದ್ರೀಸ್‌ಖಾನ್, ಕಮಲಾ ರಾಜು ಇದ್ದರು.

ಶುದ್ಧ ಕುಡಿಯುವ ನೀರಿನ ಉಪಕರಣ ವಿತರಣೆ



ಕೆ.ಆರ್.ಪೇಟೆ ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ವತಿಯಿಂದ 15ನೇ ಹಣಕಾಸು ಯೋಜನೆಯಡಿ ಸರ್ಕಾರಿ ಶಾಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಿಗೆ ಗ್ರಾಪಂ ಅಧ್ಯಕ್ಷ ಎ.ಸಿ.ದಿವಿ ಕುಮಾರ್ ಶುದ್ಧ ಕುಡಿಯುವ ನೀರಿನ ಉಪಕರಣವನ್ನು ವಿತರಿಸಿದರು.

ಶಿವಲಿಂಗೇಗೌಡ ನಿಧನ



ಕೆ.ಆರ್.ಪೇಟೆ, ಫೆ.26– ತಾಲೂಕು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಸವೇಗೌಡರ ತಂದೆ ಶಿವಲಿಂಗೇಗೌಡ(90) ಬುಧವಾರ ನಿಧನರಾದರು. ಮೃತರು ಪತ್ನಿ ಜಯಮ್ಮ, ಪುತ್ರ ಕೆ.ಎಸ್.ಬಸವೇಗೌಡ, ಸೊಸೆ ಮಾಲತಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಹಳೇ ಮೈಸೂರು ರಸ್ತೆಯಲ್ಲಿರುವ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಜಾತ



ಕೆ.ಆರ್.ಪೇಟೆ, ಫೆ.26– ಪಟ್ಟಣದ ಹೊಸಹೊಳಲು ಬಡಾವಣೆ 18ನೇ ವಾರ್ಡ್ ಮಾಜಿ ಪುರಸಭಾ ಸದಸ್ಯೆ ಸುಜಾತ(55) ಗುರುವಾರ ನಿಧನರಾದರು. ಮೃತರು ಪತಿ, ಮಾಜಿ ಪುರಸಭಾ ಸದಸ್ಯ ಗೋಪಾಲ್, ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯುತ್ ತಂತಿ ಸ್ಪರ್ಶಿಸಿ ಕೂಲಿ ಕಾರ್ಮಿಕ ಸಾವು

ಮತ್ತಿಬ್ಬರು ಅಸ್ವಸ್ಥ, ಆಸ್ಪತ್ರೆಗೆ ದಾಖಲು



ಚಾಮರಾಜನಗರ: ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ವೇಳೆ ವಿದ್ಯುತ್ ತಂತಿ ಸ್ಪರ್ಶಿಸಿ ಓರ್ವ ಕೂಲಿ ಕಾರ್ಮಿಕ ಸಾವನ್ನಪ್ಪಿ, ಇಬ್ಬರು ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಗರದ ರಾಮಸಮುದ್ರದಲ್ಲಿ ಗುರುವಾರ ಸಂಭವಿಸಿದೆ.

ನಗರದ ಬಾಬು ಜಗಜೀವನ್ ರಾಮ್ ಬಡಾವಣೆಯ ನಿವಾಸಿ ನಾಗಣ್ಣ(40) ಮೃತಪಟ್ಟ ಕಾರ್ಮಿಕ. ನಾಗೇಂದ್ರ ಹಾಗೂ ವಿಷಕಂಠ ಎಂಬುವವರು ಗಂಭೀರವಾಗಿ ಗಾಯಗೊಂಡಿದ್ದು ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆಯ ವಿವರ: ರಾಮಸಮುದ್ರದ ಕುಲುಮೆ ರಸ್ತೆಯಲ್ಲಿ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಕಾಲಾವಧಿ ಹಾಕಿಕೊಂಡು ಮೊದಲ ಮಹಡಿಯಲ್ಲಿ ಗಾರೆ ಕೆಲಸ ಮಾಡುತ್ತಿದ್ದ ವೇಳೆ ಪಕ್ಕದಲ್ಲಿಯೇ ಹಾದು ಹೋಗಿದ್ದ ವಿದ್ಯುತ್ ತಂತಿ ಕಾರ್ಮಿಕರನ್ನು ಸ್ಪರ್ಶಿಸಿದೆ ಎನ್ನಲಾಗಿದೆ. ಈ ವೇಳೆ ನಾಗಣ್ಣ ಎಂಬುವವರು ಸ್ಥಳದಲ್ಲಿಯೇ ಮೃತಪಟ್ಟರೆ, ಮತ್ತಿಬ್ಬರು ಗಾಯಗೊಂಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಪಟ್ಟಣ ಠಾಣೆಯ ಪೊಲೀಸರು ಭೇಟಿ ನೀಡಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಸಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದರು.

ಉಳಿದಂತೆ ಗಂಭೀರವಾಗಿ ಗಾಯಗೊಂಡಿರುವ ನಾಗೇಂದ್ರ ಹಾಗೂ ವಿಷಕಂಠ ಅವರನ್ನು ಸಿಮ್ಸ್‌ಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಸೆಸ್ಕ್ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಡಂಚಿನ ಕಡಬೂರು ಗ್ರಾಮದಲ್ಲಿ ಶಿವ–ಗಣೇಶ ದೇವಾಲಯ ಉದ್ಘಾಟನೆ



ಶಿವ ಹಾಗೂ ಗಣೇಶ ದೇವಾಲಯಗಳ ಕಟ್ಟಡವನ್ನು ಕುಮಾರಸ್ವಾಮಿ ಉದ್ಘಾಟಿಸಿದರು.

ಗುಂಡ್ಲುಪೇಟೆ, ಫೆ.26– ದೇವಾಲಯಗಳು ಧಾರ್ಮಿಕ ಶ್ರದ್ಧಾಕೇಂದ್ರಗಳಾಗಿದ್ದು ಯಾವುದೇ ನೆರವಿಲ್ಲದೆ ಗ್ರಾಮಸ್ಥರು ನಿರ್ಮಿಸಿರುವುದು ಇತರರಿಗೆ ಮಾದರಿಯಾಗಿದೆ ಎಂದು ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು.

ಬಂಡೀಪುರದ ಕಾಡಂಚಿನ ಕಡಬೂರು ಗ್ರಾಮದಲ್ಲಿ ಆಯೋಜಿಸಿದ್ದ ಶಿವ ಹಾಗೂ ಗಣೇಶ ದೇವಾಲಯಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾರ್ಯಕರ್ತರ ಪ್ರೀತಿಯ ಒತ್ತಾಯಕ್ಕೆ ಮಣಿದು ತೀವ್ರ ಒತ್ತಡದ ನಡುವೆಯೂ ನಾನು ಗ್ರಾಮದ ಕಾರ್ಯಕ್ರಮಕ್ಕೆ ಆಗಮಿಸಿದ್ದೇನೆ. ಹಾಗೆಯೇ ರಾಜ್ಯದ ಜನತೆ ಹಾಗೂ ಕಾರ್ಯಕರ್ತರ ಕಷ್ಟ ಸುಖಗಳಿಗೆ ನಾನು ಸದಾ ಜತೆಯಾಗಿರುತ್ತೇನೆ ಎಂದರು.

ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ತಾವು ಕ್ಷೇತ್ರದ ಅಭ್ಯರ್ಥಿಯನ್ನು ಸರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ತಪ್ಪು ಮರುಕಳಿಸದಂತೆ ನೋಡಿಕೊಳ್ಳಲಾಗುವುದು ಎಂದರು.

ಗ್ರಾಮದ ಹೆಲಿಪ್ಯಾಡ್‌ನಲ್ಲಿ ಇಳಿದ ಕುಮಾರಸ್ವಾಮಿ ನೇರವಾಗಿ ದೇವಾಲಯಕ್ಕೆ ತೆರಳಿ ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ನಂತರ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಕಡಬೂರು ಮಂಜುನಾಥ್ ಮನೆಗೆ ತೆರಳಿ ಉಪಹಾರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಶಾಸಕ ಎಚ್.ಎಂ.ಗಣೇಶ ಪ್ರಸಾದ್, ಮಾಜಿ ಶಾಸಕರಾದ ಕೆ.ಅನ್ನದಾನಿ, ಬಾಲರಾಜು, ಜೆಡಿಎಸ್ ಮುಖಂಡರಾದ ಪುಟ್ಟಸ್ವಾಮಿ, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಎಸ್.ಪಿ.ಸುರೇಶ್, ದೇವರಹಳ್ಳಿ ಮಹೇಶ್, ಬಾಚಹಳ್ಳಿ ಮಣಿ, ಹಂಗಳ ಪ್ರಣಯ್, ಹೆಚ್.ವಿ.ಮಂಜುನಾಥ್, ನಾಗೇಂದ್ರ ಸೇರಿದಂತೆ ಹಲವರು ಇದ್ದರು.

ಬಸ್ಸಿನಲ್ಲಿ ಗಾಂಜಾ ತುಂಬಿದ್ದ ಸೂಟ್‌ಕೇಸ್ ಬಿಟ್ಟು ಹೋದ ಅಪರಿಚಿತ ಪ್ರಯಾಣಿಕ

ಗುಂಡ್ಲುಪೇಟೆ, ಫೆ.26– ಅಪರಿಚಿತ ಪ್ರಯಾಣಿಕರೊಬ್ಬರು ಬಸ್ಸಿನಲ್ಲಿ ಬಿಟ್ಟು ಹೋಗಿದ್ದ 12.6 ಕೆಜಿ ಗಾಂಜಾ ಇದ್ದ ಸೂಟ್ ಕೇಸನ್ನು ಸಾರಿಗೆ ಸಿಬ್ಬಂದಿ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.

ಶಿವಮೊಗ್ಗದಿಂದ ಊಟಿಗೆ ಹೋಗುವ ಸಾರಿಗೆ ಬಸ್ ಅನ್ನು ಪಟ್ಟಣದ ಸಾರಿಗೆ ನಿಲ್ದಾಣದಲ್ಲಿ ಟ್ರಾಲಿಯಿರುವ ಕೆಂಪು ಸೂಟ್ ಕೇಸ್ ಜತೆ ಬಸ್ ಹತ್ತಿದ ಪ್ರಯಾಣಿಕ ಬಸ್‌ನಲ್ಲಿ ಸೂಟ್ ಕೇಸ್ ಬಿಟ್ಟು ಹೋಗಿದ್ದರು. ನಂತರ ಬಸ್ ಹೊರಟರೂ ಯಾರು ಬರದ ಹಿನ್ನೆಲೆಯಲ್ಲಿ ಪಟ್ಟಣದ ಪೊಲೀಸ್ ಠಾಣೆಗೆ ಆಗಮಿಸಿದ ಸಿಬ್ಬಂದಿ ಸೂಟ್ ಕೇಸ್ ಅನ್ನು ಪೊಲೀಸರ ವಶಕ್ಕೆ ನೀಡಿದರು. ಪಂಚರ ಸಮ್ಮುಖದಲ್ಲಿ ಅದನ್ನು ತೆರೆದಾಗ ಒಳಗೆ ಪ್ಲಾಸ್ಟಿಕ್ ಕವರ್‌ಗಳಲ್ಲಿ ಸುತ್ತಿದ ಒಣ ಗಾಂಜಾಪುಡಿ ಪತ್ತೆಯಾಗಿದೆ.

ಈ ಹಿನ್ನೆಲೆಯಲ್ಲಿ ನಿರ್ವಾಹಕ ಉಮೇಶ್ ಅವರಿಂದ ದೂರು ಸ್ವೀಕರಿಸಿದ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಡಿಮೆ ಶುಲ್ಕ ಪಡೆದು ಉತ್ತಮ ಚಿಕಿತ್ಸೆ ನೀಡುತ್ತಿದ್ದ ಹಿರಿಯ ವೈದ್ಯ ಡಾ.ವಸಂತಕುಮಾರ್ ನಿಧನ



ಕೊಳ್ಳೇಗಾಲ, ಫೆ.26– ಕೊಳ್ಳೇಗಾಲ ಪಟ್ಟಣ ಮತ್ತು ಸುತ್ತಮುತ್ತಲಿನ ರೋಗಿಗಳಿಂದ ಕಡಿಮೆ ಶುಲ್ಕ ಪಡೆದು ಉತ್ತಮ ರೀತಿಯಲ್ಲಿ ಚಿಕಿತ್ಸೆ ನೀಡಿ ಸ್ಪಂದಿಸುತ್ತಿದ್ದ ಹಿರಿಯ ವೈದ್ಯರಾದ ಡಾ. ವಸಂತಕುಮಾರ್ (85) ಅವರು ಇಂದಿಲ್ಲಿ ನಿಧನರಾದರು.

ಕಳೆದ 2 ತಿಂಗಳಿಂದ ಅನಾರೋಗ್ಯಕ್ಕಿಡಾಗಿದ್ದ ಅವರು ಗುರುವಾರ ಸಂಜೆ ನಿಧನರಾದರು. ವಸಂತಕುಮಾರ್ ಅವರು ನಿವೃತ್ತಿ ಬಳಿಕ ಖಾಸಗಿ ಕ್ಲಿನಿಕ್ ಇಟ್ಟುಕೊಂಡು 2ರೂ, 5ರೂ ಪಡೆದು ತಮ್ಮ ಬಳಿ ಬರುವ ರೋಗಿಗಳಿಗೆ ಚಿಕಿತ್ಸೆ ನೀಡಿ ಸ್ಪಂದಿಸುತ್ತಿದ್ದರು. ಕಳೆದ ಮೂರು ವರುಷಗಳಿಂದ ತಮ್ಮ ಮನೆಯಲ್ಲಿದ್ದುಕೊಂಡು ತಮ್ಮ ಬಳಿ ಬರುವ ರೋಗಿಗಳಿಂದ ಕಡಿಮೆ 50 ರೂ ಶುಲ್ಕ ಪಡೆದು ಚಿಕಿತ್ಸೆ ನೀಡುತ್ತಿದ್ದರು.

ಕಳೆದ 2ತಿಂಗಳಿಂದ ಅನಾರೋಗ್ಯಕ್ಕಿಡಾದ ಹಿನ್ನೆಲೆ ರೋಗಿಗಳನ್ನು ವೀಕ್ಷಿಸುವದನ್ನ ಸ್ಥಗಿತಗೊಳಿಸಿದ್ದರು. ಮೃತರ ಅಂತ್ಯಕ್ರಿಯೆಯೂ ಶಂಕನಪುರ ಜಮೀನಿನಲ್ಲಿ ವೀರಶೈವ ವಿಧಿ ವಿಧಾನಗಳೊಂದಿಗೆ ಜರುಗಲಿದೆ.

ವಸಂತಕುಮಾರ್ ಅವರು ಚರ್ಮರೋಗ ತಜ್ಞರಾಗಿ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಯಲ್ಲಿ ಹಲವಾರು ವರುಷಗಳ ವೈದ್ಯರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ನಿವೃತ್ತಿ ಬಳಿಕವೂ ರೋಗಿಗಳಿಗೆ ಕಡಿಮೆ ಶುಲ್ಕದಲ್ಲಿ ಸೇವೆ ನೀಡುವ ಮೂಲಕ ವೈದ್ಯಕೀಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ಖ್ಯಾತರಾಗಿದ್ದರು.

ಮೃತರು ಇಬ್ಬರು ಗಂಡು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಜನನಿ ಆಸ್ಪತ್ರೆ ಮಾಲೀಕರಾದ ಡಾ. ಪ್ರವೀಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ವೀರಶೈವ ಮಹಾಸಭೆಯ ಮಹದೇವಪ್ರಸಾದ್, ಬಿಂಧು ಲೋಕೇಶ್ ಸೇರಿದಂತೆ ಅನೇಕ ಗಣ್ಯರು ಮೃತರಿಗೆ ಅಂತಿಮ ನಮನ ಸಲ್ಲಿಸಿದರು.

ಆಸ್ಪತ್ರೆ, ಅಂಗನವಾಡಿ, ಹಾಸ್ಟಲ್, ಶಾಲೆಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಭೇಟಿ

ಚಾಮರಾಜನಗರ, ಫೆ26– ಪಶು ಪಾಲನೆ ಮತ್ತು ಮೀನುಗಾರಿಕೆ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಆರ್. ವಿನೋತ್ ಪ್ರಿಯಾ ಅವರು ಇಂದು ಜಿಲ್ಲೆಯ ಆಸ್ಪತ್ರೆ, ಶಾಲೆ, ಅಂಗನವಾಡಿ, ಹಾಸ್ಟಲ್, ನಿರ್ಮಾಣ ಹಂತದಲ್ಲಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಬೆಳಿಗ್ಗೆಯೇ ಜಿಲ್ಲೆಗೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್ ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ಕೊಳ್ಳೇಗಾಲ ಪಟ್ಟಣದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿದರು. ಅಲ್ಲಿನ ವಾಸ್ತವ್ಯದ ಕೊಠಡಿಗಳು, ಶೌಚಾಲಯ, ಸ್ನಾನದ ಗೃಹಗಳು, ಅಡುಗೆ ಕೋಣೆ, ಡೈನಿಂಗ್ ಹಾಲ್ ವೀಕ್ಷಿಸಿದರು. ಮೆನು ಚಾರ್ಟ್ ಪರಿಶೀಲಿಸಿದರು.


ಬಳಿಕ ಕೊಳ್ಳೇಗಾಲ ಪಟ್ಟಣದಲ್ಲಿ 7 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿ ಪರಿಶೀಲಿಸಿ ಬಣ್ಣದ ಕೆಲಸಕ್ಕೂ ಮೊದಲು ಕೈಗೊಳ್ಳಬೇಕಿರುವ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಏಪ್ರಿಲ್ ತಿಂಗಳೊಳಗೆ ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸುವಂತೆ ಸೂಚಿಸಿದರು. ಕೊಳ್ಳೇಗಾಲ ತಾಲೂಕು ಟಗರಪುರ ಗ್ರಾಮದಲ್ಲಿ ನಿರ್ಮಾಣ ಮಾಡಿರುವ ಗ್ರಂಥಾಲಯ ಕಟ್ಟಡವನ್ನು ವೀಕ್ಷಿಸಿದರು.

ಯಳಂದೂರು ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ 100 ಹಾಸಿಗೆಯುಳ್ಳ ಆಸ್ಪತ್ರೆ ಕಟ್ಟಡ ಕಾಮಗಾರಿ ಪರಿಶೀಲಿಸಿದರು.





ಮಹಾಭಾರತದ ಶಿಖಂಡಿಯೇ ಸ್ಫೂರ್ತಿ



ಮಹಾಭಾರತದಲ್ಲಿ ಬರುವ ಶಿಖಂಡಿಯ ಪಾತ್ರವನ್ನು ಸ್ಫೂರ್ತಿಯಾಗಿಟ್ಟುಕೊಂಡು ನಿರ್ದೇಶಕ ಗುರುಮೂರ್ತಿ ಅವರು 'ಶಿಖಂಡಿ' ಎಂಬ ಚಿತ್ರವನ್ನು ನಿರೂಪಿಸಿದ್ದಾರೆ. 'ಮಾರಕಾಸ್ತ್ರ' ನಂತರ ಗುರುಮೂರ್ತಿ ಅವರ ನಿರ್ದೇಶನದ 2ನೇ ಚಿತ್ರವಿದು. ಪೋಲಾ ಪ್ರವೀಣ್‌ಕುಮಾರ್ ನಿರ್ಮಾಣದ ಈ ಚಿತ್ರದ ಮೋಷನ್ ಪೋಸ್ಟರ್‌ನ್ನು ನಿರ್ಮಾಪಕ ಸಂಜಯ್ ಗೌಡ ಹಾಗೂ ನಿರ್ದೇಶಕ ಜಡೇಶ್ ಕೆ. ಹಂಪಿ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ನಿರ್ದೇಶಕರು, ಮಹಾಭಾರತದಲ್ಲಿ ಶಿಖಂಡಿ ಪುನರ್ಜನ್ಮ ಪಡೆದು ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಅದೇ ಎಳೆ ಇಟ್ಟುಕೊಂಡು ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ಕಥೆಯನ್ನು ಹೆಣೆದು 'ಶಿಖಂಡಿ' ಚಿತ್ರ ನಿರ್ದೇಶಿಸಿದ್ದೇನೆ. ಕಾನ್ಸೆಪ್ಟ್ ಕೇಳಿ ಇಷ್ಟಪಟ್ಟ ನಿರ್ಮಾಪಕರು ಚಿತ್ರ ನಿರ್ಮಾಣಕ್ಕೆ ಮುಂದಾದರು. ಈಗಾಗಲೇ ಚಿತ್ರದ ಚಿತ್ರೀಕರಣ ಮುಗಿದಿದ್ದು, ಮೋಷನ್ ಪೋಸ್ಟರ್ ಮೂಲಕ ಪ್ರಚಾರಕ್ಕೆ ಚಾಲನೆ ನೀಡಿದ್ದೇವೆ, ಮೇ ವೇಳೆಗೆ ಚಿತ್ರವನ್ನು ರಿಲೀಸ್ ಮಾಡುವುದಾಗಿ ಹೇಳಿದರು.

ನಾಯಕ ಯುವರಾಜ್‌ಗೌಡ ಮಾತನಾಡುತ್ತ ಈ ಚಿತ್ರದಲ್ಲಿ ನಾನು ಎಂಎನ್‌ಸಿ ಕಂಪನಿಯಲ್ಲಿ ಕೆಲಸ ಮಾಡುವ ಸೂರ್ಯನ ಪಾತ್ರ ನಿರ್ವಹಿಸಿದ್ದೇನೆ. ಆತನಿಗೂ ಮಹಾಭಾರತದ ಶಿಖಂಡಿಗೂ ಏನು ಸಂಬಂಧ ಎಂದು ಚಿತ್ರ ನೋಡಿದಾಗ ತಿಳಿಯುತ್ತೆ ಎಂದರು. ನಾಯಕಿ ಖ್ಯಾತಿ ಮಾತನಾಡಿ ನನ್ನದು ಡಾ.ಸಂಗೀತಾ ಎಂಬ ಪಾತ್ರ, ಆಸ್ಪತ್ರೆ ಕಟ್ಟಬೇಕೆಂಬ ಕನಸಿಟ್ಟುಕೊಂಡಿದ್ದ ಆಕೆ ಕಟ್ಟುವ ಹಾದಿಯಲ್ಲಿ ಏನೇನಾಗುತ್ತೆ ಎನ್ನುವುದೇ ನನ್ನ ಪಾತ್ರ ಎಂದರು.



'ಫಾದರ್' ಬಿಡುಗಡೆಗೂ ಮುನ್ನವೇ ಓಟಿಟಿ ಡಿಮ್ಯಾಂಡ್





ನಿರ್ದೇಶಕ ಆರ್.ಚಂದ್ರು 'ಕಬ್ಜ'ದಂಥ ಬಿಗ್ ಬಜೆಟ್ ಚಿತ್ರ ನಿರ್ಮಿಸುವ ಮೂಲಕ ದೇಶವೇ ತಿರುಗಿ ನೋಡುವಂತೆ ಮಾಡಿದವರು. ಇದೀಗ ಅವರ ನೇತೃತ್ವದ ಆರ್‌ಸಿ ಸ್ಟುಡಿಯೋಸ್‌ನ ಮೊದಲ ಕೊಡುಗೆಯಾಗಿ 'ಫಾದರ್' ಚಿತ್ರ ಮೂಡಿಬರುತ್ತಿದೆ. ತಂದೆ – ಮಗನ ನಡುವಿನ ಅವಿನಾಭಾವ ಸಂಬಂಧದ ಸುತ್ತ ನಡೆಯುವ ಕಥಾಹಂದರ ಹೊತ್ತು ಬರುತ್ತಿರುವ ಫಾದರ್ ಚಿತ್ರದಲ್ಲಿ ತಂದೆಯಾಗಿ ಹಿರಿಯ ನಟ ಪ್ರಕಾಶ್ ರೈ ಹಾಗೂ ಮಗನ ಪಾತ್ರದಲ್ಲಿ ಡಾರ್ಲಿಂಗ್ ಕೃಷ್ಣ ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ರಾಜ್‌ಮೋಹನ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಕಂಟೆಂಟ್ ಚಿತ್ರಗಳು ಕನ್ನಡ ಪ್ರೇಕ್ಷಕರನ್ನು ಬಹುಬೇಗನೇ ಸೆಳೆಯುತ್ತವೆ. ಫಾದರ್ ತುಂಬಾನೇ ಚೆನ್ನಾಗಿ ಮೂಡಿಬಂದಿದೆ ಎಂಬ ಅಭಿಪ್ರಾಯ ಗಾಂಧಿನಗರದ ಗಲ್ಲಿಗಳಲ್ಲಿ ಕೇಳಿ ಬರುತ್ತಿದೆ. ಇದರ ಜತೆಗೆ ಚಿತ್ರಕ್ಕೆ ಬಿಡುಗಡೆಗೂ ಮುನ್ನವೇ ಓಟಿಟಿ ಪ್ಲಾಟ್‌ಫಾರಂಗಳಲ್ಲಿ ಹೆಚ್ಚು ಡಿಮ್ಯಾಂಡ್ ಕ್ರಿಯೆಟ್ ಆಗಿದೆ. ಈಗಾಗಲೇ ಸಾಕಷ್ಟು ಕರೆಗಳು ನಿರ್ಮಾಪಕರಿಗೆ ಬರುತ್ತಿವೆ. ಆದರೆ ನಿರ್ಮಾಪಕ ಆರ್.ಚಂದ್ರು ಚಿತ್ರವನ್ನು ಪ್ರೇಕ್ಷಕರಿಗೇ ಮೊದಲು ತೋರಿಸಬೇಕೆಂದುಕೊಂಡಿದ್ದು, ಆನಂತರವಷ್ಟೇ ಬೇರೆ ಯೋಚನೆ ಮಾಡಲಿದ್ದಾರೆ ಎಂದು ಅವರ ಆತ್ಮೀಯಬಳಗ ಹೇಳುತ್ತಿದೆ. ಸಾಮಾನ್ಯವಾಗಿ ಗಾಂಧಿನಗರದಲ್ಲಿ ಒಂದು ಚಿತ್ರದ ಬಗ್ಗೆ ಪಾಸಿಟಿವ್ ಸುದ್ದಿ ಓಡಾಡುತ್ತಿದೆ ಎಂದರೆ ಅದರಲ್ಲಿ ಸಾಕಷ್ಟು ವಿಶೇಷತೆಗಳಿವೆ ಎಂದೇ ಅರ್ಥ. ಏಕೆಂದರೆ ಇಲ್ಲಿ ನೆಗೆಟಿವ್ ಹರಡುವವರೇ ಹೆಚ್ಚು, ಅಂಥದ್ದರಲ್ಲಿ ಚಂದ್ರು ಸಿನಿಮಾಗೆ ಈ ಮಟ್ಟದ ರೆಸ್ಪಾನ್ಸ್ ಸಿಗುತ್ತಿರುವುದಕ್ಕೆ ಕಾರಣ ಆ ಚಿತ್ರಕ್ಕಿರುವ ಶಕ್ತಿ. 'ಫಾದರ್' ಚಿತ್ರದ ನಾಯಕಿಯಾಗಿ ಅಮೃತ ಅಯ್ಯಂಗಾರ್ ಕಾಣಿಸಿಕೊಂಡಿದ್ದಾರೆ. ಮಂಜು ಮಾಂಡವ್ಯ ಅವರ ಸಂಭಾಷಣೆ, ಸುಜ್ಞಾನ್ ಅವರ ಕ್ಯಾಮರಾ ವರ್ಕ್ ಈ ಚಿತ್ರಕ್ಕಿದೆ.



'ಫಾದರ್' ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ, ಅಮೃತ ಅಯ್ಯಂಗಾರ್



ಅಂಜನಾದ್ರಿ ಬೆಟ್ಟದಲ್ಲಿಯೇ 'ಜೈ ಹನುಮಾನ್'ಗೆ ಚಾಲನೆ




ನಟ, ನಿರ್ದೇಶಕ ರಿಷಬ್‌ಶೆಟ್ಟಿ 'ಜೈ ಹನುಮಾನ್' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಪ್ರಶಾಂತ್ ವರ್ಮಾ ನಿರ್ದೇಶನದ ಈ ಚಿತ್ರಕ್ಕೆ ಕೊಪ್ಪಳ ಜಿಲ್ಲೆಯ ಆಂಜನೇಯನ ಜನ್ಮಸ್ಥಳವಾದ ಅಂಜನಾದ್ರಿ ಬೆಟ್ಟದಲ್ಲಿ ಮುಹೂರ್ತ ನಡೆಯಿತು. ನಾಯಕ ರಿಷಬ್ ಶೆಟ್ಟಿ ಅವರ ಜೊತೆ ಪ್ರಗತಿ ಶೆಟ್ಟಿ, ನಿರ್ದೇಶಕ ಪ್ರಶಾಂತ್ ವರ್ಮಾ, ನಿರ್ಮಾಪಕರಾದ ನವೀನ್ ಯೆರ್ನೇನಿ ಮತ್ತು ವೈ ರವಿಶಂಕರ್, ನಟ ತೇಜ್ ಸಜ್ಜಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಹನುಮಾನ್ ಹುಟ್ಟಿದ ಸ್ಥಳ ಅಂಜನಾದ್ರಿ ಬೆಟ್ಟದಲ್ಲಿಯೇ 'ಜೈ ಹನುಮಾನ್' ಚಿತ್ರದ ಮುಹೂರ್ತ ನಡೆದಿರುವುದು ವಿಶೇಷ.

ಎರಡು ವರ್ಷಗಳ ಹಿಂದೆ 'ಹನುಮಾನ್' ಚಿತ್ರವನ್ನು ಕೊಟ್ಟಿದ್ದ ಪ್ರಶಾಂತ್ ವರ್ಮಾ ಅವರೇ ಇದೀಗ 'ಜೈ ಹನುಮಾನ್' ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಮೈತ್ರಿ ಮೂವೀ ಮೇಕರ್ಸ್‌ನ ನವೀನ್ ಯೆರ್ನೇನಿ ಮತ್ತು ವೈ ರವಿಶಂಕರ್ ಅವರು ಈ ಚಿತ್ರವನ್ನು ಬಿಗ್ ಬಜೆಟ್‌ನಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. 'ಪುಷ್ಪ'ದಂಥ ಯಶಸ್ವೀ ಚಿತ್ರ ನಿರ್ಮಾಣ ಮಾಡಿದ ಮೈತ್ರಿ ಮೂವೀ ಮೇಕರ್ಸ್ ಬ್ಯಾನರ್‌ನಲ್ಲೇ ರಿಷಬ್ ಶೆಟ್ಟಿ ಅವರ ಈ 'ಜೈ ಹನುಮಾನ್' ಸಿನಿಮಾ ತಯಾರಾಗುತ್ತಿದೆ. ಶೀಘ್ರದಲ್ಲೇ ಚಿತ್ರದ ಶೂಟಿಂಗ್ ಕೂಡ ಶುರುವಾಗಲಿದೆ. ಈ ಚಿತ್ರಕ್ಕೆ ಎಂ.ಎಂ.ಕೀರವಾಣಿ ಸಂಗೀತ ನಿರ್ದೇಶನ, ಎಸ್. ತಿರುನಾವುಕ್ಕರಸು ಅವರ ಛಾಯಾಗ್ರಹಣ ಹಾಗೂ ಶ್ರೀನಾಗೇಂದ್ರ ತಂಗಳರ ನಿರ್ಮಾಣ ವಿನ್ಯಾಸವಿದೆ.

ಸಿನಿಪದಬಂಧ-616



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಮಾಲಾಶ್ರೀ ಚಂಡಿ ಅವತಾರಕ್ಕೆ ಎಸ್.ಮಹೇಂದರ್ ನಿರ್ದೇಶಕ 4
2. ಅನಂತ್ ನಾಗ್ – ಮಹಾಲಕ್ಷ್ಮಿ ಅಭಿನಯದ ಚಿನ್ನದ ಕುಟುಂಬ 5
5. ಪ್ರಜ್ವಲ್ ದೇವರಾಜ್ ನಡೆಸಿದ ಉತ್ಸವ 5
7. ಪುನೀತ್ ರಾಜಕುಮಾರ್ ಪರಾಕ್ರಮಿ 5
9. ದುನಿಯಾ ವಿಜಯ್ ಗೊಲ್ಲ 5
13. ಕಿತ್ತೂರು ಚೆನ್ನಮ್ಮನಿಗೆ ಇಲ್ಲಿ ಇನ್ಸಿಲ್ ಇಲ್ಲವಾಗಿದೆ 5
14. ಬೆಟ್ಟದಲ್ಲಿ ಅರಳಿದ ಪುಷ್ಪ 5
16. '_ _ _ _ _ ಗಂಡುಬೀರಿ ನಾನು ಯಾರು ಮೈಸೂರು ಜಾಣ......', 5
18. ಜಗ್ಗೇಶ್ – ಸಾಂಘವಿ ಅಭಿನಯದ ಚಿತ್ರ 5
19. ರಮೇಶ್ – ಸರಳ ಅಭಿನಯದ ಸಿಹಿ ತಿಂಗಳು 4

ಮೇಲಿನಿಂದ ಕೆಳಕ್ಕೆ

1. ಶಿವಣ್ಣನಿಗೆ ಇಷ್ಟವಾದವಳು ಸುಧಾರಾಣಿ 8
2. ವಧು ತನ್ನ ಇಷ್ಟದ ವರನಿಗೆ ಹೂಮಾಲೆ ಹಾಕಿ ಮಾಡಿಕೊಂಡ ವಿವಾಹ 4
3. ಕಿಚ್ಚ ಸುದೀಪ್ ಕವಿ ನೆನಪಿಸಿದ್ದಾನೆ 2
4 ಗೌರಿಯೊಂದಿಗೆ ಬಂದವಳು 2
6. ಕರ್ತವ್ಯ ಚಿತ್ರದ ನಾಯಕಿ 3
8. ಹೊನ್ನಪ್ಪ ಭಾಗವತರ್ ದೊಡ್ಡ ಬರಹಗಾರ 8
10. ಹಾಲಿನೊಂದಿಗೆ ಬಂದ ಮಧು ಇಲ್ಲಿ ತಲೆಕೆಳಗು 2
11. ದರ್ಶನ್ ಅಭಿನಯದ ಸೇವಕ 2
12. ಜಿಂದಾಬಾದ್ ಚಿತ್ರದ ನಾಯಕ ಆರಂಭದಲ್ಲಿ ಪುಷ್ಪ ಇರಿಸಿಕೊಂಡಿದ್ದಾನೆ 3
15. ಶಂಕರ್‌ನಾಗ್ ಸೋಲದ ಪುತ್ರ 4
16. ದುನಿಯಾ ವಿಜಯ್ – ಇಂದ್ರಿತಾ ರೇ ಅಭಿನಯದ ಚಿತ್ರ 2
17. ಮುಖವಾಡ ಚಿತ್ರದ ನಾಯಕಿ 2

ಸಿನಿ ಪದಬಂಧ 615ರ ಉತ್ತರ

ಒ	ಗ್ಗ	ರ	ಣೆ			ಮ	ಹಾ	ಭಾ	ರ	ತ
ಲ				ಖ		ಹಾ				ರ್ಣ
ವಿ	ಜ	ಯ	ಖ	ಡ್ಗ		ರಾ		ಶ್ರೀ		
ನ						ಜ	ನ	ನಾ	ಯ	ಕ
ಉ	ಳು	ವ	ಯೋ	ಗಿ				ಥ್		ಲ್ಲು
ಡು				ಳಿ		ಗೀ				ವೀ
ಗೊ		ಉಂ				ತಾ	ಳಿ	ಯ	ಆ	ಣೆ
ರೆ	ತಾ	ಗು	ನು	ಮಿ						ನು
		ರ		ಲ್ಟ್ರಿ		ದೇ	ವ	ರ	ಗು	ಡಿ
ಶಾ				ಮಾ		ವ				ಯಿ
ಪ	ರ	ಮ	ಶಿ	ವ			ಸ	ವಿ	ಮಾ	ತು

ವಿಜೇತರು: ಸೌಮ್ಯಶ್ರೀ.ಸಿ, C/O ಚಂದ್ರ, ನಂ. 40, 2ನೇ ಮೇನ್, 1ನೇ ಕ್ರಾಸ್, ರೈಲ್ವೇ ಲೇಔಟ್, ಬೋಗಾದಿ, ಮೈಸೂರು-26

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015


ಕಮಲಶಿಲೆಯಲ್ಲಿ 'ದೇವಿಮಹಾತ್ಮೆ'ಗೆ ಚಾಲನೆ



ಈ ಹಿಂದೆ ಮರ್ಯಾದೆ ಪ್ರಶ್ನೆ ಎಂಬ ಚಿತ್ರ ನಿರ್ದೇಶಿಸಿದ್ದ ನಾಗರಾಜ್ ಸೋಮಯಾಜಿ ಅವರ ಮತ್ತೊಂದು ಚಿತ್ರ 'ದೇವಿ ಮಹಾತ್ಮೆ. ಈಗಾಗಲೇ ತನ್ನ ಫಸ್ಟ್‌ಲುಕ್ ಮೂಲಕ ಕುತೂಹಲ ಹೆಚ್ಚಿಸಿರುವ ಈ ಚಿತ್ರಕ್ಕೆ ಕುಂದಾಪುರ ತಾಲೂಕಿನ ಕಮಲಶಿಲೆಯ ಶ್ರೀಬ್ರಾಹ್ಮಿ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಮುಹೂರ್ತ ನೆರವೇರಿದೆ. ಈ ಸಂದರ್ಭದಲ್ಲಿ ದೇವಿ ಮಹಾತ್ಮೆ ಚಿತ್ರದ ನಿರ್ಮಾಪಕ ಗಾಂಧಿ ರಾಜನ್, ಧರ್ಮದರ್ಶಿಗಳಾದ ಸಚ್ಚಿದಾನಂದ ಚಾತ್ರರು, ನಿರ್ದೇಶಕ ನಾಗರಾಜ್ ಸೋಮಯಾಜಿ, ಛಾಯಾಗ್ರಾಹಕ ಎಸ್.ಕೆ.ರಾವ್ ಭಾಗಿಯಾಗಿದ್ದರು.

ದೇವಿಮಹಾತ್ಮೆ ಚಿತ್ರಕ್ಕೆ ಒಂದೊಳ್ಳೆ ತಂಡ ರೆಡಿಯಾಗಿದೆ. ನಾಗರಾಜ ಸೋಮಯಾಜಿ ಈ ಚಿತ್ರದ ಕಥೆ ಬರೆದಿದ್ದಾರೆ. ಬರವಣಿಗೆಯಲ್ಲಿ ಅರವಿಂದ್ ಕುಪ್ಳೀಕರ್, ಭಾಸ್ಕರ ಬಂಗೇರ, ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಸಾಥ್ ಕೊಟ್ಟಿದ್ದಾರೆ. ಈ ಚಿತ್ರಕ್ಕೆ ಎಸ್.ಕೆ. ರಾವ್ ಅವರ ಕ್ಯಾಮರಾ ವರ್ಕ್, ಪ್ರಸಾದ್ ಕೆ.ಶೆಟ್ಟಿ ಅವರ ಸಂಗೀತ ನಿರ್ದೇಶನವಿದೆ. ಕಾಮಿಡಿ, ಥ್ರಿಲ್ಲರ್ ಕಂಟೆಂಟ್ ಹೊಂದಿರುವ ದೇವಿ ಮಹಾತ್ಮೆ ಚಿತ್ರದ ಚಿತ್ರೀಕರಣ ಗುರುವಾರದಿಂದಲೇ ಶುರುವಾಗಿದೆ. ಕುಂದಾಪುರದ ಸುತ್ತಮುತ್ತ ಶೂಟಿಂಗ್ ನಡೆಯುತ್ತಿದೆ.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ವಿರೋಶ್



ಕೊಡಗಿನ ಚೆಲುವೆ ನಟಿ ರಶ್ಮಿಕಾ ಮಂದಣ್ಣ ಮತ್ತು ನಟ ವಿಜಯ್ ದೇವರಕೊಂಡ (ವಿರೋಶ್) ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

ರಾಜಸ್ಥಾನದ ಉದಯಪುರದ ಐಶಾರಾಮಿ ರೆಸಾರ್ಟ್‌ನಲ್ಲಿ ಈ ಜೋಡಿ ಇಂದು (ಫೆ26) ಬೆಳಗ್ಗೆ ಶುಭ ಮುಹೂರ್ತದಲ್ಲಿ ತೆಲುಗು ಸಂಪ್ರದಾಯದಂತೆ ಮದುವೆ ಆಗಿದ್ದಾರೆ. ಎರಡೂ ಕುಟುಂಬದ ಸದಸ್ಯರು, ಹಿರಿಯರು ಮತ್ತು ಆಪ್ತೇಷ್ಟರ ಸಮ್ಮುಖದಲ್ಲಿ ವಿಜಯ್ ದೇವರಕೊಂಡ, ರಶ್ಮಿಕಾ ಅವರಿಗೆ ತಾಳಿ ಕಟ್ಟುವ ಮೂಲಕ ಇಬ್ಬರೂ ಸತಿಪತಿಗಳಾಗಿದ್ದಾರೆ.

ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರು ಕಳೆದ ಕೆಲ ವರ್ಷಗಳಿಂದಲೂ ಪರಸ್ಪರ ಪ್ರೀತಿಸುತ್ತಿದ್ದಿದ್ದು ಗುಟ್ಟೇನೂ ಆಗಿರಲಿಲ್ಲ. ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಈ ಜೋಡಿ ನಿಶ್ಚಿತಾರ್ಥ ಮಾಡಿಕೊಂಡಿದ್ದರು. ಇದೀಗ ತಮ್ಮ ಪ್ರೀತಿಯನ್ನು ದಾಂಪತ್ಯವನ್ನಾಗಿ ಬದಲಾಯಿಸಿಕೊಂಡಿದ್ದಾರೆ.

ಉದಯಪುರದಲ್ಲಿ ಕಳೆದ ಕೆಲ ದಿನಗಳಿಂದಲೂ ಮದುವೆ ಕಾರ್ಯಗಳು ನಡೆಯುತ್ತಲೇ ಇದ್ದವು. ನಿನ್ನೆ ಹಳದಿ ಮತ್ತು ಸಂಗೀತ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. 2 ದಿನಗಳ ಹಿಂದೆ ತೆಲಂಗಾಣದಿಂದ ಉದಯಪುರಕ್ಕೆ ಆಗಮಿಸಿದ್ದ ಪುರೋಹಿತರು ತೆಲುಗು ಸಂಪ್ರದಾಯದಂತೆ ಈ ಜೋಡಿ ಮದುವೆ ಮಾಡಿಸಿದ್ದಾರೆ.

ಇದೇ ದಿನ ಸಂಜೆ ವೇಳೆಗೆ ಕೊಡವ ಸಂಪ್ರದಾಯದಂತೆ ರಶ್ಮಿಕಾ ಮತ್ತು ವಿಜಯ್ ದೇವರಕೊಂಡ ಅವರ ಮದುವೆ ಮತ್ತೊಮ್ಮೆ ನಡೆದಿದೆ. ಇಬ್ಬರೂ ಸಹ ಭಿನ್ನ ಭಿನ್ನ ಸಂಪ್ರದಾಯಕ್ಕೆ ಸೇರಿದ ಕುಟುಂಬದವರಾಗಿರುವ ಕಾರಣ ಎರಡೂ ಕುಟುಂಬಗಳ ಸಂಪ್ರದಾಯ, ಆಚರಣೆಗೆ ಚ್ಯುತಿ ಬಾರದಂತೆ ಎರಡು ಭಿನ್ನ ರೀತಿಯಲ್ಲಿ ಈ ಜೋಡಿಯ ವಿವಾಹ ನಡೆಯುತ್ತಿದೆ. ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಈಗ ಅಧಿಕೃತವಾಗಿ ಸತಿ–ಪತಿಗಳಾಗಿದ್ದಾರೆ.

ಮಾ.4ರಂದು ಆರತಕ್ಷತೆ: ರಶ್ಮಿಕಾ ಮತ್ತು ವಿಜಯ್ ಅವರು ಮದುವೆಗೆ ಕೇವಲ ಆಪ್ತೇಷ್ಟರಿಗಷ್ಟೆ ಆಹ್ವಾನ ನೀಡಿದ್ದು, ಮಾ.4ರಂದು ಅದ್ಧೂರಿಯಾಗಿ ಹೈದರಾಬಾದ್‌ನ ತಾಜ್ ಕೃಷ್ಣದಲ್ಲಿ ವಿವಾಹ ಆರತಕ್ಷತೆ ಕಾರ್ಯಕ್ರಮ ನಡೆಯಲಿದೆ. ಆ ಕಾರ್ಯಕ್ರಮದಲ್ಲಿ ಎಲ್ಲಾ ಚಿತ್ರರಂಗದ ಗಣ್ಯರು, ಆಂಧ್ರ, ತೆಲಂಗಾಣ ರಾಜ್ಯಗಳ ರಾಜಕೀಯ ಮುಖಂಡರು ಹಾಗೂ ಕೆಲವು ಕೇಂದ್ರ ಸಚಿವರು, ಸಂಸದರು ಸಹ ಭಾಗಿಯಾಗಲಿದ್ದಾರೆ.

ಮೈಸೂರು ಮಿತ್ರ

ಕ್ರೀಡಾಂಗಣ ನಿರ್ಮಿಸಿ ಕೆಎಸ್ಐಸಿ ಮುಚ್ಚುವ ಪ್ರಯತ್ನ ಕೈ ಬಿಡಿ

ಮಾಜಿ ಜಿಪಂ ಸದಸ್ಯ ಕೆ.ಎಸ್.ಸದಾನಂದ ಒತ್ತಾಯ



ಜಿಪಂ ಮಾಜಿ ಸದಸ್ಯ ಕೆ.ಎಸ್.ಸದಾನಂದ ಕೆಎಸ್ಐಸಿ ಆವರಣದಲ್ಲಿ ಮಾತನಾಡಿದರು.

ತಿ.ನರಸೀಪುರ, ಫೆ.26– ಕ್ರೀಡಾಂಗಣ ನಿರ್ಮಿಸುವ ಮೂಲಕ ಕೆಎಸ್ಐಸಿ ಘಟಕ ಮುಚ್ಚುವ ಪ್ರಯತ್ನ ಕೈ ಬಿಡಬೇಕು ಎಂದು ಮಾಜಿ ಜಿಪಂ ಸದಸ್ಯ ಕೆ.ಎಸ್.ಸದಾನಂದ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ಕೆಎಸ್ಐಸಿ ಕಾರ್ಖಾನೆ ಮುಂಭಾಗ ಗುರುವಾರ ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು ಹಾಗೂ ಮಾಜಿ ಪುರಸಭೆ ಸದಸ್ಯ ಅರ್ಜುನ್ ರಮೇಶ್ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಬೆಂಬಲಿಸಿ ಮಾತನಾಡಿದ ಅವರು, ಮೈಸೂರು ಅರಸರ ಅಭಿವೃದ್ಧಿ ಕಾರ್ಯ, ಕೊಡುಗೆಗಳನ್ನು ಟೀಕಿಸುವುದು ಸರ್ಕಾರಕ್ಕೆ ಒಂದು ಚಾಳಿಯಾಗಿದೆ. ಎಂಎಲ್ಸಿ ಡಾ.ಯತೀಂದ್ರ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತ ತಮ್ಮ ತಂದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೊಡುಗೆ ಜಾಸ್ತಿ ಎನ್ನುವಂತೆ ಮಾತನಾಡುತ್ತಾರೆ. ಯದುವಂಶದ ಅರಸರು ನೀಡಿರುವ ಕೊಡುಗೆಗಳಿಗೆ ಯಾವುದೇ ಚ್ಯುತಿ ಬಾರದಂತೆ ಸರ್ಕಾರ ಕಾರ್ಯ ನಿರ್ವಹಿಸಬೇಕು ಎಂದರು.

1912ರಲ್ಲಿ ಮೈಸೂರು ಅರಸರು ಕೃಷಿಕರಿಗೆ ಅನುಕೂಲಕ್ಕಾಗಿ ಕೆಎಸ್ಐಸಿ ಕಾರ್ಖಾನೆ ನಿರ್ಮಿಸಿದ್ದರು. ಈ ಕಾರ್ಖಾನೆ ಇಂದು ನೂರಾರು ಜನರಿಗೆ ಬದುಕು ಕಟ್ಟಿ ಕೊಟ್ಟಿರುವ ಜೊತೆಗೆ ಉತ್ತಮ ಗುಣಮಟ್ಟದ ರೇಷ್ಮೆ ನೂಲು ತಯಾರಿಸುತ್ತಿದೆ. ಇಂತಹ ಹಸಿರು ಹಾಗೂ ಆರೋಗ್ಯಕರ ವಾತಾವರಣ ಇರುವ ಕೆಎಸ್ಐಸಿ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವುದು ಸರಿಯಲ್ಲ. ಕ್ರೀಡಾಂಗಣ ನಿರ್ಮಾಣಕ್ಕೆ ನಮ್ಮ ವಿರೋಧವಿಲ್ಲ. ಆದರೆ ಪಟ್ಟಣ ಸುತ್ತಮುತ್ತಲ ಒಣ ಪ್ರದೇಶದಲ್ಲಿ ಸರ್ಕಾರ ಕ್ರೀಡಾಂಗಣ ನಿರ್ಮಿಸಲಿ ಎಂದ ಅವರು ಇಲ್ಲಿ ಕ್ರೀಡಾಂಗಣ ನಿರ್ಮಾಣವಾದರೇ ಇಲ್ಲಿನ ಪರಿಸರ ಹಾಳಾಗುತ್ತದೆ. ಅಲ್ಲದೇ ಕಾರ್ಮಿಕರ ಬದುಕಿಗೂ ಧಕ್ಕೆ ಆಗುತ್ತದೆ. ಉದ್ಯಮಕ್ಕೂ ಒಡೆತ ಬೀಳುತ್ತದೆ ಎಂದರು.

ಮೈಸೂರು ರೇಷ್ಮೆಗೆ ಜಾಗತಿಕ ಮನ್ನಣೆ ದೊರೆತಿದೆ. ಇಂತಹ ಬಹು ಬೇಡಿಕೆಯ ಉದ್ಯಮ ಹಾಳು ಮಾಡುವ ಪ್ರಯತ್ನ ಸರ್ಕಾರದಿಂದಾಗುತ್ತಿದೆ ಎಂದು ಆರೋಪಿಸಿದ ಅವರು ಸಂತೆಮರಳ್ಳಿ, ಚನ್ನಪಟ್ಟಣ, ತಿ.ನರಸೀಪುರ ಹಾಗೂ ಕೊಳ್ಳೇಗಾಲ ಸಮೀಪದ ಮುಡಿಗುಂಡದಲ್ಲಿ ಘಟಕಗಳಿದ್ದವು. ಈಗಾಗಲೇ ಸಂತೆಮರಳ್ಳಿ, ಮುಡಿಗುಂಡ ಘಟಕಗಳು ಮುಚ್ಚಿ ಹೋಗಿವೆ. ಈಗ ಸದ್ಯಕ್ಕೆ ನಡೆಯುತ್ತಿರುವುದು ಚನ್ನಪಟ್ಟಣ ಮತ್ತು ತಿ.ನರಸೀಪುರದಲ್ಲಿ ಮಾತ್ರ. ಹೀಗಾಗಿ ಇಲ್ಲಿ ಕ್ರೀಡಾಂಗಣ ನಿರ್ಮಾಣ ಕೈ ಬಿಟ್ಟು ಕಾರ್ಖಾನೆಯನ್ನು ಮತ್ತಷ್ಟು ಆಧುನೀಕರಣಗೊಳಿಸಿ ಉದ್ಯಮವನ್ನು ಅಭಿವೃದ್ಧಿಪಡಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಇಲ್ಲಿ ಕ್ರೀಡಾಂಗಣ ಸ್ಥಾಪನೆ ಸಂಬಂಧ ಜನಾಭಿಪ್ರಾಯ ಸಂಗ್ರಹಿಸಬೇಕಿತ್ತು. ಆದರೆ ಸರ್ಕಾರ ಯಾರ ಮನವಿ ಆಲಿಸದೇ ಏಕಪಕ್ಷೀಯವಾಗಿ ನಿರ್ಧರಿಸಿರುವುದು ಸರಿಯಲ್ಲ. ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸದಂತೆ ಹೋರಾಟ ಆರಂಭವಾಗಿದ್ದರೂ ಕ್ಷೇತ್ರವನ್ನು ಪ್ರತಿನಿಧಿಸುವ ಮುಖ್ಯಮಂತ್ರಿಗಳಾಗಲಿ, ಜಿಲ್ಲಾ ಉಸ್ತುವಾರಿ ಸಚಿವರಾಗಲಿ ಅಥವಾ ರೇಷ್ಮೆ ಇಲಾಖೆ ಸಚಿವರಾಗಲಿ ಕಾರ್ಮಿಕರ ಸಮಸ್ಯೆ ಆಲಿಸಲು ವಿಫಲವಾಗಿದ್ದಾರೆ ಎಂದು ಆರೋಪಿಸಿದರು.

ಉಪವಾಸ ಕೈ ಬಿಡಲು ಮನವಿ: ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಬಿಜೆಪಿ ಮುಖಂಡರಾದ ತೋಟದಪ್ಪ ಬಸವರಾಜು ಹಾಗೂ ಮಾಜಿ ಪುರಸಭೆ ಸದಸ್ಯ ಅರ್ಜುನ್ ರಮೇಶ್ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಕೈ ಬಿಡುವಂತೆ ತಾಲೂಕು ಆಡಳಿತದ ಪರವಾಗಿ ತಹಸೀಲ್ದಾರ್ ಸುರೇಶ್ ಆಚಾರ್ ಮನವಿ ಮಾಡಿದರು.

ಪ್ರತಿಭಟನೆ ಮಾಡುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ ಉಪವಾಸ ಸತ್ಯಾಗ್ರಹ ಮಾಡುವುದು ಬೇಡ. ತಾಲೂಕು ಆಡಳಿತದ ಪರವಾಗಿ ನಾವು ನಿಮ್ಮಲ್ಲಿ ಮನವಿ ಮಾಡುತ್ತೇವೆ ಉಪವಾಸ ಕೈ ಬಿಟ್ಟು ಧರಣಿ ಮುಂದುವರಿಸಿ ಎಂದರು.

ಈ ವೇಳೆ ಮಾತನಾಡಿದ ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು, ಕ್ಷೇತ್ರದ ಪ್ರತಿನಿಧಿಗಳಾಗಿರುವ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಸದರು ಯಾರಾದರೂ ಒಬ್ಬರು ಬಂದು ಈ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರೇ ಸತ್ಯಾಗ್ರಹ ಹಿಂಪಡೆಯುತ್ತೇವೆ. ಇಲ್ಲದಿದ್ದರೇ ನಮ್ಮ ಹೋರಾಟ ಮುಂದುವರೆಯಲಿದೆ ಎಂದರು.

ಈ ವೇಳೆ ಬಿಜೆಪಿ ಮುಖಂಡ ಡಾ.ರೇವಣ್ಣ, ಮಾಜಿ ಪುರಸಭಾ ಸದಸ್ಯರಾದ ಅರ್ಜುನ್, ಎಸ್.ಕೆ.ಕಿರಣ್, ರಾಜಶೇಖರ್, ರೈತ ಸಂಘದ ಬನ್ನೂರು ನಾರಾಯಣ್, ಕ್ಷೇತ್ರ ಬಿಜೆಪಿ ಅಧ್ಯಕ್ಷ ಶಿವಕುಮಾರ್, ಡಾ.ಮಲ್ಲಿಕಾರ್ಜುನಸ್ವಾಮಿ, ಅಲಗೂಡು ಮಂಜು, ಪರಿಸರವಾದಿಗಳು ಸೇರಿದಂತೆ ಅನೇಕರಿದ್ದರು.

ಹೊಳೆಹುಂಡಿ ಗ್ರಾಮದಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ



34 ಫಲಾನುಭವಿಗಳಿಗೆ ಗ್ರಾಮೀಣ ನಿವೇಶನ ಯೋಜನೆಯ ಹಕ್ಕು ಪತ್ರಗಳನ್ನು ಶಾಸಕ ಅನಿಲ್ ಚಿಕ್ಕಮಾದು ವಿತರಿಸಿದರು.

ಹೆಚ್.ಡಿ.ಕೋಟೆ, ಫೆ.26– ಗ್ರಾಮೀಣ ಜನರ ಸ್ವಂತ ಮನೆ ಕನಸು ನನಸಾಗಿಸಲು ಸರ್ಕಾರ ಹಕ್ಕು ಪತ್ರ ವಿತರಿಸುತ್ತಿದೆ. ಮುಂದಿನ ದಿನಗಳಲ್ಲಿ ಜನಪರ ಕಾರ್ಯಕ್ರಮಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಬದ್ಧರಾಗಿದ್ದೇವೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಮಾದಾಪುರ ಗ್ರಾಪಂ ವ್ಯಾಪ್ತಿಯ ಹೊಳೆಹುಂಡಿ ಗ್ರಾಮದಲ್ಲಿ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆಯ ಹಕ್ಕುಪತ್ರ ವಿತರಣೆ ಕಾರ್ಯಕ್ರಮದಲ್ಲಿ 34 ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಗ್ರಾಮಸ್ಥರಿಗೆ ನೀಡಿದ್ದ ಭರವಸೆಯಂತೆ ಸೂರಿಲ್ಲದವರಿಗೆ ಮನೆ ಹಕ್ಕು ಪತ್ರ ನೀಡಿದ್ದೇನೆ ಎಂದರು.

ಇದೇ ವೇಳೆ ಶಾಸಕ ಅನಿಲ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ತಾಪಂ ಇಓ ಧರಣೇಶ್, ಮುಖಂಡರಾದ ಹೆಚ್.ಸಿ. ನರಸಿಂಹಮೂರ್ತಿ, ಮಹೇಶ್ ನಾಯ್ಕ, ಸೋಮಚಾರಿ, ದಾಸಯ್ಯ, ರವಿಚಂದ್ರ, ಸೌಮ್ಯ, ಕೆ.ಎಂ.ನಾಗರಾಜು, ವೇಣುಗೋಪಾಲ್, ವನಸಿರಿ ಉಮೇಶ್, ಮಹೇಶ್, ಶಿವಮಾದಯ್ಯ, ಸಣ್ಣಸ್ವಾಮಿ, ಮಹಾದೇವಯ್ಯ, ಭೈರಲಿಂಗಸ್ವಾಮಿ, ದುಂಡಯ್ಯ, ಮುತ್ತಯ್ಯ, ಕರಿಯಯ್ಯ, ಪ್ರಶಾಂತ್ ಇತರರಿದ್ದರು.

ಕೆಎಸ್ಐಸಿ ಮುಚ್ಚುವ ಪ್ರಶ್ನೆಯೇ ಇಲ್ಲ: ಸಂಸದ ಸುನೀಲ್ ಬೋಸ್



ತಿ.ನರಸೀಪುರ, ಫೆ.26– ಮೈಸೂರು ರೇಷ್ಮೆ ದೇಶ–ವಿದೇಶದಲ್ಲಿ ಸಾಕಷ್ಟು ಹೆಸರು ಗಳಿಸಿದೆ. ಕೆಎಸ್ಐಸಿ ಮೈಸೂರು ಮಹಾರಾಜರು ಸ್ಥಾಪಿಸಿದ ಸಂಸ್ಥೆ. ಅದನ್ನು ಯಾವುದೇ ಕಾರಣಕ್ಕೂ ಮುಚ್ಚುವ ಪ್ರಶ್ನೆಯೇ ಇಲ್ಲ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ಖಾಸಗಿ ಕಾರ್ಯಕ್ರಮ ನಿಮಿತ್ತ ತಾಲೂಕಿಗೆ ಆಗಮಿಸಿದ್ದ ವೇಳೆ ಮಾತನಾಡಿದ ಅವರು, ಸಹಸ್ರಾರು ಜನರಿಗೆ ಉದ್ಯೋಗ ಕೊಟ್ಟಿರುವ ಕೆಎಸ್ಐಸಿಯನ್ನು ಮುಚ್ಚುವ ಪ್ರಶ್ನೆ ಇಲ್ಲ. ಬದಲಿಗೆ ಉದ್ಯಮವನ್ನು ಮತ್ತಷ್ಟು ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ಕಾರ್ಖಾನೆ ಮುಚ್ಚುತ್ತಾರೆ ಎಂಬುದು ರಾಜಕೀಯ ಪ್ರೇರಿತ ಅಪಪ್ರಚಾರ ಎಂದರು.

ಕೆಎಸ್ಐಸಿ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಳೆದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅನುದಾನ ಬಿಡುಗಡೆಗೊಳಿಸಿದ್ದರು. ಆದರೆ ಕಳೆದ 1 ವರ್ಷದಿಂದ ಇಲ್ಲದ ವಿರೋಧ ಇದೀಗ ವ್ಯಕ್ತವಾಗುತ್ತಿರುವುದು ನಿಜಕ್ಕೂ ಆಶ್ಚರ್ಯ ತಂದಿದೆ ಎಂದರು. ವರ್ಷದ ಹಿಂದೆ ಘೋಷಣೆಯಾಗಿರುವ ಬಗ್ಗೆ ವಿರೋಧಿಸಿದ್ದರೆ ಅಥವಾ ಯಾವುದೇ ದೋಷಗಳಿದ್ದರೆ ಕೂಡಲೇ ಸರಿಪಡಿಸಬಹುದಿತ್ತು. ಈಗಲೂ ಕೂಡ ಈ ಬಗ್ಗೆ ಚರ್ಚೆ ನಡೆಸಿ ಕ್ರೀಡಾಂಗಣ ನಿರ್ಮಾಣದಿಂದ ತೊಂದರೆ ಕಂಡು ಬಂದಲ್ಲಿ ಸ್ಥಳ ಬದಲಾಯಿಸಬಹುದು ಎಂದರು.

ಕ್ರೀಡಾಂಗಣವನ್ನು ಎಲ್ಲೋ ನಿರ್ಮಿಸುವುದಲ್ಲ. ಪಟ್ಟಣದ ಸುತ್ತಮುತ್ತಲ ವ್ಯಾಪ್ತಿಯ ಕ್ರೀಡಾಪಟುಗಳಿಗೆ ಅನುಕೂಲವಾಗುವ ರೀತಿ ಕ್ರೀಡಾಂಗಣ ನಿರ್ಮಿಸಬೇಕು. ಕಾರ್ಖಾನೆ ಮುಚ್ಚುವ ಅಥವಾ ನೌಕರರಿಗೆ ತೊಂದರೆ ಕೊಡುವ ಉದ್ದೇಶ ಇಲ್ಲ. ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಎಂಎಲ್ಸಿ ಡಾ.ಯತೀಂದ್ರ ಅವರಿಗೆ ಈ ಸಂಬಂಧ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಡಾ.ವಿ.ಚಂದ್ರಸೇನ್ ನಿಧನ



ಹುಣಸೂರು, ಫೆ.26– ಮೂಲತಃ ಹುಣಸೂರು, ಹಾಲಿ ಮೈಸೂರಿನ ರಾಮಕೃಷ್ಣನಗರದ ನಿವಾಸಿಯೂ ಆದ ನಿವೃತ್ತ ಪ್ರಾಂಶುಪಾಲ ಡಾ.ವಿ.ಚಂದ್ರಸೇನ್(75) ಗುರುವಾರ ನಿಧನರಾದರು.

ಮೃತರು ಪತ್ನಿ ವಸುಂಧರ ಸೇನ್, ಪುತ್ರ ಕೌಶಿಕ್ ಸೇನ್, ಪುತ್ರಿ ಸಿಂಧು ಸೇನ್, ಅಳಿಯ ಗಣೇಶ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೇಲದಕುಪ್ಪೆ ಶ್ರೀಮಹದೇಶ್ವರಸ್ವಾಮಿ ದೇವಾಲಯ ಉದ್ಘಾಟನೆ

ಕಷ್ಟ ಸುಖವನ್ನು ಸಮಾನವಾಗಿ ಸ್ವೀಕರಿಸಿ: ಸುತ್ತೂರುಶ್ರೀ



ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಅಭಿನಂದಿಸಲಾಯಿತು.

ಸರಗೂರು, ಫೆ.26– ಜೀವನದಲ್ಲಿ ಕಷ್ಟ ಸುಖವನ್ನು ಸಮಾನವಾಗಿ ಪ್ರೀತಿ, ಧೈರ್ಯದಿಂದ ಸ್ವೀಕರಿಸಿದಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಚನ್ನಗುಂಡಿ ಗ್ರಾಮದಲ್ಲಿ ಗುರುವಾರ ನಡೆದ ಬೇಲದಕುಪ್ಪೆ ಶ್ರೀಮಹದೇಶ್ವರಸ್ವಾಮಿ ದೇವಾಲಯ ಉದ್ಘಾಟನೆ, ಕಳಸರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯನಿಗೆ ಮೊದಲು ಕಷ್ಟ ಬಂದಾಗ ಸ್ವೀಕರಿಸಬೇಕು. ನಂತರ ಸುಖ ಸಿಗಲಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ನಿಜವಾದ ಭಕ್ತಿ ತೋರಿಸುವವರಿಗೆ ಭಗವಂತ ಕಷ್ಟ ಕೊಡುತ್ತಲ್ಲೇ ಇರುತ್ತಾನೆ. ಆ ಮೂಲಕ ತನ್ನ ಭಕ್ತರನ್ನು ಪರೀಕ್ಷೆ ಮಾಡುತ್ತಾನೆ. ಭಗವಂತ ಏನೇ ಕಷ್ಟ ಕೊಟ್ಟರೂ ಪ್ರೀತಿ, ಧೈರ್ಯದಿಂದ ಸ್ವೀಕರಿಸಬೇಕು. ಆಗ ಯಶಸ್ಸು ಸಿಗಲಿದೆ. ಬಂದುದ್ದೆಲ್ಲಾ ಭಗವಂತನ ಕೃಪೆ ಎಂದು ಅರ್ಥೈಸಿಕೊಳ್ಳಬೇಕು ಎಂದರು.

ದೇವಸ್ಥಾನಗಳು ಮನುಷ್ಯನಲ್ಲಿ ಭಕ್ತಿ, ಶ್ರದ್ಧೆ ಮೂಡಿಸಲಿವೆ. ಇಂತಹ ದೇವಾಲಯಗಳಲ್ಲಿ ಬಂಡೀಪುರ ಕಾಡಿನೊಳಗೆ ಉದ್ಭವಗೊಂಡಿರುವ ಬೇಲದಕುಪ್ಪೆ ಮಹದೇಶ್ವರ ದೇವಸ್ಥಾನವೂ ಒಂದು. ದೇವಸ್ಥಾನಗಳು ಭಕ್ತಿ ಕೇಂದ್ರಗಳಾಗಿದ್ದು, ಬೇಲದಕುಪ್ಪೆ ಮಹದೇಶ್ವರ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ದೇವಸ್ಥಾನ ನಿರ್ಮಾಣ ಮಾಡಿರುವುದು ಸಂತಸ ತಂದಿದೆ. ಹೀಗಾಗಿ ಎಲ್ಲರೂ ಒಗ್ಗೂಡಿ ಕೆಲಸ ಮಾಡಿ ಎಂದು ಸಲಹೆ ನೀಡಿದರು.

ಬಿಡಗಲು ಪಡುವಲ ವಿರಕ್ತ ಮಠದ ಮಹದೇವ ಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ, ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ಕಿರಿಯ ತೋಂಟದಾರ್ಯ ಸ್ವಾಮೀಜಿ, ತುಮಕೂರು ಸಿದ್ದಗಂಗಾ ಮಠದ ಕಿರಿಯ ಮಹಾಂತ ಸ್ವಾಮೀಜಿ ಆಶೀರ್ವಚನ ನೀಡಿದರು.

ಇದೇ ವೇಳೆ ದೇವಾಲಯಕ್ಕೆ ಆಗಮಿಸಿದ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಗ್ರಾಮಸ್ಥರು ಅಭಿನಂದಿಸಿದರು. ಮೈಮುಲ್ ಅಧ್ಯಕ್ಷ ಕೆ.ಈರೇಗೌಡ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಕೆ.ಎಂ.ವೀರಭದ್ರಪ್ಪ, ಬಸವ ಬಳಗಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್, ಬಿಜೆಪಿ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಮಹಾಸಭಾ ತಾಲೂಕು ಕಾರ್ಯಾಧ್ಯಕ್ಷ ಸಿ.ಕೆ.ಗಿರೀಶ್, ಜಿಪಂ ಮಾಜಿ ಸದಸ್ಯ ಪಿ.ರವಿ, ಬಿಜೆಪಿ ಟೌನ್ ಅಧ್ಯಕ್ಷ ಎಸ್‌ಬಿ.ನಂಜುಂಡಸ್ವಾಮಿ, ಬಸವ ಬಳಗದ ಅಧ್ಯಕ್ಷ ಗಣಪತಿ, ಯಜಮಾನರಾದ ಲಿಂಗರಾಜು, ರವಿ, ರಾಜಶೇಖರ್, ನಿಜಗುಣ, ಮಹದೇವಸ್ವಾಮಿ, ಮಲ್ಲಪ್ಪ, ಮಲ್ಲುಸ್ವಾಮಿ, ಪರಶಿವಮೂರ್ತಿ, ಕಲ್ಲೇಶ್, ಮಂಜು, ಧರ್ಮಸ್ಥಳ ಸಂಸ್ಥೆ ಮುಳ್ಳೂರು ಮೇಲ್ವಿಚಾರಕ ನರಸಿಂಹಮೂರ್ತಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಮೂರನೇ ಪುಟದಿಂದ

56432 ಹುದ್ದೆ ಭರ್ತಿ

ಒಳಮೀಸಲಾತಿ ಗೊಂದಲದ ನೆಪ ಬೇಡ, ಹೊಸ ನೇಮಕಾತಿ ಆರಂಭಿಸಿ, 2.84 ಲಕ್ಷ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಿ ಎಂದು ಸಚಿವರು, ಶಾಸಕರು ಒತ್ತಡ ಹೇರಿದ್ದರು. ಮುಖ್ಯಮಂತ್ರಿಗಳೂ ಕೂಡ ಸಭೆಗೂ ಮುನ್ನ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹುದ್ದೆ ಖಾಲಿ ಇವೆ, ಯಾವ ಹುದ್ದೆಗಳು ಅಗತ್ಯ, ಯಾವ ಹುದ್ದೆಗಳನ್ನು ತುರ್ತಾಗಿ ತುಂಬಬೇಕು ಎಂಬುದರ ಬಗ್ಗೆ ಇಲಾಖೆಗಳ ಮುಖ್ಯಸ್ಥರು ಹಾಗೂ ಮುಖ್ಯಕಾರ್ಯದರ್ಶಿಗಳಿಂದ ಸಮಗ್ರ ಮಾಹಿತಿ ಪಡೆದಿದ್ದರು.

ಮೊನ್ನೆಯಷ್ಟೇ ಧಾರವಾಡದಲ್ಲಿ ಸಾವಿರಾರು ಉದ್ಯೋಗಾಕಾಂಕ್ಷಿಗಳು ರಸ್ತೆಗಿಳಿದು ಭಾರೀ ಪ್ರತಿಭಟನೆ ನಡೆಸಿ, ನೇಮಕಾತಿಗೆ ಆಗ್ರಹಿಸಿದ್ದರು. ಕಾಂಗ್ರೆಸ್ ನಾಯಕರಿಗೆ ಧಿಕ್ಕಾರ ಕೂಗಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಉದ್ಯೋಗಾಕಾಂಕ್ಷಿಗಳ ತಾಳ್ಮೆಯ ಕಟ್ಟೆ ಒಡೆಯುತ್ತಿದ್ದಂತೆ ರಾಜ್ಯ ಸರ್ಕಾರ ಹಿಂದಿನ ಮೀಸಲಾತಿ ಪ್ರಮಾಣದಲ್ಲೇ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ನೇಮಕಾತಿ ಪ್ರಕ್ರಿಯೆ ನಡೆಸಲು ನಿರ್ಧರಿಸಿದೆ.

ರೋಹಿತ್ ವೇಮುಲಾ ಕಾಯ್ದೆಗೆ ಅನುಮೋದನೆ: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರಿತ ದೌರ್ಜನ್ಯ ತಡೆಯುವ ಸಲುವಾಗಿ ರೋಹಿತ್ ವೇಮುಲಾ ಕಾಯ್ದೆ ಜಾರಿಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಮುಂದಿನ ಬಜೆಟ್ ಅಧಿವೇಶನದಲ್ಲಿ ಈ ವಿಧೇಯಕ ಮಂಡನೆ ಮಾಡಲು ಸಂಪುಟ ಸಭೆ ನಿರ್ಣಯಿಸಿದೆ.

ರಾಜ್ಯದಲ್ಲಿ ರೋಹಿತ್ ವೇಮುಲ ಕಾಯ್ದೆ ಜಾರಿ ಮಾಡುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಇದಕ್ಕೆ ಸ್ಪಂದಿಸಿದ್ದ ಸಿಎಂ, ಅಧಿವೇಶನದಲ್ಲಿ ಕಾಯ್ದೆ ಜಾರಿಗೊಳಿಸುವ ಭರವಸೆ ನೀಡಿದ್ದರು. ಅದರಂತೆ ರೋಹಿತ್ ವೇಮುಲ ಕಾಯ್ದೆ ಸಿದ್ದಪಡಿಸಿ ಸಂಪುಟದ ಮುಂದೆ ಇಡಲಾಗಿತ್ತು. ಸಾಕಷ್ಟು ಚರ್ಚೆಯ ಬಳಿಕ ಇಂದು ಸಚಿವ ಸಂಪುಟ ಸಭೆಯಲ್ಲಿ ವಿಧೇಯಕಕ್ಕೆ ಅನುಮೋದನೆ ನೀಡಲಾಗಿದೆ.

ವರದಿ ಅಂಗೀಕಾರ: ಕರ್ನಾಟಕದ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ 2024ರಲ್ಲಿ ಪ್ರೊ.ಎಂ.ಗೋವಿಂದ ರಾವ್ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯು ಕಳೆದ ತಿಂಗಳು ಸಲ್ಲಿಸಿರುವ ವರದಿಯನ್ನು ಸಂಪುಟ ಅಂಗೀಕರಿಸಿದೆ.

ಹಳೆಯ ನಂಜುಂಡಪ್ಪ ವರದಿಯ ನಂತರದ ಪ್ರಗತಿ ಪರಿಶೀಲಿಸಿ, ಮುಂದಿನ 5 ವರ್ಷಗಳಲ್ಲಿ ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ 43,000 ಕೋಟಿ ಅನುದಾನ ಮತ್ತು ಹೊಸ ಕೈಗಾರಿಕಾ/ಮೂಲಸೌಕರ್ಯ ಮಾನದಂಡಗಳ ಶಿಫಾರಸ್ಸಿನೊಂದಿಗೆ ಹಿಂದುಳಿದ ತಾಲೂಕುಗಳ ಮರು–ಗುರುತಿಸುವಿಕೆ, ಸಾರಿಗೆ ಮತ್ತು ಸಂಪರ್ಕ, ಆಡಳಿತಾತ್ಮಕ ಸುಧಾರಣೆ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸದಂತೆ ಮಹತ್ವದ ವಿಚಾರಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಇವ ನಮ್ಮವ ಮಸೂದೆ: ಇನ್ನು ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ 'ಇವ ನಮ್ಮವ ಇವ ನಮ್ಮವ ಬಿಲ್–2026' ಜಾರಿಗೆ ತರಲು ಉದ್ದೇಶಿಸಿದ್ದು, ಈ ಬಿಲ್ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ. ಈ ಬಗ್ಗೆ ಗೃಹ ಇಲಾಖೆಗೆ ಅಭಿಪ್ರಾಯಕ್ಕೆ ಕಳುಹಿಸಿ, ಮುಂದಿನ ಕ್ಯಾಬಿನೆಟ್‌ನಲ್ಲಿ ಮಂಡಿಸಲು ಸೂಚಿಸಲಾಗಿದೆ

ಸಾಗಿಸಿದ್ದು 127 ಕೆಜಿ ಚಿನ್ನ!

ದುಬೈಯಿಂದ ಬೆಂಗಳೂರಿಗೆ ಆಗಮಿಸಿದ ವೇಳೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡಿಆರ್ಐ ಅಧಿಕಾರಿಗಳು ಬಂಧಿಸಿದ್ದರು. ಈ ವೇಳೆ ಅವರಿಂದ 14.213 ಕೆ.ಜಿ. ಚಿನ್ನ (ರೂ.12.56 ಕೋಟಿ ಮೌಲ್ಯ) ವಶಪಡಿಸಿಕೊಳ್ಳಲಾಗಿತ್ತು. ನಂತರ ನಡೆದ ಶೋಧ ಕಾರ್ಯಾಚರಣೆಯಲ್ಲಿ ರೂ.2.06 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ರೂ.2.67 ಕೋಟಿ ನಗದು ಪತ್ತೆಯಾಗಿತ್ತು. ಇಡಿ ತನಿಖೆಯಲ್ಲಿ ರನ್ಯಾ ಹೆಸರಿನಲ್ಲಿರುವ ರೂ.34.12 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಲಾಗಿದೆ. ಈ ಕಳ್ಳಸಾಗಣೆ ಜಾಲವು ವಿದೇಶದಲ್ಲಿ ಚಿನ್ನ ಖರೀದಿ, ಅಕ್ರಮವಾಗಿ ಭಾರತಕ್ಕೆ ಕಳ್ಳಸಾಗಣೆ, ನಗದು ಮಾರಾಟ ಮತ್ತು ಹವಾಲಾ–ಬ್ಯಾಂಕಿಂಗ್ ಮಾರ್ಗಗಳ ಮೂಲಕ ನಂತರದ ಆದಾಯದ ಅಕ್ರಮ ವರ್ಗಾವಣೆಯನ್ನು ಒಳಗೊಂಡ ಸಂಘಟಿತ ಮತ್ತು ರಚನಾತ್ಮಕ ಕಾರ್ಯವಿಧಾನವನ್ನು ತನಿಖೆಯು ಮತ್ತಷ್ಟು ಬಹಿರಂಗಪಡಿಸಿದೆ. ಇಂತಹ ಚಟುವಟಿಕೆಗಳು ಕಾನೂನು ವ್ಯಾಪಾರ ಮತ್ತು ಹಣಕಾಸು ವ್ಯವಸ್ಥೆಗಳನ್ನು ಹಾಳು ಮಾಡುವುದಲ್ಲದೆ, ಗಡಿಯಾಚೆಗಿನ ವಹಿವಾಟುಗಳನ್ನು ನಿಯಂತ್ರಿಸಲು ಉದ್ದೇಶಿಸಲಾದ ಸಂಸ್ಥೆಗಳ ಮೇಲಿನ ಸಾರ್ವಜನಿಕ ನಂಬಿಕೆಯನ್ನು ಕ್ಷೀಣಿಸುತ್ತವೆ ಎಂದು ಇಡಿ ಹೇಳಿದೆ.

ಎನ್‌ಸಿಇಆರ್‌ಟಿ ಪಠ್ಯಕ್ಕೆ ನಿಷೇಧ

ಕಾನೂನು ತನ್ನ ಕ್ರಮ ಕೈಗೊಳ್ಳಲಿದೆ ಎಂದರು. ನ್ಯಾಯಮೂರ್ತಿ ಜೊಯಾಮಲ್ಯ ಬಾಗ್ಚಿ, ಇದು ಸಂವಿಧಾನದ ಮೂಲ ರಚನೆ ಮೇಲೆ ನಡೆಸಿದ ದಾಳಿ ಎಂದು ಕಿಡಿಕಾರಿದರು. 'ನಮ್ಮ ಸಮಾಜದಲ್ಲಿ ನ್ಯಾಯಾಂಗದ ಪಾತ್ರ' ಎಂಬ ಅಧ್ಯಾಯದ ಭಾಗವಾಗಿ 'ನ್ಯಾಯಾಂಗದಲ್ಲಿನ ಭ್ರಷ್ಟಾಚಾರ' ವಿಷಯವನ್ನು ಪುಸ್ತಕ ಒಳಗೊಂಡಿದೆ ಎಂಬುದಾಗಿ ಆಂಗ್ಲ ದಿನಪತ್ರಿಕೆಯೊಂದು ಸುದ್ದಿ ಪ್ರಕಟಿಸಿತ್ತು.

ನ್ಯಾಯಾಂಗದ ವಿವಿಧ ಹಂತಗಳಲ್ಲಿ ಭ್ರಷ್ಟಾಚಾರ ಮತ್ತು ನ್ಯಾಯಾಧೀಶರ ಕೊರತೆ ಸೇರಿದಂತೆ ಅನೇಕ ಕಾರಣಗಳಿಂದಾಗಿ ಪ್ರಕರಣಗಳು ಭಾರೀ ಸಂಖ್ಯೆಯಲ್ಲಿ ಬಾಕಿ ಉಳಿದಿವೆ ಎಂದು ಅಧ್ಯಾಯದಲ್ಲಿ ಉಲ್ಲೇಖಿಸಲಾಗಿತ್ತು. ಈ ವಿಚಾರವನ್ನು ನ್ಯಾಯಾಲಯದ ಗಮನಕ್ಕೆ ತಂದ ಹಿರಿಯ ವಕೀಲ ಕಪಿಲ್ ಸಿಬಲ್, 8ನೇ ತರಗತಿ ವಿದ್ಯಾರ್ಥಿಗಳಿಗೆ ನ್ಯಾಯಾಂಗದ ಭ್ರಷ್ಟಾಚಾರ ಬೋಧಿಸುವುದು ಗಂಭೀರ ಕಳವಳಕಾರಿ ಸಂಗತಿ ಎಂದರು. ಹಿರಿಯ ನ್ಯಾಯವಾದಿ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿ, ಪಠ್ಯದಲ್ಲಿ ನ್ಯಾಯಾಂಗದ ಭ್ರಷ್ಟಾಚಾರವನ್ನೇ ಆಯ್ದು ಟೀಕಿಸಲಾಗಿದೆ, ಬೇರೆ ಕ್ಷೇತ್ರಗಳಲ್ಲಿ ಸಮಸ್ಯೆಗಳಿದ್ದರೂ ನ್ಯಾಯಾಂಗವನ್ನೇ ಪ್ರತ್ಯೇಕವಾಗಿ ಬಿಂಬಿಸಲಾಗಿದೆ ಎಂದು ಆಕ್ಷೇಪಿಸಿದರು.

ಶೀಘ್ರ ಕೇಂದ್ರ ವಾಣಿಜ್ಯ ಸಚಿವರ ಭೇಟಿ


ಮಾಡಿದರೆ ನಿಮ್ಮ ಸಂಕಷ್ಟಕ್ಕೆ ಸ್ಪಂದಿಸುವರೆ? ಎಂದು ಪ್ರಶ್ನಿಸಿದರು. ನಾನು ಎಲ್ಲೆ ಹೋದರೂ ಜನ ಸಾಕಷ್ಟು ಸಂಖ್ಯೆಯಲ್ಲಿ ನೆರೆದಿರುತ್ತಾರೆ. ಆದರೆ ನಿರೀಕ್ಷೆಯಂತೆ ನಮ್ಮ ಪಕ್ಷಕ್ಕೆ ಮತ ಬೀಳುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯ ಮಂಜೇಗೌಡ, ಮಾಜಿ ಶಾಸಕರೂ ಆದ ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಮೈಮುಲ್ ಅಧ್ಯಕ್ಷ ಈರೇಗೌಡ, ನಿರ್ದೇಶಕ ಎಂ.ಟಿ.ಸೋಮಶೇಖರ್, ಮಾಜಿ ಜಿಪಂ ಸದಸ್ಯ ಎಂ.ಟಿ.ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷರಾದ ಎಸ್.ಕೆ. ಮಧುಚಂದ್ರ, ಕುಪ್ಪಳಿ ಸೋಮಶೇಖರ್, ಜೆಡಿಎಸ್ ತಾಲೂಕು ಅಧ್ಯಕ್ಷ ಮೆಡಿಕಲ್ ರಾಜಣ್ಣ, ಡೈರಿ ಅಧ್ಯಕ್ಷ ಭರತ್, ಉಪಾಧ್ಯಕ್ಷ ರಾಮನಾಯ್ಕ, ಮಹೇಶ್, ಮಂಜುನಾಥ್, ಕೋಟೇಗೌಡ, ಆನಂದ ಕುಮಾರ್, ಹರೀಶ್, ಮಂಜೇಗೌಡ, ಕುಮಾರ್, ಶ್ರೀನಿವಾಸ್, ಶಿವಯ್ಯ, ಲೀಲಾವತಿ, ಕಾಮಾಕ್ಷಮ್ಮ, ಕಾರ್ಯದರ್ಶಿ ಚೇತನ್, ಕೃಷ್ಣ ರಾಮೇಗೌಡ, ಸಂದೀಪ್, ಮಾರ್ಗ ವಿಸ್ತರಣಾಧಿಕಾರಿ ವರಲಕ್ಷ್ಮಿ, ಗ್ರಾಪಂ ಮಾಜಿ ಅಧ್ಯಕ್ಷ ಪ್ರಕಾಶ್, ಸತೀಶ್, ಪುರುಷೋತ್ತಮ, ಮುಖಂಡರಾದ ಲಾಲು ಸಾಹೇಬ್, ನಾಗೇಂದ್ರ, ಮಂಜುನಾಥ್ ಸೇರಿದಂತೆ ಹಾಲು ಉತ್ಪಾದಕರು ಉಪಸ್ಥಿತರಿದ್ದರು.

ತಾಯಿ ಬೇರು; ಕ್ರೀಡಾಂಗಣಕ್ಕಾಗಿ ಅದನ್ನೆ ಕತ್ತರಿಸಲು ಹೊರಟಿದೆ ಸರ್ಕಾರ!

ಈ ಜಾಗದಲ್ಲಿ ಗೆಸ್ಟ್ ಹೌಸ್, ಜಿಎಂ ಕ್ವಾಟ್ರರ್ಸ್, ನೌಕರರ ವಾಹನ ನಿಲ್ದಾಣವಿದೆ. ಬಹು ಮುಖ್ಯವಾಗಿ ಕಾರ್ಖಾನೆಗೆ ಕಪಿಲಾ ನದಿಯಿಂದ ನೀರು ಪೂರೈಕೆಯಾಗುವ ಪೈಪ್‌ಲೈನ್ ಕೂಡ ಹಾದು ಹೋಗಿದೆ. ಕಾರ್ಖಾನೆಗೆ ಬಹು ಮುಖ್ಯವಾಗಿ ಬಳಕೆಯಾಗುವ ಈ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ಮುಂದಾಗಿದೆ. ಹಾಗಾದರೆ ಇಲ್ಲಿ ಕ್ರೀಡಾಂಗಣ ನಿರ್ಮಿಸಿದರೆ ಕಲ್ಲಿದ್ದಲು ಸುರಿಯುವುದೆಲ್ಲಿ, ಬಳಕೆಯಾದ ಕೆಂಡ ಸುರಿಯುವುದೆಲ್ಲಿ, ಕಪಿಲಾ ನದಿವರೆಗೆ ಹಾದು ಹೋಗಿರುವ ಪೈಪ್‌ಲೈನ್ ಸ್ಥಿತಿ ಏನು ಎಂಬ ಪ್ರಶ್ನೆಗಳು ಎದುರಾಗಿವೆ. ಬೋರ್‌ವೆಲ್ ನೀರು ಬಳಸಿದರೆ ರೇಷ್ಮೆ ನೇಯ್ಗೆ ಯಂತ್ರಗಳು ತುಕ್ಕು ಹಿಡಿಯುತ್ತವೆ ಅಲ್ಲದೆ ರೇಷ್ಮೆ ನೂಲಿನ ಗುಣಮಟ್ಟ ಕೂಡ ಚೆನ್ನಾಗಿರುವುದಿಲ್ಲ ಎಂದು ಅರಿತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, ಕಾರ್ಖಾನೆಯಿಂದ ಕಪಿಲಾ ನದಿವರೆಗೆ ಸುಮಾರು ಒಂದೂವರೆ ಕಿ.ಮೀ ತನಕ ತಾಮ್ರದ ಪೈಪ್‌ಲೈನ್ ಅಳವಡಿಸಿದ್ದಾರೆ. ಇಂತಹ ದೂರ ದೃಷ್ಟಿ ಹಾಗೂ ಸೂಕ್ಷ್ಮತೆಯ ಮಹಾರಾಜರು ನಿರ್ಮಾಣ ಮಾಡಿರುವ ಕಾರ್ಖಾನೆ ಅಸ್ತಿತ್ವಕ್ಕೆ ಈಗ ಸರ್ಕಾರ ಕುತ್ತು ತರುತ್ತಿದೆ.

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲೂ ಬಿಜೆಪಿ ಜೊತೆ ಹೊಂದಾಣಿಕೆಗೆ ಸಿದ್ಧ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಯೂಟರ್ನ್!



ಬೆಂಗಳೂರು, ಫೆ.26– ಸ್ಥಳೀಯ ಸಂಸ್ಥೆಗಳ ಹಾಗೂ ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಎನ್‌ಡಿಎ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಉದ್ದೇಶ ಇದೆ ಎಂದು ಜೆಡಿಎಸ್ ವರಿಷ್ಠ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಇಂಗಿತ ವ್ಯಕ್ತಪಡಿಸಿದ್ದಾರೆ.

ಬುಧವಾರ ಜೆ.ಪಿ. ಭವನದಲ್ಲಿ ಸುದ್ದಿಗಾರರ ಜತೆ ಮಾತಾಡಿದ ಅವರು, ಜೆಡಿಎಸ್ ಪ್ರಾದೇಶಿಕ ಪಕ್ಷ, ಬಿಜೆಪಿ ರಾಷ್ಟ್ರೀಯ ಪಕ್ಷ. ಅವರು ಚುನಾವಣಾ ಪೂರ್ವ ಹೊಂದಾಣಿಕೆ ಕುರಿತಂತೆ ಯಾವ ತೀರ್ಮಾನ ಮಾಡಿದ್ದಾರೆಂದು ಕಾದು ನೋಡಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ವಿಚಾರದಲ್ಲಿ ಎಲ್ಲರೂ ಸೇರಿ ಚರ್ಚೆ ಮಾಡುತ್ತೇವೆ ಎಂದರು.

ಬಿಜೆಪಿಯವರು ಈ ವಿಚಾರದಲ್ಲಿ ತೆಗೆದು ಕೊಳ್ಳುವ ನಿರ್ಣಯದ ಮೇರೆಗೆ ನಾವು ಮುಂದಿನ ಹೆಜ್ಜೆ ಇರಿಸುತ್ತೇವೆ ಎನ್ನುವ ಮುಖಾಂತರ ನಾವು ಮೈತ್ರಿಯೊಂದಿಗೆ ಚುನಾವಣೆ ಎದುರಿಸಲು ಸಿದ್ಧ ಎಂಬ ಸೂಚನೆ ನೀಡಿದರು. ಇತ್ತೀಚೆಗಷ್ಟೇ ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಸ್ವಂತ ಶಕ್ತಿಯಿಂದ ಹೋರಾಡಲಿದೆ ಎಂದು ಗೌಡರು ಗುಡುಗಿದ್ದರು. ಇದೀಗ ಯೂ–ಟರ್ನ್ ಹೊಡೆದಿರುವ ಅವರು, ಜೆಡಿಎಸ್– ಬಿಜೆಪಿ ಮೈತ್ರಿ ಹೊಂದಾಣಿಕೆಯಲ್ಲಿ ಚುನಾವಣೆ ಎದುರಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರ್ಕಾರವು ಬೆಂಗಳೂರು ನಗರವನ್ನು ಐದು ನಗರ ಪಾಲಿಕೆ ಮಾಡಿದೆ. ನಾವೇನು ಮಾಡಬೇಕು ಎಂಬುದರ ಬಗ್ಗೆ ಪಕ್ಷದ ಮುಖಂಡರೊಂದಿಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಿದ್ದೇವೆ. ವಿಧಾನಸಭೆ, ಲೋಕಸಭೆ ಚುನಾವಣೆಯಲ್ಲಿ ನಾವು ಎನ್‌ಡಿಎ ಜೊತೆಗೇ ಹೋಗುತ್ತೇವೆ. ಇದರಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸೀಟು ಹಂಚಿಕೆ ಕೊಂಚ ಕಷ್ಟವಾಗಬಹುದು. ಪಕ್ಷದ ನಾಯಕರು, ಮುಖಂಡರು ಕುಳಿತು ಚರ್ಚಿಸುತ್ತೇವೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ದೆಹಲಿಯಲ್ಲಿ ಬಿಜೆಪಿ ನಾಯಕರೊಂದಿಗೆ ಚರ್ಚಿಸಿಕೊಂಡು ಇಲ್ಲಿಗೆ ಬರಬಹುದು. ಬಳಿಕ ನಾವೆಲ್ಲ ಚರ್ಚಿಸಿ ಒಂದು ತೀರ್ಮಾನಕ್ಕೆ ಬರಲಿದ್ದೇವೆ ಎಂದು ದೇವೇಗೌಡರು ಹೇಳಿದರು.

ಇದೇ ಜೂನ್‌ಗೆ ನನ್ನ ರಾಜ್ಯಸಭಾ ಸದಸ್ಯತ್ವದ ಅವಧಿ ಮುಗಿಯಲಿದೆ. ಏಪ್ರಿಲ್ ಅಂತ್ಯಕ್ಕೆ ಅಧಿವೇಶನ ಮುಗಿಯಲಿದೆ. ಈ ಅಧಿವೇಶನದಲ್ಲಿ ಏನು ಪ್ರಸ್ತಾಪಿಸಬೇಕು ಎಂದು ಯೋಚಿಸುತ್ತಿದ್ದೇನೆ. ನಾನು ದೆಹಲಿಗೆ ಹೋಗುವ ಮುನ್ನ ನಿಮ್ಮನ್ನು ಭೇಟಿಯಾಗುವೆ. ರಾಜ್ಯಸಭಾ ಅವಧಿ ಮುಗಿದರೂ ನಿಮ್ಮನ್ನು ಭೇಟಿಯಾಗುವೆ. ಮುಂದಿನ ದಿನಗಳಲ್ಲಿ ಹಲವು ವಿಷಯಗಳ ಬಗ್ಗೆ ಮಾತನಾಡುವ ಸನ್ನಿವೇಶ ಬರಲಿದೆ ಎಂದು ದೇವೇಗೌಡರು ಹೇಳಿದರು.

ಅನಿಲ್ ಅಂಬಾನಿಯ 3,716 ಕೋಟಿ ರೂ ಬೆಲೆ ಬಾಳುವ 17 ಅಂತಸ್ತಿನ ಕಟ್ಟಡ Abode ಇಡಿ ವಶಕ್ಕೆ!

ಈ ಮನೆಯಲ್ಲಿವೆ ಹೆಲಿಪ್ಯಾಡ್, ಸ್ವಿಮ್ಮಿಂಗ್ ಪೂಲ್, ಜಿಮ್



ಮುಂಬೈ, ಫೆ.26– ರಿಲಯನ್ಸ್ ಗ್ರೂಪ್ ಅಧ್ಯಕ್ಷ ಅನಿಲ್ ಅಂಬಾನಿ ಬದುಕು ಬೀದಿಗೆ ಬಿದ್ದಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾನೂನಿನ ಅಡಿಯಲ್ಲಿ ಸುಮಾರು 3,716 ಕೋಟಿ ಬೆಲೆಬಾಳುವ ಮುಂಬೈಯಲ್ಲಿನ ಅವರ ಐಷರಾಮಿ ಬಂಗಲೆ 'ಅಬೋಡ್' ಅನ್ನು ಇಡಿ ಜಪ್ತಿ ಮಾಡಿದೆ.

ರಿಲಯನ್ಸ್ ಕಮ್ಯುನಿಕೇಷನ್ಸ್ (RCOM) ಮೇಲಿರುವ ಬ್ಯಾಂಕ್ ಸಾಲದ ವಂಚನೆಗೆ ಸಂಬಂಧಿಸಿದ ಪ್ರಕರಣದಲ್ಲಿ 66 ವರ್ಷದ ಅನಿಲ್ ಅಂಬಾನಿ ಅವರನ್ನು ಕೇಂದ್ರೀಯ ತನಿಖಾ ಸಂಸ್ಥೆಯು ವಿಚಾರಣೆ ನಡೆಸುತ್ತಿದೆ. ಇದೇ ಆಸ್ತಿಯಲ್ಲಿನ 473.17 ಕೋಟಿ ರೂಪಾಯಿ ಮೌಲ್ಯದ ಒಂದು ಭಾಗವನ್ನು ಕಳೆದ ವರ್ಷ ನವೆಂಬರ್‌ನಲ್ಲಿ ಇಡಿ ಜಪ್ತಿ ಮಾಡಿತ್ತು. 3,716 ಕೋಟಿ ಮೌಲ್ಯದ ಅನಿಲ್ ಅಂಬಾನಿ ಅವರ ಮನೆ, 17 ಅಂತಸ್ತುಗಳನ್ನು ಹೊಂದಿರುವ 66 ಮೀಟರ್ ಬಹುಮಹಡಿ ಕಟ್ಟಡವಾಗಿದೆ. ಇದು ಮುಂಬೈನ ಐಷಾರಾಮಿ ಪ್ರದೇಶಗಳಲ್ಲಿ ಒಂದಾದ ಪಾಲಿ ಹಿಲ್‌ನಲ್ಲಿದೆ. ಅವರ ಮನೆಯಲ್ಲಿ ಹೆಲಿಪ್ಯಾಡ್, ಸ್ವಿಮ್ಮಿಂಗ್ ಪೂಲ್, ಜಿಮ್ ಮತ್ತು ದೊಡ್ಡ ಪಾರ್ಕಿಂಗ್ ಪ್ರದೇಶ ಸೇರಿದಂತೆ ಎಲ್ಲಾ ರೀತಿಯ ಸೌಕರ್ಯ ಹೊಂದಿದೆ. ದುಬಾರಿ ಕಾರುಗಳಿರುವ ಲಾಂಜ್ ಕೂಡ ಇದೆ. ಅವರು ರೋಲ್ಸ್ ರಾಯ್ಸ್, ಲೆಕ್ಸಸ್, ಪೋರ್ಷೆ, ಆಡಿ ಮತ್ತು ಮರ್ಸಿಡಿಸ್–ಬೆನ್ಜ್‌ನಂತಹ ಐಷಾರಾಮಿ ಕಾರುಗಳನ್ನು ಹೊಂದಿದ್ದಾರೆಂದು ವರದಿಯಾಗಿದೆ. ಆದಾಗ್ಯೂ, ಕೇವಲ ಒಂದು ಕಾರು ಹೊಂದಿರುವುದಾಗಿ ಅವರು ಯುಕೆ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಇತರ ಆಸ್ತಿಗಳ ಜೊತೆಗೆ ಪಾಲಿ ಹಿಲ್‌ನ ಮನೆಯನ್ನು ಅನಿಲ್ ಅಂಬಾನಿ ಕುಟುಂಬದ ಸದಸ್ಯರ ಖಾಸಗಿ ಕುಟುಂಬದ ಟ್ರಸ್ಟ್ – ರೈಸ್‌ಇ ಟ್ರಸ್ಟ್‌ಗೆ ಒಟ್ಟುಗೂಡಿಸಲಾಗಿದೆ ಎಂದು ತನಿಖೆಯಿಂದ ತಿಳಿದುಬಂದಿದೆ ಎಂದು ಇಡಿ ಹೇಳಿದೆ. ಅನಿಲ್ ಅಂಬಾನಿ ಇದರಲ್ಲಿ ತೊಡಗಿಸಿಕೊಂಡಿಲ್ಲ ಎಂದು ತೋರಿಸಲು ಇದನ್ನು ಮಾಡಲಾಗಿದೆ. RiseE ಟ್ರಸ್ಟ್‌ನಲ್ಲಿ ಆಸ್ತಿಯನ್ನು ಒಟ್ಟುಗೂಡಿಸುವ ಮೂಲಕ ಸಂಪತ್ತಿನ ಸಂರಕ್ಷಣೆ ಮಾಡುವುದು ಮತ್ತು ರಿಲಯನ್ಸ್ ಕಮ್ಯೂನಿಕೇಷನ್ ಪಡೆದಿದ್ದ ಮರುಪಾವತಿಸದ ಸಾಲದಿಂದ ಅನಿಲ್ ಅಂಬಾನಿಯನ್ನು ಬಚಾವ್ ಮಾಡುವುದು ಇದರ ಪ್ರಮುಖ ಉದ್ದೇಶವಾಗಿದೆ ಎಂದು ಇಡಿ ಹೇಳಿದೆ. RCOM ಮತ್ತು ಅದರ ಸಮೂಹ ಕಂಪನಿಗಳು ದೇಶೀಯ ಮತ್ತು ವಿದೇಶಿ ಸಾಲದಾತರಿಂದ 40,185 ಕೋಟಿ ರೂಪಾಯಿ ಯಷ್ಟು ಸಾಲವನ್ನು ಪಡೆದಿವೆ. ಈ ಪ್ರಕರಣದಲ್ಲಿ ಇಲ್ಲಿಯವರೆಗೂ 15, 700 ಕೋಟಿ ರೂ. ಮೊತ್ತದಷ್ಟು ಆಸ್ತಿ ಜಪ್ತಿ ಮಾಡಲಾಗಿದೆ. ಅನಿಲ್ ಅಂಬಾನಿ ಇಂದು ಎರಡನೇ ಸುತ್ತಿನ ವಿಚಾರಣೆಗಾಗಿ ದೆಹಲಿಯ ತನಿಖಾ ಸಂಸ್ಥೆಯ ಮುಂದೆ ಹಾಜರಾಗಿದ್ದರು. ಈ ಹಿಂದೆ ಕಳೆದ ವರ್ಷ ಆಗಸ್ಟ್‌ನಲ್ಲಿ ಅವರನ್ನು ಗ್ರಿಲ್ ಮಾಡಲಾಗಿತ್ತು

ಕನ್ನಡ ಸಿನಿಮಾ ನಿರ್ದೇಶಕನ ಅಪಹರಿಸಿ, ಹಲ್ಲೆ: ನಟಿ ಸೇರಿದಂತೆ 11 ಜನರ ಬಂಧನ

ಬೆಂಗಳೂರು, ಫೆ.26– ಕನ್ನಡ ಸಿನಿಮಾ ನಿರ್ದೇಶಕರೊಬ್ಬರನ್ನು ಅಪಹರಿಸಿ, ಹಲ್ಲೆ ಮಾಡಿ, ಚಿನ್ನಾಭರಣ ಮತ್ತು ನಗದು ದೋಚಿರುವ ಆರೋಪದ ಮೇಲೆ ನಟಿ ಸೇರಿದಂತೆ 11 ಜನರನ್ನು ಬಂಧಿಸಲಾಗಿದೆ.

ಫೆಬ್ರವರಿ 11 ರಂದು ಆಡುಗೋಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ನಂತರ ಈ ನಿರ್ದೇಶಕರ ಅಪಹರಣ ಪ್ರಕರಣ ಬೆಳಕಿಗೆ ಬಂದಿದೆ ಎಂದು ಪೊಲೀಸರು ಹೇಳಿದ್ದಾರೆ. ಬಂಧಿತ ಆರೋಪಿಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಭಾವಿಯೂ ಆಗಿರುವ ಮತ್ತು ಭೀಮಾ ಚಿತ್ರದಲ್ಲಿ ಅಭಿನಯಿಸಿದ್ದ ಐಶ್ವರ್ಯ ಎಂಬ ನಟಿಯೂ ಸೇರಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಇನ್ನೂ ಬಿಡುಗಡೆಯಾಗದ 'ಜೀವನದ ಭಾಷೆ' ಎಂಬ ಹೊಸ ಚಿತ್ರವನ್ನು ನಿರ್ದೇಶಿಸಿರುವ ಟಿಎ ಅನೀಶ್ ಅವರನ್ನು ಅಪಹರಣ ಮಾಡಲಾಗಿತ್ತು. ಇವರು ತಮ್ಮ ಕಾರು ಮಾರಾಟ ಮಾಡಲು ನಿರ್ಧರಿಸಿದ್ದರು. ಈ ಬಗ್ಗೆ ಇಂದಿರಾನಗರ ಬಳಿ ನೆಲೆಸಿರುವ ಸ್ನೇಹಿತೆ ಹಾಗೂ ನಟಿ ಐಶ್ವರ್ಯ ಅವರಿಗೆ ಮಾಹಿತಿ ನೀಡಿದ್ದರು. ನಂತರ ಆ ನಟಿಯಿಂದ ಅಪಹರಣಕಾರರು ಮಾಹಿತಿ ಪಡೆದುಕೊಂಡಿದ್ದರು.

ನಂತರ ಆರೋಪಿಗಳು ವಾಹನ ಮಾರಾಟ ಮಾಡಲು ಸಹಾಯ ಮಾಡುವುದಾಗಿ ದೂರುದಾರ ನಿರ್ದೇಶಕರಿಗೆ ತಿಳಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಂತರ ಫೆಬ್ರವರಿ 9ರಂದು ಮುಂಬೈನಲ್ಲಿದ್ದ ನಿರ್ದೇಶಕನನ್ನ ಪ್ಲ್ಯಾನ್ ಮಾಡಿ ಕಿಡ್ನ್ಯಾಪರ್ಸ್ ಬೆಂಗಳೂರಿಗೆ ಕರೆಸಿಕೊಂಡಿದ್ದಾರೆ. ಬಳಿಕ ನಿರ್ದೇಶಕನನ್ನ ಅಪಹರಿಸಿ ಬ್ಯಾಡರಹಳ್ಳಿಯ ಮನೆಯೊಂದಕ್ಕೆ ಕರೆದುಕೊಂಡು ಬಂದಿದ್ದಾರೆ. ಅಲ್ಲಿ ಹಾಕಿ ಸ್ಟಿಕ್, ಇನ್ನಿತರ ವಸ್ತುಗಳಿಂದ ಹಲ್ಲೆ ಮಾಡಿದ್ದಾರೆ ಮತ್ತು ಅವರು ಧರಿಸಿದ್ದ ಚಿನ್ನಾಭರಣ ಹಾಗೂ 30,000 ರೂ. ನಗದು ದೋಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ನಂತರ, ಅವರನ್ನು ಕಾರಿನಲ್ಲಿ ತುಮಕೂರು ಜಿಲ್ಲೆಯ ಪಂಡಿತನಹಳ್ಳಿ ಬಳಿಯ ಮಂದಾರ ಗಿರಿ ಬೆಟ್ಟಕ್ಕೆ ಕರೆದೊಯ್ದು, ಅಲ್ಲಿ ಇನ್ನೂ ಇಬ್ಬರು ವ್ಯಕ್ತಿಗಳು ಸೇರಿಕೊಂಡು ಮತ್ತೆ ಅವರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ ಆರೋಪಿಗಳಿಂದ ಅಪರಾಧಕ್ಕೆ ಬಳಸಲಾದ ಆರು ಮೊಬೈಲ್ ಫೋನ್‌ಗಳು, ಚಿನ್ನಾಭರಣಗಳು, ಒಂದು ಕಾರು ಮತ್ತು ಹಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಶ್ರೀಮತಿ ಶಾರದಾ ಬಲ್ಲಾಳ್ ನಿಧನ



ಮೈಸೂರು, ಫೆ.26– ಮೈಸೂರು ಕೃಷ್ಣಮೂರ್ತಿಪುರಂ ನಿವಾಸಿ ಹಾಗೂ ದಿವಂಗತ ಭೋಜರಾಜ್ ಬಲ್ಲಾಳ್ ಅವರ ಧರ್ಮಪತ್ನಿ ಶ್ರೀಮತಿ ಶಾರದಾ ಬಲ್ಲಾಳ್(88) ಅವರು ಬುಧವಾರ ನಿಧನರಾದರು. ಇವರು, ಉದ್ಯಮಿ ಮಹೇಶ್ ಬಲ್ಲಾಳ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಕುವೆಂಪುನಗರದ ಕಾವೇರಿ ಕಾಲೇಜು ಬಳಿಯ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಿ.ನರಸೀಪುರದ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿವಾದ

ಮೈಸೂರಿನ ಕೆಎಸ್‌ಐಸಿಯ ನೂರಾರು ನೌಕರರ ಪ್ರತಿಭಟನೆ; ಮೈಸೂರು ರೇಷ್ಮೆ ಸೀರೆ ನೇಯ್ಗೆ ಸಂಪೂರ್ಣ ಸ್ಥಗಿತ

● ಕೆಲಸಕ್ಕೆ 700 ಹೊರ ಗುತ್ತಿಗೆ ನೌಕರರ ಗೈರು ● ಪ್ರತಿಭಟನೆಯಲ್ಲಿ ಖಾಯಂ ನೌಕರರೂ ಭಾಗಿ ● ತೀವ್ರ ಸ್ವರೂಪ ಪಡೆಯುತ್ತಿರುವ ಹೋರಾಟ ● ಬೇಡಿಕೆ ಈಡೇರುವ ತನಕ ಹೋರಾಟ ನಿಲ್ಲದೆಂಬ ಎಚ್ಚರಿಕೆ




ತಿ.ನರಸೀಪುರದ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದನ್ನು ವಿರೋಧಿಸಿ ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿ ನೌಕರರು ಗುರುವಾರ ಕೆಲಸಕ್ಕೆ ಗೈರಾಗಿ ಪ್ರತಿಭಟನೆ ನಡೆಸಿದರು. (ಎಡಚಿತ್ರ), ಕೆಎಸ್‌ಐಸಿ ಉಳಿಸುವ ಹೋರಾಟಕ್ಕೆ ಬೆಂಬಲ ನೀಡುವಂತೆ ಪ್ರತಿಭಟನಾನಿರತ ನೌಕರರು ಮೈಸೂರಿನಲ್ಲಿ ಗುರುವಾರ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಮೈಸೂರು, ಫೆ.26(ಬಿಎಲ್‌ಯು)– ಮೈಸೂರು ಜಿಲ್ಲೆ ತಿ.ನರಸೀಪುರದ ಕೆಎಸ್‌ಐಸಿ (ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮ ನಿಯಮಿತ) ಆವರಣದಲ್ಲಿ ಉದ್ದೇಶಿತ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿ ಯ ನೂರಾರು ನೌಕರರು ಕೆಲಸ ಸ್ಥಗಿತಗೊಳಿಸಿ, ಪ್ರತಿಭಟನೆಗಿಳಿದಿದ್ದಾರೆ.

ತಿ.ನರಸೀಪುರದ ಕೆಎಸ್‌ಐಸಿ ಆವರಣದ 5 ಎಕರೆಯಲ್ಲಿ ಕ್ರೀಡಾಂಗಣ ನಿರ್ಮಾಣವಾದರೆ ಅಲ್ಲಿರುವ ಕಾರ್ಖಾನೆಯಲ್ಲಿ ರೇಷ್ಮೆ ತಂಡಾರಿಕೆಗೆ ಧಕ್ಕೆಯಾಗಲಿದ್ದು, ಮುಂದೊಂದು ದಿನ ಕಾರ್ಖಾನೆಯನ್ನು ಮುಚ್ಚುವ ಪರಿಸ್ಥಿತಿ ಎದುರಾಗುತ್ತದೆ. ಇದರಿಂದ ಇಲ್ಲಿರುವ ಕಾರ್ಖಾನೆಗೂ ಕೂಡ ತೊಂದರೆಯಾಗಿ, ಇದಕ್ಕೂ ಬೀಗ ಹಾಕುವ ಪರಿಸ್ಥಿತಿ ಬರಬಹುದು ಎಂದು ನೌಕರರು ಆತಂಕ ವ್ಯಕ್ತಪಡಿಸಿದರು.

ಕ್ರೀಡಾಂಗಣ ನಿರ್ಮಾಣ ಮಾಡುವ ಸರ್ಕಾರದ ಯೋಜನೆ ವಿರೋಧಿಸಿ ನಿನ್ನೆಯಿಂದ ಕೆಲಸ ಸ್ಥಗಿತಗೊಳಿಸಿರುವ ನೌಕರರು ಪ್ರತಿಭಟನೆ ನಡೆಸುತ್ತಿದ್ದಾರೆ. ನೌಕರರು ಕಾರ್ಖಾನೆ ಮುಂದೆ ಧರಣಿ ಆರಂಭಿಸಿದ್ದಾರೆ. ಬೆಳಿಗ್ಗೆ ಕಾರ್ಖಾನೆಗೆ ಹಾಜರಾಗುವ ನೌಕರರು, ಕೆಲಸಕ್ಕೆ ಹಾಜರಾಗದೇ ಸರ್ಕಾರಕ್ಕೆ ಪ್ರತಿಭಟನೆಯ ಚಾಟಿ ಬೀಸಿದ್ದಾರೆ.

ಕಾರ್ಖಾನೆಯ ಸುಮಾರು 700 ಹೊರ ಗುತ್ತಿಗೆ ನೌಕರರು, 75 ಖಾಯಂ ನೌಕರರು ಕೆಲಸಕ್ಕೆ ಗೈರಾಗಿದ್ದಾರೆ. ಆದರೆ ನಿವೃತ್ತರಾದ ನಂತರ ಹೊರ ಗುತ್ತಿಗೆಯಲ್ಲಿ ನೇಮಕಗೊಂಡಿರುವ ಸುಮಾರು 50 ನೌಕರರು ಮಾತ್ರ ಕೆಲಸ ಮಾಡುತ್ತಿದ್ದಾರೆ.

ನಿವೃತ್ತ ನೌಕರರು ಇದೇ ಕಾರ್ಖಾನೆಯಲ್ಲಿ ಸುಮಾರು 40 ವರ್ಷಗಳ ಕಾಲ ಕೆಲಸ ಮಾಡಿ ಬದುಕು ಕಟ್ಟಿಕೊಂಡಿದ್ದಾರೆ. ನಿವೃತ್ತಿ ನಂತರವೂ ಇಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಆದರೆ ಇಷ್ಟು ವರ್ಷಗಳ ಕಾಲ ತಮ್ಮ ಜೀವನಕ್ಕೆ ಆಸರೆಯಾಗಿದ್ದ ಕಾರ್ಖಾನೆಯನ್ನೇ ಮುಚ್ಚುವ ಸ್ಥಿತಿ ಬಂದಿದೆ ಎಂಬ ಕನಿಷ್ಠ ಕಳಕಳಿ ಕೂಡ ಇವರಿಗೆ ಇಲ್ಲ ಎಂದು ಪ್ರತಿಭಟನಾನಿರತ ಹೊರ ಗುತ್ತಿಗೆ ನೌಕರರು ಆಕ್ರೋಶ ವ್ಯಕ್ತಪಡಿಸಿದರು.

ನಾವು ನಿವೃತ್ತರಾಗಿದ್ದೇವೆ, ನಿವೃತ್ತಿ ನಂತರವೂ ಈಗ ಮಾಡುತ್ತಿರುವ ಕೆಲಸಕ್ಕೆ ವೇತನ ಬರುತ್ತಿದೆ ಒಂದು ವೇಳೆ ಕಾರ್ಖಾನೆಗೆ ಬೀಗ ಹಾಕಿದರೆ ನಮಗೇನು ನಷ್ಟವಿಲ್ಲ ಎಂಬ ಧೋರಣೆಯಲ್ಲಿ ನಿವೃತ್ತ ನೌಕರರು ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ರೇಷ್ಮೆ ಸೀರೆ ನೇಯ್ಗೆಗೂ ಮುನ್ನ ರೇಷ್ಮೆ ದಾರ ತಯಾರಿಕೆ, ಬಣ್ಣ ಹಾಕುವಿಕೆ ಸೇರಿದಂತೆ ಇತರೆ ಕೆಲಸಗಳನ್ನು ನಾವೇ ಮಾಡಬೇಕು. ಆದರೆ ಈಗ ನಾವು ಕೆಲಸಕ್ಕೆ ಗೈರಾಗಿ ಪ್ರತಿಭಟನೆ ನಡೆಸುತ್ತಿದ್ದೇವೆ. ಇದರಿಂದ ಈಗಿರುವ ಕಚ್ಚಾ ವಸ್ತುವಿನ ಸ್ಟಾಕ್ ನಲ್ಲಿ ಕೇವಲ ಒಂದೆರಡು ದಿನ ಮಾತ್ರ ಸಾಕಾಗುತ್ತದೆ. ತರುವಾಯ ಕಚ್ಚಾ ವಸ್ತುವಿನ ಸ್ಟಾಕ್ ಇಲ್ಲದೆ ನಿವೃತ್ತ ನೌಕರರು ಕೂಡ ಕೆಲಸ ನಿಲ್ಲಿಸುವ ಅನಿವಾರ್ಯತೆ ಎದುರಾಗುತ್ತದೆ. ತಾವು ಕೆಲಸ ಮಾಡುತ್ತೇವೆ ಎಂದರೂ ಅವರಿಗೆ ಸಾಧ್ಯವಾಗುವುದಿಲ್ಲ ಎಂದು ತಿರುಗೇಟು ನೀಡಿದರು.

ನಿವೃತ್ತ ನೌಕರರ ಸಂಖ್ಯೆ ಕೇವಲ 50 ಇದೆ, ಖಾಯಂ ನೌಕರರು ಸೇರಿದಂತೆ ನಾವು ಸುಮಾರು 700 ಜನರಿದ್ದೇವೆ. ನಮ್ಮ ಈ ಪ್ರತಿಭಟನೆಯಿಂದ ಸರ್ಕಾರ ಕ್ರೀಡಾಂಗಣ ಯೋಜನೆ ರದ್ದು ಮಾಡಬೇಕು. ಇಲ್ಲವೆಂದರೆ ನಮ್ಮ ಪ್ರತಿಭಟನೆ ತೀವ್ರ ಸ್ವರೂಪ ಪಡೆಯಲಿದೆ ಎಂದು ಹೊರ ಗುತ್ತಿಗೆ ನೌಕರರು ಸರ್ಕಾರವನ್ನು ಎಚ್ಚರಿಸಿದರು.

ಹೋರಾಟಕ್ಕೆ ಸುತ್ತೂರು ಶ್ರೀಗಳ ಬೆಂಬಲ ಕೋರಿಕೆ

● ಇದೇ ವೇಳೆ ಪ್ರತಿಭಟನಾನಿರತ ನೌಕರರು ಇಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಹೋರಾಟಕ್ಕೆ ಬೆಂಬಲ ನೀಡುವಂತೆ ಕೋರಿದರು.

● ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ವೇಳೆ ನೌಕರರು ಸ್ವಾಮೀಜಿ ಅವರನ್ನು ಭೇಟಿ ಮಾಡಿದರು.

● ಮಹಾರಾಜರಿಂದ ಸ್ಥಾಪನೆಗೊಂಡ ಕೆಎಸ್‌ಐಸಿ ಮುಚ್ಚುವ ಸ್ಥಿತಿ ಬಂದಿದೆ. ಈ ವೇಳೆ ನಮ್ಮ ಹೋರಾಟಕ್ಕೆ ನಿಮ್ಮ ಬೆಂಬಲ ಎಂದು ಮನವಿ ಮಾಡಿದರು.

● ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಈ ಬಗ್ಗೆ ಮಾತನಾಡುತ್ತೇನೆ ಎಂದು ಸ್ವಾಮೀಜಿ ಭರವಸೆ ನೀಡಿದರು ಎಂದು ನೌಕರರು ತಿಳಿಸಿದರು.

ಒಗ್ಗಟ್ಟಿನಲ್ಲಿ ಬಲವಿದೆ

ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಮಾತಿದೆ. ದೇಶ ಒಗ್ಗಟ್ಟಾದ ಹಿನ್ನೆಲೆಯಲ್ಲಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿದರು. ಹೀಗಿರುವಾಗ ನಾವೆಲ್ಲಾ ಕೆಲಸಕ್ಕೆ ಗೈರಾಗಿ ಉಗ್ರ ಪ್ರತಿಭಟನೆ ನಡೆಸಿದರೆ ಕ್ರೀಡಾಂಗಣ ಯೋಜನೆಯನ್ನು ಸರ್ಕಾರ ರದ್ದುಗೊಳಿಸಬಹುದು. ಆದರೆ ನಮ್ಮ ಹೋರಾಟಕ್ಕೆ ನಿವೃತ್ತ ನೌಕರರು ಕೈ ಜೋಡಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ರೇಷ್ಮೆ ಸೀರೆ ಸಿಗದೇ ಮಹಿಳೆಯರ ಬೇಸರ

ಮೈಸೂರು ಹಾಗೂ ತಿ.ನರಸೀಪುರದ ಕೆಎಸ್‌ಐಸಿ ನೌಕರರು ಕೆಲಸಕ್ಕೆ ಗೈರಾಗಿ ಪ್ರತಿಭಟನೆ ನಡೆಸುತ್ತಿರುವುದರಿಂದ ಸೀರೆ ಉತ್ಪಾದನೆ ಸ್ಥಗಿತಗೊಂಡಿದೆ. ಇದರಿಂದ ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿ ಶೋ ರೂಂಗೆ ಮೈಸೂರು ರೇಷ್ಮೆ ಸೀರೆ ಖರೀದಿಗೆ ಬರುತ್ತಿರುವ ಮಹಿಳೆಯರು ಬೇಸರದಲ್ಲೇ ವಾಪಸ್ಸಾಗುತ್ತಿದ್ದಾರೆ.

ಒಂದು ದಿನಕ್ಕೆ 350 ಸೀರೆ ಉತ್ಪಾದನೆ ಸಾಧ್ಯವಾಗುತ್ತದೆ. ಈ ಸೀರೆ ಖರೀದಿಗಾಗಿ ಮಹಿಳೆಯರು ಮುಂಜಾನೆಯಿಂದಲೇ ಕಾಯುತ್ತಾ ಕೂರುತ್ತಾರೆ. ಆದರೆ ಈಗ ನೌಕರರ ಪ್ರತಿಭಟನೆಯಿಂದ ರೇಷ್ಮೆ ಸೀರೆ ತಯಾರಿಕೆ ಸಂಪೂರ್ಣ ಸ್ಥಗಿತಗೊಂಡಿದೆ.

ಇದರಿಂದ ಮೈಸೂರು ರೇಷ್ಮೆ ಸೀರೆ ಸಿಗದೆ ಮಹಿಳೆಯರು ಬೇಸರಗೊಂಡಿದ್ದಾರೆ. ಕಾರ್ಖಾನೆಯ ಶೋ ರೂಂಗೆ ಬರುತ್ತಿರುವ ಮಹಿಳೆಯರು ಸೀರೆ ಇಲ್ಲ ಎಂಬ ಉತ್ತರ ಕೇಳಿ ಬೇಸರದಿಂದ ವಾಪಸ್ಸಾಗುತ್ತಿದ್ದಾರೆ.

ಸರ್ಕಾರದ ಮೊಂಡುತನಕ್ಕೆ ವ್ಯಾಪಕ ಆಕ್ರೋಶ

ತಿ.ನರಸೀಪುರದ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ ತೀವ್ರ ಸ್ವರೂಪ ಪಡೆಯುತ್ತಿದ್ದರೂ ಸರ್ಕಾರ ಮಾತ್ರ ಯಾವುದೇ ಪ್ರತಿಕ್ರಿಯೆ ನೀಡದೆ ಜಾಣ ಮೌನ ವಹಿಸಿದೆ.

ತಿ.ನರಸೀಪುರ ಹಾಗೂ ಮೈಸೂರು ಕಾರ್ಖಾನೆಯ ನೌಕರರು ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇದರಿಂದ ಭಾರೀ ಬೇಡಿಕೆ ಇರುವ ಮೈಸೂರು ರೇಷ್ಮೆ ಸೀರೆ ತಯಾರಿಕೆ ಸಂಪೂರ್ಣ ಸ್ಥಗಿತಗೊಂಡಿದೆ.

ನೌಕರರ ಹೋರಾಟಕ್ಕೆ ಪರಿಸರವಾದಿಗಳೂ ಸೇರಿದಂತೆ ನಾನಾ ಸಂಘಟನೆಗಳಿಂದ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ. ಹಾಗೆಯೇ ಸರ್ಕಾರದ ಮೊಂಡುತನಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ.

ಪರಿಸರ ಉಳಿಸಿ ಎಂದು ಪ್ರಚಾರಕ್ಕಾಗಿಯೇ ಲಕ್ಷಾಂತರ ರೂಪಾಯಿ ವೆಚ್ಚ ಮಾಡುವ ಸರ್ಕಾರ ತಾನೆ ನೂರಾರು ಮರಗಳಿಗೆ ಕೊಡಲಿ ಪೆಟ್ಟು ನೀಡಿ, ಪರಿಸರ ನಾಶ ಮಾಡುತ್ತಿರುವುದಕ್ಕೆ ಜನರು ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಇಷ್ಟಾದರೂ ಸರ್ಕಾರ ಮಾತ್ರ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ, ನಿನ್ನೆ ಸಂಸದ ಯದುವೀರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರೂ ಯಾವುದೇ ಭರವಸೆ ನೀಡಿಲ್ಲ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ –1 ಪ್ರದರ್ಶನ (ಕ), ಫೋರ್ತ್ ಫ್ಲೋರ್–3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಯಗ್ರೀವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ವೀರ ಕಂಬಳ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸೂರಿ ಅಣ್ಣ (ಕ)	4 ಪ್ರದರ್ಶನಗಳು

ವಿಜಯನಗರ ಪೊಲೀಸರಿಂದ ಸರಗಳ್ಳನ ಬಂಧನ

ಮೈಸೂರು,ಫೆ.26(ಪಿಎಂ)– ಸರಗಳ್ಳನೊಬ್ಬನ್ನು ಬಂಧಿಸುವಲ್ಲಿ ವಿಜಯನಗರ ಪೊಲೀಸರು ಯಶಸ್ವಿಯಾಗಿದ್ದಾರೆ.

ದೆಹಲಿ ಮೂಲದ ಶೇರ್ ಖಾನ್ (38) ಬಂಧಿತ ಆರೋಪಿ. ಮೈಸೂರಿನ ಕುವೆಂಪುನಗರದಲ್ಲಿ ವಾಸವಾಗಿದ್ದ ಈತ 2024ರಲ್ಲಿ ಮಹಿಳೆಯೊಬ್ಬರ ಚಿನ್ನದ ಸರ ಕಸಿದು ಪರಾರಿಯಾಗಿದ್ದ.

ಬೈಕಿನ ನಂಬರ್ ಪ್ಲೇಟ್ ಬದಲಿಸಿಕೊಂಡು ಸುತ್ತಾಡುತ್ತಿದ್ದ ಈತನನ್ನು ಮೊನ್ನೆ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ವಿಜಯನಗರ ಪೊಲೀಸರು ತಿಳಿಸಿದರು.

2024ರ ಸೆ.25ರಂದು ಮಧ್ಯಾಹ್ನ ಹಿನಕಲ್ ನಿವಾಸಿ ಶ್ರೀವಲ್ಲಿ ಎಂಬುವರು ಕೆಲಸ ಮುಗಿಸಿ ಸಿಟಿ ಬಸ್‌ನಲ್ಲಿ ಸಂಕ್ರಾಂತಿ ಸರ್ಕಲ್ ಹತ್ತಿರ ಬಂದು, ಬಸ್ ಇಳಿದು ಹಿನಕಲ್‌ಗೆ ಹೋಗುವ ಸಲುವಾಗಿ ವಿಜಯನಗರ 2ನೇ ಹಂತದ ಹೊಯ್ಸಳ ಸರ್ಕಲ್ ಹತ್ತಿರ ನಡೆದುಕೊಂಡು ಹೋಗುವಾಗ ಈತ ತನ್ನ ಕೈಚಳಕ ತೋರಿದ್ದ.

ಬೈಕ್‌ನಲ್ಲಿ ತನ್ನ ಸಹಚರನೊಂದಿಗೆ ಬಂದು ಶ್ರೀವಲ್ಲಿ ಅವರ ಕುತ್ತಿಗೆಯಲ್ಲಿದ್ದ 90 ಸಾವಿರ ಬೆಲೆ ಬಾಳುವ (ಅಂದು) ಸುಮಾರು 30 ಗ್ರಾಂನ ಚಿನ್ನದ ಸರವನ್ನು ಕಸಿದುಕೊಂಡು ಪರಾರಿಯಾಗಿದ್ದ. ಈ ಸಂಬಂಧ ಶ್ರೀವಲ್ಲಿ ಅವರು ನೀಡಿದ ದೂರಿನನ್ವಯ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪೊಲೀಸ್ ಕಣ್ತಪ್ಪಿಸಿಕೊಂಡು ತಿರುಗುತ್ತಿದ್ದ ಈತ ಇದೀಗ ಸಿಕ್ಕಿ ಬಿದಿದ್ದಾನೆ.

ಎಪಿಎಂಸಿ ಮಳಿಗೆದಾರರೊಬ್ಬರಿಗೆ ವಂಚನೆ ; ಅಪ್ಪ ಮಗನ ವಿರುದ್ಧ ಪ್ರಕರಣ ದಾಖಲು

ಮೈಸೂರು,ಫೆ.26(ಪಿಎಂ)– ಬಂಡಿಪಾಳ್ಯದ ಎಪಿಎಂಸಿಯ ಹೋಲ್‌ಸೇಲ್ ಮಳಿಗೆದಾರರೊಬ್ಬರು ತಮಗೆ ವಂಚನೆಯಾಗಿದೆ ಎಂದು ಆರೋಪಿಸಿ ನೀಡಿದ ದೂರಿನನ್ವಯ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಗವಾನ್ ರಾಮ್ ಮತ್ತು ಆತನ ತಂದೆ ಕಾಲುರಾಮ್ ಎಂಬುವರ ವಿರುದ್ಧ ಮಳಿಗೆದಾರ ಆರ್.ನಿಹಾಲ್ ದೂರು ನೀಡಿದ್ದಾರೆ. ವ್ಯಾಪಾರದಲ್ಲಿ ಭಗವಾನ್ ರಾಮ್ ಮತ್ತು ಆತನ ತಂದೆ ಕಾಲುರಾಮ್ ಪರಿಚಯವಿದ್ದು, ಇವರು ಸಾಮಗ್ರಿಗಳನ್ನು ಕೊಡಿಸುವುದಾಗಿ ಒಮ್ಮೆ 7,95,000 ರೂ. ಹಾಗೂ ಮತ್ತೊಮ್ಮೆ 5 ಲಕ್ಷ ರೂ. ಮತ್ತು 3ನೇ ಬಾರಿಗೆ 5 ಲಕ್ಷ ರೂ. ಅನ್ನು ತಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂದು ನಿಹಾಲ್ ದೂರಿನಲ್ಲಿ ಆರೋಪಿಸಿದ್ದಾರೆ.

ಅಲ್ಲದೆ, ಭಗವಾನ್ ರಾಮ್ ಅವರು ನನ್ನಿಂದ ಹಂತ ಹಂತವಾಗಿ 12,12,483 ರೂ. ಮೌಲ್ಯದ ಸಾಮಗ್ರಿ ಖರೀದಿಸಿ ಹಣ ನೀಡದೇ ಸತಾಯಿಸುತ್ತಿದ್ದಾರೆ. ಈ ಇಬ್ಬರು ನನಗೆ ಒಟ್ಟು 25,07,483 ರೂ. ಅನ್ನು ವಂಚಿಸಿದ್ದಾರೆ ಎಂದು ಆರೋಪಿಸಿ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ.

ಶಿಥಿಲವಾಗಿದ್ದ ಮೇಲ್ಛಾವಣಿಯ ಕೆಲ ಭಾಗ ಕುಸಿದು ಶಿಕ್ಷಕಿಗೆ ತೀವ್ರ ಗಾಯ

ಕನಕಗಿರಿಯ ಶಾರದಾ ವಿಲಾಸ ಸರ್ಕಾರಿ ಶಾಲೆಯಲ್ಲಿ ಘಟನೆ

ಮೈಸೂರು,ಫೆ.26(ಪಿಎಂ)– ಮೈಸೂರಿನ ಕನಕಗಿರಿಯ ಶಾರದಾ ವಿಲಾಸ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಯಲ್ಲಿ ಶಿಥಿಲವಾಗಿದ್ದ ಮೇಲ್ಛಾವಣಿಯ ಕೆಲ ಭಾಗ ಕುಸಿದು ಶಾಲೆಯ ಸಹ ಶಿಕ್ಷಕಿಯ ತಲೆಗೆ ಗಂಭೀರವಾಗಿ ಗಾಯವಾಗಿರುವ ಘಟನೆ ಗುರುವಾರ ಸಂಭವಿಸಿದೆ.

ಶಾಲೆಯ ಸಹ ಶಿಕ್ಷಕಿ ಸೌಮ್ಯ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 3ನೇ ತರಗತಿ ಮಕ್ಕಳಿಗೆ ಪಾಠ ಮಾಡುತ್ತಿದ್ದಾಗ ಈ ಘಟನೆ ನಡೆದಿದೆ. ಸದರಿ ತರಗತಿಯ ಕೊಠಡಿಯಲ್ಲಿ ಮೇಲ್ಛಾವಣಿ ಕುಸಿಯುವ ವೇಳೆ ಶಿಕ್ಷಕಿ ತಕ್ಷಣವೇ ವಿದ್ಯಾರ್ಥಿಗಳನ್ನು ಸುರಕ್ಷಿತ ಭಾಗಕ್ಕೆ ತಳ್ಳಿದ್ದು, ಇದರಿಂದ ಮಕ್ಕಳು ಅಪಾಯದಿಂದ ಪಾರಾಗಿದ್ದಾರೆ. ಆದರೆ ಸೌಮ್ಯ ಅಪಾಯಕ್ಕೆ ಸಿಲುಕಿ ಗಾಯಗೊಂಡಿದ್ದಾರೆ.

ಶಾಲೆಯಲ್ಲಿ ನೂತನ ಕಟ್ಟಡದ ವ್ಯವಸ್ಥೆ ಇದ್ದರೂ ಮುಖ್ಯ ಶಿಕ್ಷಕಿ ಜಯಲಕ್ಷ್ಮಿ ಹಳೆಯ ಕಟ್ಟಡದಲ್ಲಿ ಪಾಠ ಮಾಡಿಸುತ್ತಿದ್ದುದು ಏಕೆ? ಇಲ್ಲಿ ಶಾಲೆಯ ಮುಖ್ಯ ಶಿಕ್ಷಕರ ಬೇಜವಾಬ್ದಾರಿ ಎದ್ದು ಕಾಣುತ್ತದೆ ಎಂದು ವಿದ್ಯಾರ್ಥಿಗಳು, ಪೋಷಕರು ಹಾಗೂ ಸ್ಥಳೀಯ ಸಾರ್ವಜನಿಕರು ಆರೋಪಿಸಿದ್ದು, ಬಿಇಓ ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದೂ ಆಗ್ರಹಿಸಿದ್ದಾರೆ.

5.82 ಕೋಟಿ ರೂ. ವೆಚ್ಚದ ಕಾಮಗಾರಿಗೆ

ಇಂದು ಮಂಚೇಗೌಡನಕೊಪ್ಪಲಿನಲ್ಲಿ ಶಾಸಕ ಕೆ.ಹರೀಶ್‌ಗೌಡರಿಂದ ಗುದ್ದಲಿ ಪೂಜೆ

ಮೈಸೂರು,ಫೆ.26(ಪಿಎಂ)– ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿಎಂಐಡಿಪಿ) ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ 50 ಕೋಟಿ ರೂ. ಅನುದಾನದಡಿ ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 5ರ ವಾರ್ಡ್ 2ರ ಮಂಚೇಗೌಡನ ಕೊಪ್ಪಲು ವ್ಯಾಪ್ತಿಯಲ್ಲಿ ಅಂದಾಜು 5.82 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಫೆ.27ರಂದು ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ.


ಹರೀಶ್‌ಗೌಡ

ಅಂದು ಬೆಳಗ್ಗೆ 9ಕ್ಕೆ ಮಂಚೇಗೌಡನ ಕೊಪ್ಪಲು ಆಟದ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ. ಮಂಚೇಗೌಡನ ಕೊಪ್ಪಲು ವ್ಯಾಪ್ತಿಯಲ್ಲಿ ಮಹಾಜನ ಲೇಔಟ್ ಬಡಾವಣೆಯ ಅಡ್ಡ ರಸ್ತೆಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಕಟ್ಟೆಹೊಸೂರಿನ ದೊಡ್ಡ ಮಳೆನೀರು ಚರಂಡಿಯ ಪಕ್ಕದ ಅಡ್ಡ ರಸ್ತೆಗಳ ಮತ್ತು ಅರಳಿ ಮರದ ಪಕ್ಕದ ರಸ್ತೆಯ ರಸ್ತೆ ಮತ್ತು ಚರಂಡಿ, ಡೆಕ್ ಅಭಿವೃದ್ಧಿ ಹಾಗೂ ಮಂಚೇಗೌಡನಕೊಪ್ಪಲಿನ ಸರ್ಕಾರಿ ಕಾಲೇಜು ಹಿಂಭಾಗದ ಅಡ್ಡ ರಸ್ತೆಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ.

ಅಲ್ಲದೆ, ಮಂಚೇಗೌಡನಕೊಪ್ಪಲು ಗ್ರಾಮದ ಅಡ್ಡ ರಸ್ತೆಗಳ ಹಾಗೂ ಮಾರಿಗುಡಿ ಬೀದಿಯ ಅಡ್ಡ ರಸ್ತೆಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಎಲ್ಲಮ್ಮ ತಾಯಿ ದೇವಸ್ಥಾನದ ಅಡ್ಡ ರಸ್ತೆಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಹೆಬ್ಬಾಳು 2ನೇ ಹಂತದ ಅಡ್ಡ ರಸ್ತೆಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ನಡೆಯಲಿದೆ.

ಜೊತೆಗೆ ಮಂಚೇಗೌಡನಕೊಪ್ಪಲು ವ್ಯಾಪ್ತಿಯಲ್ಲಿ ಯು.ಜಿ.ಡಿ. ಕಾಮಗಾರಿಯು ಮಾವಿನ ತೋಪಿನ ಹತ್ತಿರದ ರಸ್ತೆಯಿಂದ ಸೌದೇ ಡಿಪೋ ಮುಖಾಂತರ ಹೆಬ್ಬಾಳ್ ಮುಖ್ಯ ರಸ್ತೆಯ ವರೆಗೆ ನಡೆಯಲಿದೆ. ಅಲ್ಲದೆ, ಮಂಚೇಗೌಡನಕೊಪ್ಪಲಿನ ಸರ್ಕಾರಿ ಶಾಲೆ ಹಿಂಭಾಗದ ಅಡ್ಡ ರಸ್ತೆಗಳಲ್ಲಿ ಒಳಚರಂಡಿ ಕೊಳವೆಮಾರ್ಗ ಅಳವಡಿಸಿ ಯಂತ್ರಗುಂಡಿಗಳನ್ನು ನಿರ್ಮಿಸುವ ಕಾಮಗಾರಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.1, ವಿಶೇಷಚೇತನರ ಕ್ರೀಡಾಕೂಟ ಬಾಂಧವ್ಯ–2026

ಮೈಸೂರು,ಫೆ.26(ಜಿಎ)–ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಮಾ.1ರಂದು ಓವೆಲ್ ಮೈದಾನದಲ್ಲಿ ವಿಶೇಷ ಕ್ರೀಡಾಕೂಟ ಬಾಂಧವ್ಯ–2026 ಆಯೋಜಿಸಲಾಗಿದೆ ಎಂದು ಅಧ್ಯಕ್ಷ ರಾಕೇಶ್ ಬಾಬು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರೀಡಾಕೂಟಕ್ಕೆ ಮೈಸೂರಿನ 23 ವಿಶೇಷ ಚೇತನ ಶಾಲೆಗಳಿಗೆ ಆಹ್ವಾನ ನೀಡಲಾಗಿದ್ದು, ಕ್ರೀಡಾಕೂಟದಲ್ಲಿ ಸುಮಾರು 500 ವಿಶೇಷ ಮಕ್ಕಳು, 300 ಮಂದಿ ಪೋಷಕರು ಹಾಗೂ 125 ಮಂದಿ ಶಿಕ್ಷಕರು ಭಾಗವಹಿಸು ವರು. 8 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗಾಗಿ ವಿಶೇಷ ಆಟೋಟ ಸ್ಪರ್ಧೆ ಆಯೋಜಿಸಲಾಗಿದೆ 8 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳಿಗಾಗಿ ಓಟ, ಲಾಂಗ್‌ಜಂಪ್, ಶಾಟ್‌ಪುಟ್, ಥ್ರೋ ಮತ್ತು ಟೆನ್ನಿಸ್‌ಬಾಲ್‌ಥ್ರೋ ಮೊದಲಾದ ವಿವಿಧ ಕ್ರೀಡಾಸ್ಪರ್ಧೆಗಳು ನಡೆಯಲಿವೆ ಎಂದರು.

ವಿಜೇತರಿಗೆ ಪ್ರಶಸ್ತಿಗಳನ್ನು ನೀಡಲಾಗುವುದು ಹಾಗೂ ವಿಜೇತ ತಂಡಗಳಿಗೆ ಟ್ರೋಫಿ ನೀಡಲಾಗುವುದು. ಪಾಲ್ಗೊಂಡ ಎಲ್ಲಾ ಮಕ್ಕಳಿಗೂ ಆಕರ್ಷಕ ಉಡುಗೊರೆ ನೀಡಲಾಗುವುದು. ಅಂದು ಬೆಳಿಗ್ಗೆ 9 ಗಂಟೆಗೆ ರೋಟರಿ ಸಂಸ್ಥೆಯ ರವಿಶಂಕರ್ ದಾಕೋಜು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಕ್ರೀಡಾ ಕೂಟಕ್ಕೆ ಚಾಲನೆ ನೀಡುವರು. ವಲಯ 7ರ ಸಹಾಯಕ ಗವರ್ನರ್ ನವೀನ್‌ಚಂದ್ರ ಪಾಲ್ಗೊಳ್ಳುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಕೆ.ವಿ.ಭಾಸ್ಕರ್, ಹೆಚ್.ಎಸ್.ವೀರೇಶ್ ಇದ್ದರು.

ನಾಳೆಯಿಂದ ಖೇಡಾ ವೇದವ್ಯಾಸಾಚಾರರಿಂದ ರುಕ್ಮೀಶ ವಿಜಯ ಪ್ರವಚನ

ಮೈಸೂರು, ಫೆ.26– ನಗರದ ಜಯಲಕ್ಷ್ಮೀಪುರಂನ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ಫೆ.28ರಿಂದ ಮಾರ್ಚ್ 6ರವರೆಗೆ ಪ್ರತಿದಿನ ಸಂಜೆ 5 ಗಂಟೆಗೆ ವಿದ್ವಾನ್ ಖೇಡಾ ವೇದವ್ಯಾಸಾಚಾರ್ ಅವರಿಂದ ರುಕ್ಮೀಶ ವಿಜಯ ಪ್ರವಚನವನ್ನು ಏರ್ಪಡಿಸಲಾಗಿದ್ದು, ಆಸಕ್ತರು ಭಾಗವಹಿಸುವಂತೆ ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.



ಕಾರಂಜಿ ಕೆರೆ ಅಭಿವೃದ್ಧಿ ಸಂಬಂಧ ಎಂಎಲ್‌ಸಿ ಡಾ.ಯತೀಂದ್ರ ಪರಿಶೀಲನೆ

● ಜಿಲ್ಲಾಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ● ಅಂದಾಜು ಪಟ್ಟಿ ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚನೆ

ಮೈಸೂರು,ಫೆ.26(ಎಲ್‌ಎನ್‌ವೈ/ಪಿಎಂ)– ಮೈಸೂರು ಮೃಗಾಲಯ ಅಧೀನದ ಕಾರಂಜಿ ಕೆರೆ ಅಭಿವೃದ್ಧಿಗೊಳಿಸುವ ಸಂಬಂಧ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅವರೊಂದಿಗೆ ಗುರುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಮೈಸೂರಿನ ಕಾರಂಜಿ ಕೆರೆ ಅಭಿವೃದ್ಧಿಗೊಳಿಸುವ ಸಂಬಂಧ ಎಂಎಲ್‌ಸಿ ಡಾ.ಯತೀಂದ್ರ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ಕೆರೆ ವಸ್ತುಸ್ಥಿತಿ ಕುರಿತು ಪರಿಶೀಲಿಸಿದ ಪರಿಷತ್ ಸದಸ್ಯರು, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಹಾಡ್ಯ ರಂಗಸ್ವಾಮಿ ಹಾಗೂ ಮೈಸೂರು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಅನುಷಾ ಅವರಿಂದ ಕೆರೆ ಅಭಿವೃದ್ಧಿಗೆ ಆಗಬೇಕಿರುವ ಕಾರ್ಯಗಳ ಬಗ್ಗೆ ಮಾಹಿತಿ ಪಡೆದರು.


ಈ ಸಂಬಂಧ ಮಾಧ್ಯಮದವರಿಗೆ ಮಾಹಿತಿ ನೀಡಿದ ಕಾರ್ಯನಿರ್ವಾಹಕ ನಿರ್ದೇಶಕಿ ಅನುಷಾ, ಕೆರೆಗೆ ಕೊಳಚೆ ನೀರು ಸೇರಿ ಮೀನು ಹಾಗೂ ಪಕ್ಷಿಗಳಿಗೆ ತೊಂದರೆ ಆಗುತ್ತಿದೆ. ಹಾಗಾಗಿ ಶುದ್ಧೀಕರಿಸಬೇಕಾಗುತ್ತದೆ. ಕೆರೆ ಅಭಿವೃದ್ಧಿಗೆ ಸುಮಾರು 10 ಕೋಟಿ ಅಗತ್ಯವಾಗಬಹುದು. ಕೊಳಚೆ ನೀರು ತಡೆಗಟ್ಟಲು ಮೈಸೂರು ಮಹಾನಗರ ಪಾಲಿಕೆಯಿಂದ ಅಂದಾಜು ಪಟ್ಟಿ ಸಿದ್ಧಪಡಿಸಬೇಕಾಗುತ್ತದೆ. ಈ ವಿಚಾರವಾಗಿ ಪಾಲಿಕೆಗೂ ನಾವು ಮನವಿ ಮಾಡಿದ್ದೇವೆ. ಯಾವುದಾದರೂ ಒಂದು ಯೋಜನೆಯಡಿ ಕ್ರಮ ವಹಿಸುವ ಭರವಸೆಯನ್ನು ಪಾಲಿಕೆಯು ನೀಡಿದೆ. ಲೈನ್ ಎಸ್ಟಿಮೇಟ್ ಸಿದ್ಧಪಡಿಸಿ ನೀಡುವಂತೆ ಇದೀಗ ಪರಿಷತ್ ಸದಸ್ಯರು ಸೂಚಿಸಿದ್ದು, ಅದರಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಕಾರಂಜಿ ಕೆರೆಗೆ ಕೊಳಚೆ ನೀರು ಸೇರುತ್ತಿರುವ ಪರಿಣಾಮ ನೀರು ದುರ್ವಾಸನೆ ಸೂಸುತ್ತಿದೆ. ಅಲ್ಲದೆ, ಇದರಿಂದ ಮೀನುಗಳಿಗೆ ಅಪಾಯಕಾರಿಯಾಗಿದೆ. ಬೋಟ್‌ನಲ್ಲಿ ಹೋಗುವ ಪ್ರವಾಸಿಗರಿಗೆ ಕಿರಿಕಿರಿಯೂ ಆಗುತ್ತಿದೆ. ಹಾಗಾಗಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪರಿಶೀಲಿಸಿ ಸರ್ಕಾರದ ಅನುದಾನದಡಿ ಪರಿಹಾರ ಯೋಜನೆ ಕೈಗೊಳ್ಳಲು ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೆವು. ಒಮ್ಮೆ ಸ್ಥಳಕ್ಕೆ ಭೇಟಿ ನೀಡುವಂತೆ ಕೋರಿದ್ದೆವು. ಈ ಹಿನ್ನೆಲೆಯಲ್ಲಿ ಅವರು ಇಂದು ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಅಂದಾಜು ಪಟ್ಟಿ ಸಿದ್ಧಪಡಿಸುವಂತೆ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ. ನಾಳೆ–ನಾಳಿದ್ದರಲ್ಲಿ ಅಂದಾಜು ಪಟ್ಟಿ ಸಿದ್ಧಪಡಿಸಲಾಗುತ್ತದೆ ಎಂದು ತಿಳಿಸಿದರು.

ಜಿಂಬಾಬ್ವೆ ವಿರುದ್ಧ ಗೆದ್ದ ಭಾರತ; ಸೆಮಿಸ್ ಕನಸು ಇನ್ನು ಜೀವಂತ

ಚೆನ್ನೈ, ಫೆ.26(ವಿವಿಹೆಚ್)– ಜಿಂಬಾಬ್ವೆ ಆರಂಭಿಕ ಬ್ಯಾಟರ್ ಬ್ರಿಯಾನ್ ಬೆನೆಟ್ ಹಾಗೂ ನಾಯಕ ಸಿಕಂದರ್ ರಾಜಾ ಅವರ ಅಮೋಘ ಜೊತೆಯಾಟದ ಹೊರತಾಗಿಯೂ ಟೀಂ ಇಂಡಿಯಾ ವಿರುದ್ಧ 72 ರನ್ ಗಳಿಂದ ಸೋತ ಜಿಂಬಾಬ್ವೆ ಟೂರ್ನಿಯಿಂದ ಹೊರ ಬಿದ್ದಿದೆ. ಇತ್ತ ಜಿಂಬಾಬ್ವೆ ಮಣಿಸುವ ಮೂಲಕ ಭಾರತ ತನ್ನ ಸೆಮಿಸ್ ಕನಸನ್ನು ಇನ್ನೂ ಜೀವಂತವಾಗಿರಿಸಿಕೊಂಡಿದೆ.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಸಿಸಿ ಪುರುಷರ ಟಿ ಟ್ವೆಂಟಿ ವಿಶ್ವಕಪ್ 2026ರ ಸೂಪರ್–8 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 256 ರನ್ ಕಲೆಹಾಕಿತು. ಈ ಬೃಹತ್ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಜಿಂಬಾಬ್ವೆ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿ ಸೋಲಿಗೆ ಶರಣಾಯಿತು.



ಮೊದಲು ಬ್ಯಾಟ್ ಮಾಡಿದ ಭಾರತದಿಂದ ಬೌಂಡರಿ, ಸಿಕ್ಸರ್ ಹೊಳೆ ಪಂದ್ಯದುದ್ದಕ್ಕೂ ಹರಿದುಬಂದಿತು. ಫಾರ್ಮ್ ಕಳೆದುಕೊಂಡಿದ್ದ ಅಭಿಷೇಕ್ ಶರ್ಮಾ ಸಹ ಈ ಇನ್ನಿಂಗ್ಸ್‌ನಲ್ಲಿ ಭರ್ಜರಿ ಆಟ ಆಡಿದರು. ಇನ್ನು ಟೂರ್ನಿಯುದ್ದಕ್ಕೂ ಕಳಪೆ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದ್ದ ತಿಲಕ್ ವರ್ಮಾ ಸಹ ಅಬ್ಬರಿಸಿದರು. ಸಂಜು ಸ್ಯಾಮ್ಸನ್ 24 (15) ರನ್ ಗಳಿಸಿದರೆ, ಅಭಿಷೇಕ್ ಶರ್ಮಾ 55(30), ಇಶಾನ್ ಕಿಶನ್ 38 (24), ಸೂರ್ಯಕುಮಾರ್ ಯಾದವ್ 33 (13), ಹಾರ್ದಿಕ್ ಪಾಂಡ್ಯ ಅಜೇಯ 50 (23) ರನ್ ಹಾಗೂ ತಿಲಕ್ ವರ್ಮಾ ಅಜೇಯ 44 (16) ರನ್ ಬಾರಿಸಿದರು.

ಜಿಂಬಾಬ್ವೆಪರ ಸಿಕಂದರ್ ರಾಜಾ, ಮಪೋಸಾ, ಮುಜರ್‌ಬಾನಿ ಹಾಗೂ ಎನ್‌ಗವಾರಾ ತಲಾ ಒಂದೊಂದು ವಿಕೆಟ್ ಪಡೆದರು.

ಈ ಬೃಹತ್ ಮೊತ್ತ ಬೆನ್ನತ್ತಿದ ಜಿಂಬಾಬ್ವೆ ತಂಡಕ್ಕೆ ಬ್ರಿಯಾನ್ ಬೆನೆಟ್ ಆಸರೆಯಾದರು. 59 ಎಸೆತಗಳಲ್ಲಿ 8 ಫೋರ್ಸ್ ಹಾಗೂ 6 ಸಿಕ್ಸರ್ ಸಹಿತ ಅಜೇಯ 97ರನ್ ಗಳಿಸಿಯೂ ತಂಡವನ್ನು ಗೆಲ್ಲಿಸಿಕೊಡಲು ಸಾಧ್ಯವಾಗಲಿಲ್ಲ. ನಾಯಕ ಸಿಕಂದರ್ ರಾಜಾ 21 ಎಸೆತಗಳಲ್ಲಿ 31, ಮರುಮಾನಿ 20ರನ್ ಹೊರತಾಗಿ ಬೇರ್‍ಯಾರು ಉತ್ತಮ ಇನ್ನಿಂಗ್ಸ್ ಕಟ್ಟದ ಕಾರಣ ಜಿಂಬಾಬ್ವೆ ಸೋಲೊಪ್ಪಿಕೊಂಡಿತು. ಟೀಂ ಇಂಡಿಯಾ ಪರ ಅರ್ಶ್‌ದೀಪ್ ಸಿಂಗ್ 3 ವಿಕೆಟ್, ಶಿವಂ ದುಬೆ, ಅಕ್ಷರ್ ಪಟೇಲ್ ಹಾಗೂ ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಪಡೆದರು. ಹಾರ್ದಿಕ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಟೀಂ ಇಂಡಿಯಾ ಸೆಮಿಸ್ ಲೆಕ್ಕಾಚಾರ

ಭಾರತ ಮತ್ತು ವೆಸ್ಟ್ ಇಂಡೀಸ್ ನಡುವೆ ಕೋಲ್ಕೊತ್ತಾದ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುವ ಪಂದ್ಯ ನಿರ್ಣಾಯಕ. ಈ ಪಂದ್ಯದಲ್ಲಿ ಗೆಲುವು ದಾಖಲಿಸುವ ತಂಡವು ನೇರವಾಗಿ ಸೆಮಿಸ್‌ಗೆ ಅರ್ಹತೆ ಪಡೆದರೆ, ಸೋಲು ತಂಡ ಟೂರ್ನಿಯಿಂದ ಹೊರಬೀಳಲಿದೆ.


ಬೂಕನಕೆರೆಯ ಮಡಿಲ ಮಗುವಾಗಿ
ಶಿಕಾರಿಪುರದ ಮನೆಯ ಮಗನಾಗಿ
ಬಡವರ ದನಿಯಾಗಿ, ರೈತರಿಗೆ ಹೆಗಲಾಗಿ
ಸ್ವಯಂ ಸೇವಕನಾಗಿ, ಸಂಘಟನಾ ಶಿಲ್ಪಿಯಾಗಿ
ನೀವಿಟ್ಟ ಹೆಜ್ಜೆಗಳು
ಸಾರ್ಥಕ ಜೀವನದ
ಅರಳಿದ ಕಮಲಗಳು....
ನೀವೆಂದರೆ ಶಿಸ್ತು–ಸಂಯಮ,
ನೀವೆಂದರೆ ಪರಿಶ್ರಮ–ಶ್ರದ್ಧೆ
ನೀವೆಂದರೆ ಹೋರಾಟ–ಛಲ
ನೀವೆಂದರೆ ತ್ಯಾಗ–ಸಮರ್ಪಣೆ
ನೀವೆಂದರೆ ಮಾತೃ ಮಮತೆ
ನೀವೆಂದರೆ ಆದರ್ಶ ನಮಗೆ
ನಿಮ್ಮ ಜನ್ಮದಿನವೆಂದರೆ
ಜನಪರ ದಿನ, ರೈತಪರ ದಿನ
ಶುಭಾಶಯಗಳ ಸಮರ್ಪಣೆ ನಿಮಗೆ
ನಿಮ್ಮ ಪ್ರೀತಿ, ಆಶೀರ್ವಾದಗಳು "ಶ್ರೀರಕ್ಷೆ" ನಮಗೆ
ಶ್ರೀ ಬಿ.ವೈ.ರಾಘವೇಂದ್ರ
ಸಂಸದರು ಶಿವಮೊಗ್ಗ
ಶ್ರೀ ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ
ಶಿಕಾರಿಪುರ ಶಾಸಕರು
ಜನಪ್ರಿಯ ಮಾಜಿ ಮುಖ್ಯಮಂತ್ರಿಗಳು ಹಾಗೂ
ಕೇಂದ್ರ ಬಿಜೆಪಿ ಸಂಸದೀಯ ಮಂಡಳಿ
ಹಾಗೂ ಚುನಾವಣಾ ಸಮಿತಿ ಸದಸ್ಯರಾದ ಸನ್ಮಾನ್ಯ
ಶ್ರೀ ಬಿ.ಎಸ್.ಯಡಿಯೂರಪ್ಪ
ಅವರಿಗೆ
ಜನ್ಮದಿನದ ಶುಭಾಶಯಗಳು
ಶುಭ ಕೋರುವವರು ಯಡಿಯೂರಪ್ಪನವರ ಅಭಿಮಾನಿಗಳ ಬಳಗ